ನೋಂದಣಿ ಸಂಖ್ಯೆ: KRSBFS-005&

ಸಿಗ-ಗೊಲ ಹಾಡುಗಳು ಒಂದು ಧ್ಯಯನ

(ಕ.ರಾ.ಶಿ. ಸಂಸ್ಥೆ ಸ್ನಾತಕೋತ್ತರ ಕನ್ನಡ ಸಂಶೋಧನ ಕೇಂದ್ರ ಬೀದರ ಇವರಿಗೆ
ಎಂ.ಫಿಲ್. ಅಂಶಿಕ ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ)

ಸಂಶೋಧಕರು
ಪ್ರಮೀಳಾ ಶರಣಪ್ಪಾ ಹೊನ್ನಾಳೆ

ಮಾರ್ಗದರ್ಶಕರು
ಡಾ. ಜಗನ್ನಾಥ ಹೆಬ್ಬಾಳೆ
ನಿರ್ದೇಶಕರು
ಕ.ರಾ.ಶಿ. ಸಂಸ್ಥೆಯ
ಸ್ನಾತಕೋತ್ತರ ಕನ್ನಡ ಸಂಶೋಧನ ಕೇಂದ್ರ ಬೀದರ

1042

ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ಪಿನ್ ೫೮೫೨೨೬
ಜಿಲ್ಲೆ- ವಿಜಯನಗರ

1042

AKSHARA GRANTHALAYA

ACC.NO. 048850

1042

1042

ನೋಂದಣಿ ಸಂಖ್ಯೆ:KRSBFS-00586

ಸೀಗಿ-ಗೌರಿ ಹಾಡುಗಳ ಒಂದು ಅಧ್ಯಯನ

(ಕ.ರಾ.ಶಿ. ಸಂಸ್ಥೆ ಸ್ನಾತಕೋತ್ತರ ಕನ್ನಡ ಸಂಶೋಧನ ಕೇಂದ್ರ ಬೀದರ ಇವರಿಗೆ
ಎಂ.ಫಿಲ್. ಆಂಶಿಕ ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ)

ಸಂಶೋಧಕರು

ಪ್ರಮೀಳಾ ಶರಣಪ್ಪಾ ಹೊನ್ನಾಳೆ

ಮಾರ್ಗದರ್ಶಕರು

ಡಾ. ಜಗನ್ನಾಥ ಹೆಬ್ಬಾಳೆ

ನಿರ್ದೇಶಕರು

ಕ.ರಾ.ಶಿ. ಸಂಸ್ಥೆಯ

ಸ್ನಾತಕೋತ್ತರ ಕನ್ನಡ ಸಂಶೋಧನ ಕೇಂದ್ರ ಬೀದರ.

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೫ ೨೭೬

ಜುಲೈ- ೨೦೧೩

398.2092
HON S
048850

ಪ್ರಮಾಣ ಪತ್ರ

ಸೀಗಿ-ಗೌರಿ ಹಾಡುಗಳ ಒಂದು ಅಧ್ಯಯನ ಎಂಬ ನಿಬಂಧವನ್ನು ಡಾ. ಜಗನ್ನಾಥ ಹೆಬ್ಬಾಳೆ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಎಂ.ಫಿಲ್. ಪದವಿಗಾಗಿ ಕ.ರಾ.ಶಿ. ಸಂಸ್ಥೆಯ ಸ್ನಾತಕೋತ್ತರ ಕನ್ನಡ ಸಂಶೋಧನ ಕೇಂದ್ರ ಬೀದರ ಇವರಿಗೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ಬೀದರ.
ದಿನಾಂಕ: ೧೮-೦೭-೨೦೧೩

Shivaputra

ಪ್ರಮೀಳಾ ಶರಣಪ್ಪಾ ಹೊನ್ನಾಳೆ
ಎಂ.ಫಿಲ್. ವಿದ್ಯಾರ್ಥಿನಿ
ಕ.ರಾ.ಶಿ. ಸಂಸ್ಥೆ
ಸ್ನಾತಕೋತ್ತರ ಕನ್ನಡ ಸಂಶೋಧನ ಕೇಂದ್ರ ಬೀದರ.

ಮಾರ್ಗದರ್ಶಕರ ಪ್ರಮಾಣ ಪತ್ರ

ಸೀಗಿ-ಗೌರಿ ಹಾಡುಗಳ ಒಂದು ಅಧ್ಯಯನ ಎಂಬ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಗಾಗಿ **ಪ್ರಮೀಳಾ ಶರಣಪ್ಪಾ ಹೊನ್ನಾಳೆ** ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ : ಬೀದರ.

ದಿನಾಂಕ: ೧೮-೦೭-೨೦೧೩

ಡಾ. ಜಗನ್ನಾಥ ಹೆಬ್ಬಾಳೆ
ನಿರ್ದೇಶಕರು
ಕ.ರಾ.ಶಿ. ಸಂಸ್ಥೆಯ
ಸ್ನಾತಕೋತ್ತರ ಕನ್ನಡ ಸಂಶೋಧನ ಕೇಂದ್ರ ಬೀದರ.

ಪರಿವಿಡಿ

		ಪುಟ ಸಂಖ್ಯೆ
೧.	ಪ್ರಸ್ತಾಪನೆ	೧
೨.	ಸೀಗಿ ಮತ್ತು ಗೌರಿ ಪದದ ನಿಷ್ಪತ್ತಿ	೨
೩.	ಸೀಗಿ ಪದದ ಅರ್ಥ	೩
೪.	ಬೀದರ ಜಿಲ್ಲೆ, ತಾಲೂಕು ಮತ್ತು ಗ್ರಾಮಗಳಲ್ಲಿ ಸೀಗಿ ಆಚರಣೆ	೨೬
೫.	ಸೀಗಿ ಹಾಡುಗಳ ವೈಶಿಷ್ಟ್ಯ	೩೩
೬.	ಸೀಗಿ – ಗೌರಿ ಹಾಡುಗಳ ಸ್ಥೂಲ ವಿವೇಚನೆ	೩೮
೭.	ಸಮಾರೋಪ	೬೬

ಅನುಬಂಧ

೧.	ಸೀಗಿ–ಗೌರಿ ಹಾಡುಗಳು	೬೯
೨.	ಫೋಟೋಗಳು	೮೨
೩.	ವಕ್ತಾರರ ಪಟ್ಟಿ	೮೫
೪.	ಆಕಾರ ಗ್ರಂಥಗಳು	೮೮

ಪ್ರಸ್ತಾವನೆ

ಜಾನಪದ ಸಾಹಿತ್ಯದ ಮೂಲಕರ್ತೃಗಳು ಜನಪದರು ನಗರ ಪಟ್ಟಣಗಳ ಸಂಪರ್ಕದಿಂದ ದೂರವಿರುವ ಗ್ರಾಮೀಣ ಪ್ರದೇಶಗಳಲ್ಲಿ ನೆಲೆಸಿರುವವರು ಹಲಗೆ (ಪಾಟಿ) ಬಳಪವನ್ನು ಹಿಡಿದು ಅಕ್ಷರ ತಿದ್ದಿ ತೀಡಿದವರಲ್ಲ. ಮೈತುಂಬ ಕೈತುಂಬ (ಕೆಲಸ) ಬದುಕನ್ನೇ ಹಚ್ಚಿಕೊಂಡು ಅದರ ಕಷ್ಟ-ಸುಖ, ನೋವು-ನಲಿವುಗಳನ್ನು ಉಂಡವರು, ಅನುಭವಿಸಿದವರು ಕಂಡವರು, ತಮ್ಮ ಜೀವನಾನುಭವ ಮತ್ತು ಲೋಕಾನುಭವವನ್ನು ಹಲವರು ತಮ್ಮ-ತಮ್ಮ ಬೌದ್ಧಿಕ ಸಾಮರ್ಥ್ಯಕ್ಕನುಗುಣವಾಗಿ, ಸಾಂಧರ್ಭಿಕವಾಗಿ ಹಾಡು, ಕಥೆ, ಕಥನಗೀತೆ, ಒಗಟು, ಒಡಪು ಇತ್ಯಾದಿ.

ಸಾಹಿತ್ಯದ ನಾನಾ ಪ್ರಕಾರಗಳಲ್ಲಿ ಅಭಿವ್ಯಕ್ತಪಡಿಸಿದ ಆಶು ಕವಯಿತ್ರಿಯರು, ಕಥೆಗಾರ್ತಿಯರು ನಮ್ಮ ಜನಪದರು ಮೌಖಿಕ ಪರಂಪರೆಯ ಅಜ್ಞಾತ ಕವಯಿತ್ರಿಯರಿಂದ ಕಟ್ಟಿ ಹಾಡಿದ, ಕಟ್ಟಿ (ಹೆಣೆದು) ಹೇಳಿದ ಅರ್ಥಾತ್ ರಚನೆಯಾದ ಸಾಹಿತ್ಯವನ್ನು ಸೃಷ್ಠಿಸುವಲ್ಲಿ ಶಕ್ತರಾದವರು ಬರೆಯದೇ ಇರುವುದು, ಉದಾಸೀನರಾಗಿರುವುದು, ಕನ್ನಡ ಸಾರಸ್ವತ ಲೋಕಕ್ಕೆ ಆದ ಒಂದು ಮಹಾನಷ್ಟ.

ಜಾನಪದ ಸಾಹಿತ್ಯ ಭಂಡಾರವನ್ನು ಕಾಡಿದ್ದು ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ ಸೀಗಿ-ಗೌರಿ ಹಬ್ಬಗಳ ಆಚರಣೆ ಸಂಭ್ರಮ ಸಡಗರದಿಂದ ಹಾಡುವವರು, ಆಚರಿಸುವರು ಆದರೆ ಇತ್ತೀಚಿನ ದಿನಮಾನಗಳಲ್ಲಿ ಇಂಥಹ ಆಚರಣೆ ತುಂಬಾ ಅಪರೂಪವಾಗುತ್ತಿರುವುದು ನಾವೆಲ್ಲಾ ಕಾಣಬಹುದು.

೧. ಸೀಗಿ ಮತ್ತು ಗೌರಿ ಪದದ ನಿಷ್ಪತ್ತಿ

ಮಣ್ಣಿನಿಂದ ಮಾಡಿದ ಶಿಖರಾಕೃತಿಯಲ್ಲಿ ರೈತರು ಧಾನ್ಯ ಪೇರಿಸುವ ಮಾದರಿಯಲ್ಲಿ ಸೀಗಿ ಇರುತ್ತದೆ. ಅದಕ್ಕಾಗಿ ಸುಗ್ಗಿಯೇ ಸೀಗಿ ಆಗಿರಬಹುದು ಎಂಬ ಅಭಿಪ್ರಾಯವಿದೆ. ಸಂಸ್ಕೃತ ಶೀಖಾ ಶಿಖ ಶಿಖರದ ತದ್ಭವ ಶೀಗಿ– ಸೀಗಿ ಆಗಿರಬೇಕು ಎಂದು ಇನ್ನೊಂದು ಹೇಳಿಕೆಯಿದೆ, ಸೀಗೆ ಎಂದರೆ ತುಂಬಿದುದು, ತುಂಬಿ ತುಳುಕುವುದರ ಅರ್ಥದಲ್ಲಿಯೂ ಬಳಸುತ್ತಾರೆ ? ಇಂದಿಗೂ ಕೂಡ ಗ್ರಾಮೀಣ ಪ್ರದೇಶಗಳಲ್ಲಿಯ ಜನರು ದವಸ – ಧಾನ್ಯಗಳು ಎರವಳು (ಕೈಕಡಾ) ಕೊಟ್ಟಾಗ ಮರಳಿ ಪಡೆಯುವಾಗ ಧಾನ್ಯಗಳನ್ನು ಸೀಗಿ (ತುಂಬಿ) ಕೊಟ್ಟಿದೆ ಹಾಗೆಯೇ ಮರಳಿ ಪಡೆಯುವಾಗ ಸೀಗಿ ಎಂಬ ಪದ ಬಳಸುವರು.

ಮುಂಗಾರಿನ ಮಳೆ ಮುಗಿದು ಹಿಂಗಾರು ಮಳೆ ಪ್ರಾರಂಭವಾಗುವ ಸಂಧಿಕಾಲದಲ್ಲಿ ಬರುತ್ತದೆ "ಸೀಗಿ ಹುಣ್ಣಿಮೆ" ಈಗ ತುಂಬಿ ಬಂದಿರುವ ಮುಂಗಾರಿನ (ಬೆಳೆಸನ್ನು) ಬೆಳೆಯನ್ನು ಪೂಜೆ ಮಾಡಿ ನೈವೇದ್ಯ ಅರ್ಪಿಸುವ ಸಂಭ್ರಮಕ್ಕೆ ಸೀಗಿ ಹುಣ್ಣಿಮೆ ಎಂದು ಹೆಸರು.

ಅಶ್ವೀನ ಶುದ್ಧ ಹುಣ್ಣಿಮೆಯೇ ಸೀಗಿ ಹುಣ್ಣಿಮೆ ಆಗ ಮುಂಗಾರು ಮಳೆಗಳು ಮುಗಿದು ಹಿಂಗಾರು ಮಳೆಗಳು ಪ್ರಾರಂಭವಾಗುವುದು ಮುಂಗಾರಿನ ಬೆಳೆಯು ಬೆಳೆದು ಭಾರವಾಗಿ ಬಂದು ತುಂಬಿ ನಿಲ್ಲುವುದು ಹುರಿಗಾಳಿಗೆ ಬಂದ ಆ ಬೆಳೆಯು ಮುಂದೆ ಕೇಲವೇ ದಿನಗಳಲ್ಲಿ ಮಾಯವಾಗಿ ಭೂಮಿಯ ಸೊಬಗೇ ಹೋಗುವುದು ಎಂದು ಅರಿತ ಒಕ್ಕಲಿಗನು ಕೂಡ ಹೊಲಕ್ಕೆ ಒಯ್ಯುವನು ಹೊಲದ ಬೆಳೆಯನ್ನು ಪೂಜೆ ಮಡಿ ಹುಲಸಾಗಲೆಂದು ಒಯ್ದು ಊಟವನ್ನು ಭೂಮಿಗೆ ಎಡೆ ಮಾಡಿ ಬೆಳೆಗೆ ಎಡೆ ಸೂರೆ ಮಾಡುವರು.

೨. ಸೀಗಿ ಪದದ ಅರ್ಥ

ಸೀಗೆ ಎಂದರೆ ಸಿಹಿ ಎಂದೂ, ಮಧುರವೆಂದೂ ಅರ್ಥವಿಧೆ ಜೀವನದ ಮಾಧುರ್ಯ ಸವಿ/ರುಚಿ ಬದುಕಿನ ಸೂಚನೆ ಈ ಹುಣ್ಣಿಮೆಯಲ್ಲಿದೆ. ಮುಂಗಾರು ಬೆಳೆಗಳ ಸುಗ್ಗಿಯೇ ಸೀಗಿ ಹುಣ್ಣಿಮೆಯ ಸಂಕೇತ ಎಂದಿರುವ ಶ್ರೀ ಸಿ.ವಿ. ಕೆರಿಮನಿಯವರು ಸೀತನಿ–ಸಜ್ಜಿ ಸೀತನಿಯನ್ನು ಮತ್ತು ಚರಗದ ಊಟವನ್ನು ನೆನಪಿಸಿಕೊಂಡು ಹೇಳಿದ ಭಾವನಾತ್ಮಕ ಹೇಳಿಕೆ ಇದಾಗಿದೆ. ಏಕೆಂದರೆ "ಸೀಗೆ' ಎಂದರೆ ಸಹಿ–ಮಧುರ ಇದಾಗಿದೆ ಎಂಬ ಅರ್ಥ ಯಾವ ಶಬ್ದಕೋಶ–ವಿಶ್ವಕೋಶ ನಿಘಂಟುಗಳಲ್ಲಿ ನಮೂದಿತವಾಗಿಲ್ಲ, ಅದಕ್ಕೆ ಬದಲಾಗಿ ವಿರುದ್ಧಾರ್ಥವನ್ನು ಕೊಡುವ ಎಣ್ಣೆಯಂತಹ ಜಿಡ್ಡನ್ನು ತೆಗೆಯಲು ಉಪಯೋಗಿಸುವ "ಸೀಗೆ" ಹೆಸರಿನ ಕಾಯಿ ಇದೆ. ಅದು ಕಹಿಯಾಗಿರುತ್ತದೆ. ಸೀಗೆ ಹುಣ್ಣಿಮೆಯ ಸಮಯದಲ್ಲಿಯೇ ಸೀಗೆ ಕಾಯಿಗಳು ಬಲಿತು ಕೋಯ್ಲಿಗೆ ಬರುತ್ತವೆ. ಈ ಕಾರಣಕ್ಕೆ ಸೀಗೆ ಕಾಯಿ ಎಂಬ ಹೆಸರು ಬಂದಿರಲೂ ಬಹುದು ಹೀಗಾಗಿ "ಸೀಗಿ" ಗೂ–ಸೀಗೆ ಕಾಯಿಗೂ ಇದಕ್ಕಿಂತ ಹೆಚ್ಚಿನ ಯಾವ ಸಂಬಂಧವನ್ನು ಕಲ್ಪಿಸಲು ಇಲ್ಲಿ ಸಾಧ್ಯವಿಲ್ಲ.

ಸೀಗೆ > ಸೀಗಿ > ಸೀಗವ್ವನ ಆರಾಧನೆಯನ್ನು ಕುರಿತಂತೆ ಈ ಮೇಲೆ ವಿವರಿಸಿದ ಹಿರಿಯ ಸಾಹಿತಿಗಳ ಸಂಶೋಧಕರ ಅಭಿಪ್ರಾಯಗಳನ್ನು ಕ್ರೋಢೀಕರಿಸಿ ಒಂದು ಸರ್ವಸಮ್ಮತ ನಿರ್ಣಯಕ್ಕೆ (ಸೀಗೆ > ಸೀಗಿ ಪದದ ನಿಷ್ಪತ್ತಿ ಕುರಿತಂತೆ) ಬರಲು ಸಾಧ್ಯವಿದೆ. ಮುಖ್ಯವಾಗಿ ಸೀಗಿ ಹುಣ್ಣಿಮೆಯನ್ನು ಹಬ್ಬದಂತೆ ಸಂಭ್ರಮ ಸಂತೋಷದಿಂದ ಒಕ್ಕಲಿಗರು ಆಚರಿಸುತ್ತಾರೆ. ಅಶ್ವೀನಿ ಶುದ್ಧ ಪೂರ್ಣಿಮೆಯೇ ಸೀಗೆ ಹುಣ್ಣಿಮೆಯಾಗಿದ್ದು ಈ ಕಾಲದಲ್ಲಿಯೇ ಮುಂಗಾರು ಬೆಳೆಗಳಿಂದ ಭೂತಾಯಿ ದಿನ ತುಂಬಿದ ಬಸುರಿಯಂತೆ ಕಂಗೊಳಿಸುತ್ತಿರುತ್ತಾಳೆ. ಆಗ ಆಕೆಗೆ ಒಕ್ಕಲಿಗರು ಹಲವು ಕಡೆಗೆ ಚೆರಗ ಚೆಲ್ಲುವುದರ ಮೂಲಕ ಭೂದೇವಿಗೆ ಉಣಿಸುವ ಬಯಕೆಯ ಊಟವೇ 'ಸೀಗೆ' ಆಚರಣೆಯ ಪ್ರಮುಖ ಸಂಪ್ರದಾಯವಾಗಿದೆ ಅದರಂತೆ ಲೋಕಕ್ಕೆ ಅನ್ನವನ್ನು ಕೊಟ್ಟು ಸಲಹುವ ಸೀಗೆಗೆ / ಭೂತಾಯಿಗೆ ಒಕ್ಕಲಿಗರು ಕೃತಜ್ಞತೆಗಳನ್ನು ಸಲ್ಲಿಸುವ ಈ ಸಂಪ್ರದಾಯ (ಅನುಚಾನ) ವಾಗಿ ಉಳಿದುಕೊಂಡು ನಡೆದುಕೊಂಡು ಬಂದಿದೆ ಒಟ್ಟಾರೆ ಮುಂಗಾರು ಬೆಳೆಗಳ ಸುಗ್ಗಿಯ ಸಂಭ್ರಮದ ಆಚರಣೆಯೇ "ಸೀಗೆ" ಯಾಗಿದೆ ಸೀಗೆ ಹುಣ್ಣಿಮೆ ಸೀಗಿ ಹಬ್ಬವೆನಿಸಿದೆ.[೧]

ಸೀಗಿ – ಗೌರಿಯನ್ನು ಎಲ್ಲರ ಮನೆಯಲ್ಲಿ ಕೂಡಿಸುವುದಿಲ್ಲ ಪದ್ಧತಿ, ಸಂಪ್ರದಾಯ ವಿದ್ದವರ ಮನೆಗಳಲ್ಲಿ ಮಾತ್ರ ಕೂಡಿಸುತ್ತಾರೆ ಅಂಥವರ ಮನೆಗಳಿಗೆ ಹೋಗಿ ಹೆಣ್ಣು ಮಕ್ಕಳು ಆರತಿ ಬೆಳಗಿ ಬರುತ್ತಾರೆ. ಸೀಗಿ–ಗೌರಿ ಆಡುವುದು ಮನೆ ಮನೆಗೆ ಹೋಗಿ ಚಿತ್ರ ಬಿಡಿಸುವುದಕ್ಕೆ ಹಾಡುವುದಕ್ಕೆ

ಯಾವ ಧಾರ್ಮಿಕ ಕಟ್ಟಳೆಗಳಿಲ್ಲ ಎಲ್ಲರೂ ಆಡುತ್ತಾರೆ ಹಾಡುತ್ತಾರೆ. 'ಸೀಗೆ' ಯನ್ನು ಕೂಡಿಸಿದ ಗುಡಿ / ಮಠ / ಮನೆ ತಲುಪುವವರೆಗೂ ಹಾಡುಗಳನ್ನು ಹಾಡುತ್ತಲೇ ಹೋಗುವರು.

ಬಂದ ಮೂಲ್ಯಾಗ ಒಂದ ಪತ್ರಿ
ಪತ್ರ್ಯಾಗ ಪನಿವಾರ
ನಮ್ಮ ಗೌರವ್ವಗ ಮುತ್ತಿನ ಶಿವದಾರ

ಒಂದ ಪಡಿ ಅಕ್ಕಿ ತರುವೆ ಗವರಿ
ನಿನಗೆ ಬಂದ ಮಂಡಾಲ ಬರೆವೆ
ಶ್ಯಾಂವಿಗಿ ಸಿನ್ನಾಲ ಗವರಿ

ತಾವುಟ್ಟ ಧೋತರ
ಬಾಗಿ ಬಿನ್ನಾಯ ಕೊಡುವೆ
ಗವರಿ ನಿನಗ ಬಾಗಿ ಭಿನ್ನಯ ಕೊಡುವೆ

ಒಂದ ಸೇರ ಎಣ್ಣೆ ತಂದೇನ ಗೌರಿ
ಒಂದ ದೀಪವ ಹಚ್ಚೇನ ಗವರಿ
ಏತದಾರುತ್ತಿ ಗವರಿ ಬೆಳಗದಾರುತೆ

ಸೀಗೆಯನ್ನಿಟ್ಟ ಗುಡಿಗೆ ತಮ್ಮ ತಮ್ಮ ಆರತಿ ತಾಟುಗಳನ್ನು ಅರ್ಧ ವರ್ತುಲಾಕಾರದಲ್ಲಿ ಇಡುವರು, ಪದ್ಧತಿಯಂತೆ ಸೀಗೆಗೆ ಅರಸಿಣಕುಂಕುಮ ಏರಿಸುವರು, ಹೂ ಮಾಲೆಗಳನ್ನು ಮುಡಿಸುವರು, ನೈವೇದ್ಯ ತೋರಿಸಿ ತಾವು ತಂದಿದ್ದ ಪದಾರ್ಥದ ತುಂಡುಗಳನಿಟ್ಟು ಎಲ್ಲರು ಒಟ್ಟಾಗಿ ಆರತಿ ಎತ್ತುವರು

ಇತರ ಹಾಡುಗಳನ್ನು ಹಾಡಿದ ನಂತರ ಕೊನೆಯಲ್ಲಿ ಗೌರಿ-ಗೌರಿ ಗಾಣಾ ಗೌರಿ, ಮ್ಯಾಣಾ ಗೌರಿ, ಕುಂಕುಮಗೌರಿ - ಹಾಡನ್ನು ಹಾಡುತ್ತಲೇ ಆರತಿ ಬೆಳಗಿ ಮುಗಿಸುವರು ಮನೆಗೆ ಮರಳಿ ಬರುವಾಗಲೂ ಹಾಡು ಹೇಳುತ್ತಲೇ ಬರುವರು ಮನೆಗೆ ಬಂದ ಮೇಲೆ ಮೊದಲು ಚಂದ್ರನಿಗೆ ಆರತಿ, ನಂತರ ಮನೆಯ ಮುಂದಿನ ಹೊಸ್ತಿಲಕ್ಕೆ ಅರಷಿಣ ಕುಂಕುಮ ಹಚ್ಚಿ ಎರಡು ಮೂಲೆಗೂ ಹೂಗಳನ್ನಿಟ್ಟು ಆರತಿ ಬೆಳಗಿ ಒಳಗೆ ಬರುವರು ನೈವೈದ್ಯವನ್ನು ಮನೆ-ಮಂದಿಗೆಲ್ಲ ಹಂಚುವರು.

ಇಲ್ಲಿ ಒಂದು ಅಂಶವನ್ನು ಗಮನಿಸಬೇಕು ಮತ್ತು ನೆನಪಿಟ್ಟುಕೊಳ್ಳಬೇಕು ಸೀಗೆಯ ಹಾಡುಗಳೆಂದು ಮತ್ತು ಗೌರಿಯ ಹಾಡುಗಳೆಂದು ಪ್ರತ್ಯೇಕವಾದ ಹಾಡುಗಳಿಲ್ಲ ಇಬ್ಬರ ಆಚರಣೆಯಲ್ಲಿ ಹಾಡುವ ಹಾಡುಗಳು ಮಾತ್ರ ಒಂದೇ ತೆರನಾಗಿವೆ. ಜನಪದ ನೆಲೆಯಲ್ಲಿ ನೋಡಿದಾಗ ಸೀಗಿ–ಗೌರಿ ಬೇರೆ ಬೇರೆ ಅಲ್ಲ. (ಅವರಿಬ್ಬರೂ ಅಕ್ಕ–ತಂಗಿಯರೆಂದೂ ಹೇಳುತ್ತಾರೆ) ಅವರಿಬ್ಬರು ಭೂ ದೇವಿಯರೇ ಆಗಿದ್ದಾರೆ ಅವರನ್ನು ಜನಪದರು ತಮ್ಮ ಮನೆಯ ಹೆಣ್ಣು ಮಕ್ಕಳಂತೆ ಕಂಡಿದ್ದಾರೆ – ಗೌರವಿಸಿದ್ದಾರೆ.

ನಮ್ಮ ಭಾರತೀಯ ಬಹುಪಾಲು ಹಬ್ಬಗಳಿಗೆ ಪೌರಾಣಿಕ ಹಿನ್ನೆಲೆಯೊಂದು ಇದ್ದೇ ಇರುತ್ತದೆ. ಆದರೆ ಆಶ್ವಿನ ಮಾಸದಲ್ಲಿ ಪೂಜೆಗೊಳ್ಳುವ ಸೀಗೆ > ಸೀಗಿ ಹಬ್ಬಕ್ಕೆ ಯಾವ ಪೌರಾಣಿಕ ಹಿನ್ನೆಲೆಯು ಇಲ್ಲ ಆದಕಾರಣ ಸೀಗೆ ಹುಣ್ಣಿಮೆಯ ಆಚರಣೆ ಅಪ್ಪಟ ಜನಪದರ ಹಬ್ಬವೆಂದೇ ಹೇಳಬೇಕು. ಈ ಸೀಗೆ ಹುಣ್ಣಿಮೆ ಮತ್ತು ಗೌರಿ ಹುಣ್ಣಿಮೆಯ ಬೆಳದಿಂಗಳಲ್ಲಿ ಹಾಡುವ ಹಾಡುಗಳು ಒಂದೇ ಬಗೆಯಾಗಿವೆ ಎಂದು ಈ ಮೇಲೆ ಹೇಳಲಾಗಿದೆ. ಅವುಗಳಲ್ಲಿ ಅಧಿಕ ಸಂಖ್ಯೆಯ ಹಾಡುಗಳು ಗೌರವ್ವನ ಹೆಸರಿನಲ್ಲಿಯೇ ಇವೆ. ಇನ್ನು ಕೆಲವು ಇರ್ವರ ಹೆಸರಿನಲ್ಲಿವೆ.

ಉದಾ:–ಅಪರೂಪಕ್ಕೆ ಸೀಗವ್ವನನ್ನು ಕುರಿತು ಬಂದ ಒಂದು ಹಾಡನ್ನು ಇರ್ವರನ್ನು ಕುರಿತು ಮತ್ತೊಂದು ಹಾಡನ್ನು ಇಲ್ಲಿ ಕೋಡಲಾಗಿದೆ.

ಸೀಗಿ ಬಾರಮ್ಮ ಮನಿಗೆ ಸೀಗಿ ಬಾರಮ್ಮ
ಸೀಗಿ ಬಾರಮ್ಮ ಮನಿಗಿ ಸೀಗಿ ಬಾರಮ್ಮ
ಸೀಗಿ ಬಾರೇ ನನನ್ನ ಮನೀಗೆ
ನಾನು ನಿನ್ನ ಕರಿಯ ಬಂದೆ

ಸೀಗಿ ಬಾರಮ್ಮ ಮನಿಗೆ ಸೀಗಿ ಬಾರಮ್ಮ
ಪಟ್ಟವಳಿ ಸೀರೆಯುಟ್ಟು ಹೆಸರು ನಾಮದಾರಿ
ಜರತಾರಿ ಸೀರಿಯುಟ್ಟು ಜಾಣೆ
ನಾನು ನಿನ್ನ ಕರಿಯ ಬಂದೆ
ಗೌರಿ ಬಾರಮ್ಮ ಮನಿಗೆ ಗೌರಿ ಬಾರಮ್ಮ

ಏಳುತಲಿ ಎದ್ದು ಯಾರ್ಯಾರ ನೆನೆಯಲಿ
ಏಳ್ಳು ಜೀರಿಗಿ ಬೆಳಿಯೋಳ ! ಭೂಮಿ ತಾಯಿಯ
ಎದ್ದೊಂದು ಗಳಿಗೆ ನೆನೆವೇನು !!

ಎನ್ನುವಲ್ಲಿ ಜನಪದರಿಗೆ ವಾಸ್ತವದ ಅರಿವಿದ್ದು ಭೂಮಿ ಮರ–ಗಿಡ–ಮರ ಮಳೆ–ಬೆಳೆ ಮುಂತಾಗಿ ತಮಗೆ ಫಲ ಕೊಡುವ ಪ್ರಕೃತಿಯಲ್ಲಿಯೇ ದೆವರನ್ನು ಕಾಣುತ್ತಾರೆ ರವೀಂದ್ರನಾಥ ಠಾಕೂರ ಅವರು ಪ್ರಕೃತಿಯ ಬಗ್ಗೆ Nature is god, Nature power is god ಎಂದು ಹೆಳಿರುವ ಮಾತು ಸಹ ಇಲ್ಲಿ ಸ್ಮರಿಸಬಹುದು. ದೇವರೆಂದರೆ, ಜನಪದರಿಗೆ ಪೂಜ್ಯವಾದಂಥ ಒಂದು ಗೌರವ ಸೂಚಕ

ಸಂಬೋಧನೆ, ಹೊರತು ದೇವರೆಂದರೆ ಗಂಧರ್ವಲೋಕದ ಮಹಿಮಾ ಪುರುಷರು, ಮುಂತಾದ ಕಲ್ಪನೆ ಜನಪದರಲ್ಲಿಲ್ಲ.

ನಮ್ಮ ಸಮಾಜದಲ್ಲಿ ಆಚರಣೆ ಮತ್ತು ನಂಬಿಕೆಗಳಿಗೆ ತನ್ನದೇ ಆದ ಮಹತ್ವವಿದೆ. ಅದರಲ್ಲಿಯೂ ಹೆಣ್ಣು ಮಕ್ಕಳ ಬದುಕಿನ ಎಲ್ಲಾ ತಿರುವುಗಳಲ್ಲಿ ಒಂದೊಂದು ಬಗೆಯ ಆಚರಣೆಗಳನ್ನು ಹುಟ್ಟಿ ಹಾಕಿದ್ದಾರೆ. ಈ ಆಚರಣೆಗಳು ಬದುಕಿಗೆ ಪೂರಕವಾದವುಗಳು ಎಲ್ಲೋ ಒಂದು ಕಡೆ ಮನುಷ್ಯನ ನೆಮ್ಮದಿಗೆ (ಸೌಜನ್ಯತೆಗೆ) ಕಾರಣವಾದವುಗಳು ಮಹಿಳೆಯ ಒಟ್ಟು ಆಲೋಚನೆಗಳು ಆಕೆಯ ಆಚರಣೆಗಳಲ್ಲಿ ಕಾಣಬಹುದಾಗಿದೆ. ಅದರಲ್ಲೂ ಜನಪದಕ್ಕೆ ಮಹಿಳೆಯ ಕೊಡುಗೆ ಅಪಾರವಾಗಿದೆ. ಸಂಸ್ಕೃತಿಯ ಆಗರವಾಗಿರುವ ಗ್ರಾಮೀಣ ಮಹಿಳೆಯರು ತಮ್ಮ ಬದುಕಿನಲ್ಲಿ ಹಲವು ಆಚರಣೆಗಳನ್ನು ಆಚರಿಸುತ್ತ ಸಾಂಸ್ಕೃತಿಕ ಬದುಕನ್ನು ಕಟ್ಟಿಕೊಂಡಿದ್ದಾರೆ. ಪ್ರಕೃತಿಗೆ ಹತ್ತಿರವಾಗಿರುವ ಹಲವು ಆಚರಣೆಗಳನ್ನು ಹೆಣ್ಣು ಮಕ್ಕಳು ಆಚರಿಸಿಕೊಂಡು ಬರುತ್ತಿದ್ದಾರೆ. ಅವುಗಳೆಂದರೆ, ನಾಗಪಂಚಮಿ ಮಣ್ಣೆತ್ತಿನ ಅಮವಾಸ್ಯೆ, ಎಳ್ಳಮಾವಸಿ, ಮುಖ್ಯವಾಗಿ ಸೀಗಿ–ಗೌರಿ ಹುಣ್ಣಿಮೆ ಆಚರಣೆ ಮುಖ್ಯವಾಗಿದೆ. ಹೆಣ್ಣು ಮಕ್ಕಳ ಆಚರಣೆಗಳು ಭೂಮಿ, ಆಕಾಶ, ನೀರು, ಗಾಳಿ, ಬೆಂಕಿ, ಹೀಗೆ ಪಂಚಭೂತಗಳಿಗೆ ಸಂಬಂಧಿಸಲ್ಪಟ್ಟಿವೆ.

ಕೃಷಿ ಚಟುವಟಿಕೆಗಳ ಕೇಂದ್ರವಾದ ಹೆಣ್ಣು ಅದಕ್ಕೆ ಸಂಬಂಧಿಸಿದ ಹಲವು ಆಚರಣೆಗಳನ್ನು ಹುಟ್ಟಿ ಹಾಕಿದ್ದಾಳೆ. ಹೆಣ್ಣು ಮಕ್ಕಳ ಹಲವಾರು ಆಚರಣೆಗಳು ಕಾಲ ಸಂದರ್ಭಕ್ಕನುಗುಣವಾಗಿ ತನ್ನದೇ ಆದ ಮಹತ್ವ ಪಡೆದಿದೆ ಅದರಲ್ಲಿ ಸೀಗಿ, ಗೌರಿ ಹುಣ್ಣಿಮೆಯ ಆಚರಣೆಯು ಒಂದಾಗಿದೆ. ಇಂದು ಇಂಥಹ ಆಚರಣೆಗಳು ಮರೆಮಾಚಿ ಹೋಗುತ್ತಿವೆ ಅವುಗಳನ್ನು ಸಂಗ್ರಹಿಸುವ ಸಂಶೋಧಿಸುವ ಕೆಲಸ ಆಗಬೇಕಾಗಿದೆ. ಈ ಒಂದು ಉದ್ದೇಶದಿಂದ ಸೀಗಿ ಮತ್ತು ಗೌರಿ ಹಾಡುಗಳು ಕುರಿತು ಈ ಒಂದು ಕಿರು ಪ್ರಬಂಧ ಮಂಡಿಸುವ ಉದ್ದೇಶ ಹೊಂದಲಾಗಿದೆ. ಮಹಿಳೆಯರು ಈ ತರಹದ ಆಚರಣೆಗಳು ಆಕೆಯ ಬದುಕಿನ ಸ್ತರಗಳನ್ನು (ಸ್ಥರ) ಸೂಚಿಸುತ್ತದೆ.

ಹಲವಾರು ಬಗೆಯ ಗ್ರಾಮ ದೇವತೆಗಳು ಪೂಜಿಸುತ್ತ ಬಂದಿರುವ ನಮ್ಮ ಗ್ರಾಮೀಣರು ಸೀಗಿ ಮತ್ತು ಗೌರಿ ಹಾಡುಗಳನ್ನು ತಲೆಮಾರಿನಿಂದ ತಲೆಮಾರಿಗೆ ಸಾಗಿಸುತ್ತಾ (ಬಾಯಿಯಿಂದ ಬಾಯಿಗೆ ಮೌಖಿಕವಾಗಿ ಬಂದಿದ್ದಾರೆ. ಅದರೊಂದಿಗೆ ವಿಶಿಷ್ಟ ಆಚರಣೆ ಕೂಡ ರೂಢಿಸಿಕೊಂಡಿದ್ದಾರೆ.

ಸೀಗಿ–ಗೌರಿ ಹಬ್ಬಗಳು

ಉತ್ತರ ಕರ್ನಾಟಕದಲ್ಲಿ ಹೆಚ್ಚು ಪ್ರಚಲಿತವಿರುವ ಸೀಗಿ ಹುಣ್ಣಿಮೆ ಮತ್ತು ಗೌರಿ ಹುಣ್ಣಿಮೆ ಯ ಆಚರಣೆಯು ಸ್ತ್ರೀ ದೇವತೆಗಳನ್ನು ಕುರಿತದ್ದಾಗಿದೆ. ಸ್ತ್ರೀಯನ್ನು ಶಕ್ತಿಯನ್ನಾಗಿ ಭಾವಿಸಿ ಶಕ್ತಿಯ ಆರಾಧನೆ ಮಡುವ ಸಂಪ್ರದಾಯವು ವೇದಗಳ ಕಾಲದಿಂದಲೂ ಇದೆ. ಈ ಹಿನ್ನೆಲೆಯಲ್ಲಿ ನೋಡಿದಾಗ ಸೀಗಿ–ಗೌರಿ ಇಬ್ಬರೂ ಭೂದೇವಿಯರೇ ಆಗದ್ದರೂ, ಶಕ್ತಿ ದೇವತೆಯೆಂದು ಗೌರಿಯನ್ನು ಪೂಜಿಸಿದರೆ, ಭೂತಾಯಿಯ ಪೂಜೆಯೆಂದು ಸೀಗಿ ಯನ್ನು ಪೂಜಿಸುವುದು ರೂಢಿಯಲ್ಲಿದೆ. ಮಣ್ಣಿನ ಅಂದರೆ ಭೂಮಿ ಪೂಜಕರಾದ ಒಕ್ಕಲಿಗು ತುಂಬಾ ಶ್ರದ್ಧೆಯಿಂದ ಸಡಗರ–ಸಂಭ್ರಮದಿಂದ ಇದನ್ನು ಆಚರಿಸುತ್ತಾರೆ. ಆದ್ದರಿಂದ ಇವುಗಳನ್ನು ಜನಪದರ ಹಬ್ಬಗಳೆಂದೇ ಕರೆಯುವುದು ವಾಡಿಕೆಯಲ್ಲಿದೆ. ಅದರಂತೆ ಈ ಎರಡೂ ವಿಧಿ–ವಿಧನಗಳಲ್ಲಿ ಆಚರಣೆಗಳಲ್ಲಿ ಪ್ರಾದೇಶಿಕ ಭಿನ್ನತೆಯಿದ್ದರೂ ಸೀಗಿ–ಗೌರಿಯನ್ನು ಕುರಿತು ರಚನೆಯಾಗಿರುವ ಆರಾಧನಾ ಹಾಡುಗಳಲ್ಲಿ ಮಾತ್ರ ವ್ಯತ್ಯಾಸವಿಲ್ಲದಿರುವುದೊಂದು ವಿಶೇಷ ಸಂಗತಿಯಾಗಿದೆ. ಹಾಗೆಯೇ ಈ ಪೂಜಾ ಪರಂಪರೆಯನ್ನು "ಸೀಗಿ ಹುಣ್ಣಿಮೆ ಮತ್ತು ಗೌರಿ ಹುಣ್ಣಿಮೆ" ಎಂದು ಅವರವರ ಹೆಸರಿನಲ್ಲೇ ಆಚರಿಸುತ್ತಲಿರುವುದು ಮತ್ತೊಂದು ವೈಶಿಷ್ಟವಾಗಿದೆ.

ಸೀಗಿ–ಗೌರಿ ಅವರಿಬ್ಬರೂ–ಅಕ್ಕತಂಗಿಯರೆಂದು ಹೇಳುತ್ತಾರೆ. ಅವರಿಬ್ಬರೂ ಭೂದೇವಿಯರೇ ಆಗಿದ್ದಾರೆ. ಅವರನ್ನು ಜನಪದರು ತಮ್ಮ ಮನೆಯ ಹೆಣ್ಣು ಮಕ್ಕಳಂತೆ ಕಂಡಿದ್ದಾರೆ, ಗೌರವಿಸಿದ್ದಾರೆ. ನಮ್ಮ ಭಾರತೀಯ ಬಹುಪಾಲು ಹಬ್ಬಗಳಿಗೆ ಪೌರಾಣಿಕ ಹಿನ್ನೆಲೆಯೊಂದು ಇದ್ದೇ ಇರುತ್ತದೆ. ಆದರೆ ಅಶ್ವೀನ ಮಾಸದಲ್ಲಿ ಪೂಜೆಗೊಳ್ಳುವ ಸೀಗೆ > ಸೀಗಿ ಹಬ್ಬಕ್ಕೆ ಯಾವ ಪೌರಾಣಿಕ ಹಿನ್ನೆಲೆಯು ಇಲ್ಲ ಆದಕಾರಣ ಸೀಗೆ ಹುಣ್ಣಿಮೆಯ ಆಚರಣೆ ಅಪ್ಪಟ ಜನಪದರ ಹಬ್ಬವೆಂದೇ ಹೇಳಬೇಕು.

ಸೀಗಿ ಗೌರಿ ಆಚರಣೆ

ಗೌರಿ ಪಾರ್ವತಿಯ ರೂಪಾಂತರ ಪೂಜಿಸುವುದರಿಂದ ಸರ್ವಾಭೀಷ್ಟಗಳನ್ನು ಕೊಡುತ್ತಾಳೆಂದು ಪುರಾಣಗಳು ಹೇಳುತ್ತ ಚೈತ್ರ ಮೊದಲಾದ ಹನ್ನೆರಡು ಚಂದ್ರ ಮಾಸಗಳಲ್ಲಿ ಬರುವ ಶುಕ್ಲತೃತೀಯಾ ಮತ್ತು ಕೃಷ್ಣತೃತೀಯಾ ತಿಥಿಗಳಲ್ಲಿ ಗೌರಿಯನ್ನು ಬೇರೇ–ಬೇರೆ ಹೆಸರುಗಳಿಂದ ಪೂಜಿಸುವ ವಿಧಾನ ಪುರಾಣಗಳಲ್ಲಿ ಉಕ್ತವಾಗಿವೆ. ಗೌರವ್ವ (ಹಳದಿ–ಬಿಳುಪು

ಮಿಶ್ರ) ವರ್ಣದ ಶರೀರದಿಂದ, ಕೂಡಿ ಪಾರ್ವತಿ ರೂಪಾಂತರವನ್ನು ತಳೆದುದರಿಂದ ಆಕೆಗೆ 'ಗೌರಿ' ಎಂದು ಹೆಸರು ಬಂದಿದೆ.

ದಕ್ಷಬ್ರಹ್ಮನಿಗೆ ಕಾಳೀ ಎಂಬ ಮಗಳಿದ್ದಳು. ಆಕೆ ಕನ್ನೈದಿಲೆಯಂತೆ ಕಪ್ಪು ಬಣ್ಣದಿಂದ ಕೂಡಿದ್ದಳು ದಕ್ಷ ಆಕೆಯನ್ನು ಈಶ್ವರನಿಗೆ ಕೊಟ್ಟು ವಿವಾಹವನ್ನು ಮಾಡಿದ್ದ ಶಿವನೂ ಆಕೆಯೊಡನೆ ಸಂತೋಷದಿಂದ ಇದ್ದ. ಒಮ್ಮೆ ಆಸ್ಥಾನ ಮಂಟಪದಲ್ಲಿ ವಿಷ್ಣು ದೇವತೆಗಳೊಡನೆ ಈಶ್ವರ ತನ್ನ ಪತ್ನಿಯನ್ನು ಕೃಷ್ಣವರ್ಣಳಾದ ಕಾಳಿಯೇ ಬಾ ನಿನ್ನ ಬಣ್ಣ ಕಪ್ಪಾಗಿದ್ದರೂ ಸೌಂದರ್ಯದಿಂದ ನಿನ್ನ ರೂಪ ನನಗೆ ಪ್ರಿಯವಾಗಿದೆ. ಎಂದು ಹೇಳಿದ ಈ ಮಾತನ್ನು ಕೇಳಿದ ಕಾಳಿ ಲಜ್ಜಿತಳಾಗಿ ದುಃಖಿಸಿ ತನ್ನ ಕಪ್ಪು ದೇಹವನ್ನು ನೀಗಲು ದೇವಸಮುದಾಯ ಎದುರಿನಲ್ಲಿಯೇ ಅಗ್ನಿಪ್ರವೇಶಮಾಡಿ ಮತ್ತೆ ಪರ್ವತರಾಜನಿಗೆ ಮಗಳಾಗಿ ಗೌರವರ್ಣ ಶರೀರದಿಂದ ಕೂಡಿದವಳಾಗಿ ಹುಟ್ಟಿ ಈಶ್ವರನನ್ನೇ ವಿವಾಹವಾದಳು.

ಈ ಬಗ್ಗೆ ಇನ್ನೊಂದು ಕಥೆಯಿದೆ ಶುಂಭ-ನಿಶುಂಭರೆಂಬ ದೈತರು ಲೋಕ ಕಂಟಕರಾಗಿ ದೇವತೆಗಳನ್ನು ತೊಂದರೆ ಪಡಿಸುತ್ತಿರಲು ದೇವತೆಗಳೆಲ್ಲ ಪಾರ್ವತಿಯನ್ನು ಮೊರೆಹೊಕ್ಕರು, ಆಗ ಪಾರ್ವತೀಯ ಶರೀರದಿಂದ ಕೌಶಿಕಿ ಎಂಬ ಸುಂದರಿ ಅವಿರ್ಭವಿಸಿ (ಹುಟ್ಟಿ) ಆ ರಾಕ್ಷಸಿಯನ್ನು ಸಂಹರಿಸಿದಳು ಕೌಶಿಕಿ ಅವಿರ್ಭಸಿದ ಮೇಲೆ ಪಾರ್ವತಿ ಕಪ್ಪಾಗಿ ಕಂಡಳು ಶಿವ ಆಕೆಯನ್ನು ಕಾಳಿ ಎಂದು ಕರೆದ ಆಗ ಪಾರ್ವತಿ ತಪಸ್ಸು ಮಾಡಿ ಗೌರಶರೀರವನ್ನು ಪಡೆದಳು.

ಕಥೆಯ ನಿರೂಪಣೆಯಲ್ಲಿ ಬದಲಾವಣೆಯಿದ್ದರೂ ಕಪ್ಪು ಶರೀರವನ್ನು ತ್ಯಜಿಸಿ ಗೌರ ಶರೀರವನ್ನು ಪಡೆದ ಕಾರಣ ಪಾರ್ವತಿಗೆ 'ಗೌರಿ' ಎಂಬ ಎಂಬ ಅನ್ವರ್ಥನಾಮ ಬಂತು ಎಂಬ ವಿಷಯ ಸತ್ಯ ಭಾದ್ರಪದ ಶುದ್ಧ ತೃತೀಯಾ ದಿವಸಾದಿಯಾಗಿ ಪಾರ್ವತಿ ಆವಿರ್ಭವಿಸಿದುದರಿಂದ ಆ ದಿವಸ ಗೌರೀ ವ್ರತವನ್ನು ತಪ್ಪದೇ ಆಚರಿಸುವುದು ಕರ್ನಾಟಕದಲ್ಲಿ ರೂಢಿಯಲ್ಲಿದೆಳ. (ವಿಶ್ವಕೋಶ ಸಂಪುಟ ಐದು ಪುಟ ೯೦೨ ರಲ್ಲಿ ಹೇಳಲಾಗಿದೆ.) ಇಲ್ಲಿ ಗೌರ ಶರೀರವನ್ನು ಪಡೆದ ಪಾರ್ವತಿಯ ರೂಪಾಂತರ 'ಕಾಳಿ'ಯ ಮತ್ತೊಂದು ಅವತಾರ 'ಗೌರಿ' ಗೌರವರ್ಣಕ್ಕೇ ಪ್ರಾಧಾನ್ಯ ಕೊಡಲಾಗಿದೆ ಹೀಗಾಗಿ ಹಳದಿ-ಬಿಳುಪು ಮಿಶ್ರಬಣ್ಣದವಳು ಗೌರವರ್ಣದವಳು 'ಗೌರವ್ವ' ನೆಂಬ ನಾಮಾಂಕಿತದಿಂದ ಲೋಕದಲ್ಲಿ ಪೂಜೆಗೊಳ್ಳುತ್ತಿದ್ದಾಳೆ-ಎಂಬುದು ವಿದಿತವಾಗುತ್ತದೆ.

ಜನಪದ ಹಾಡುಗಳಲ್ಲಿ 'ಗೌರಿ' ಪದವು ವ್ಯಾಪಕಾರ್ಥದಲ್ಲಿ ಬಳಕೆ ಯಾವುದು ಕಂಡು ಬರುತ್ತದೆ. ಗೌರಿ–ಪಾರ್ವತಿಯನ್ನು ಒಂದು ಎರಡು ಸಮೀಕರಣ ಮಾಡಿ ಕಂಡಿರುವುದು ತಂಬಾ ಕಡಿಮೆ ಪೌರಾಣಿಕ ಕಲ್ಪನೆಯಿಲ್ಲದ ಸಮಾಜದಲ್ಲಿ ಅವಳನ್ನು ಉದಾತ್ತೀಕರಿಸಿ ಹೆಣ್ಣು ಮಕ್ಕಳು ಗೌರಮ್ಮನಂತೆ ಇರಬೇಕು ಎಂಬ ಭಾವನೆ ಅವರದ್ದಾಗಿದೆ. ಆದರ್ಶ ಗೃಹಿಣಿಯ ಪರಿಪೂರ್ಣ ಕಲ್ಪನೆಯನ್ನು ಗೌರಮ್ಮನಲ್ಲಿ ಹಿಡಿದಿಟ್ಟಿದ್ದಾರೆ. ಅವಳನ್ನು ತಮ್ಮ ಮನೆಯ ಹೆಣ್ಣು ಮಗಳು ಎನ್ನುವ ನಿಟ್ಟಿನಲ್ಲಿಯೇ ನೋಡಿದ್ದಾರೆ ಎಂಬುದು ಗೌರಮ್ಮನನ್ನು ತವರಿಗೆ ಕರೆಯಿಸುವ ಅವಳು ಉಣ್ಣುವ ಉಡುವ–ತೋಡುವ ಬಯಕೆಗಳನ್ನು ಈಡೇರಿಸುವ ಗಂಡನ ಮನೆಗೆ ಕಳಿಸುವಾಗಿನ ಹಾಡುಗಳಿಂದ ಮನದಟ್ಟಾಗುವತ್ತದೆ. ಒಟ್ಟಾರೆ ಕಳಿಸುವಾಗಿನ ಹಾಡುಗಳಿಂದ ಮನದಟ್ಟಾಘುತ್ತದೆ. ಒಟ್ಟಾರೆ ಹೆಣ್ಣು ಮಗಳಿಗೆ ಸಿಗುವ ಕೊಡುವ ಗೌರವವನ್ನು ಗೌರವ್ವನಲ್ಲಿಯೇ ಗುಣಾತ್ಮಕವಾಗಿ ಸಮೀಕರಿಸಿದ್ದಾರೆ. ಹಾಗೆಯೇ ಆಗುಣವನ್ನು ವೃಷ್ಟಿ ರೂಪದಲ್ಲಿಯೂ ಸಮಷ್ಟಿರೂಪದಲ್ಲಿಯೂ ಹೇಳಿದ್ದಾರೆ. ಅಂದರೆ ಹೇಣ್ಣು ಹುಟ್ಟಿದ ಮನೆಗೆ ಮತ್ತು ಕೊಟ್ಟ ಮನೆಗೆ ಗೌರವ ತರುವಂತಹಳಾದ್ದರಿಂದ ಹೆಣ್ಣಿಗಿರುವ ಕೌಟುಂಬಿಕ ಮತ್ತು ಸಾಮಾಜಿಕ ಗೌರವವನ್ನು ಗೌರವ್ವನಿಗೆ ನೀಡಿದ್ದಾರೆ.

ಗೌರವ್ವನನ್ನು ಕುರಿತಂತೆ ಜನಪದರ ಮತ್ತು ನಾಗರಿಕ ಸ್ತ್ರೀಯರ ನೆನಪಿನಾಳದಲ್ಲಿ ಈಗಲೂ ಉಳಿದುಕೊಂಡು ಬಂದಿರುವ ಜನಪ್ರಿಯವಾಗಿರುವ 'ಗೌರಿ ಗೌರಿ ಗಾಣ ಗೌರಿ ಮ್ಯಾಣಾ ಗೌರಿ' ಆರತಿಯ ಹಾಡಿನಲ್ಲಿ ಅವಳ ವ್ಯಕ್ತಿತ್ವವೇ ಬಿಂಬಿತವಾಗಿದೆ. ಇಲ್ಲಿ ಹೆಸರಿಸಿರುವ ಗಾಣಾ ಗೌರಿ, ಮ್ಯಾಣಾ ಗೌರಿ ಯಾರು ? ಯಾವ ಸಂದರ್ಭದಲ್ಲಿ ಯಾವ ಮಾಸದಲ್ಲಿ ಪೂಜೆಗೊಳ್ಳುತ್ತಾಳೆ ಎಂಬುದರ ಬಗ್ಗೆ ಯಾವ ಪುರಾಣ ಕಾವ್ಯಗಳಲ್ಲಿಯೂ ಉಕ್ತವಾಗಿಲ್ಲ. ಆದರೆ ಈ ಗಾಣಾ ಗೌರಿ ಮ್ಯಾಣಾ ಗೌರಿ ಪದಗಳೇ ಸೂಚಿಸುವಂತೆ ಗಾಣದ ಕಸುಬಿನವರು ಅಂದರೆ ಗಾಣಿಗೇರರಿಂದ ಪೂಜೆಗೊಳ್ಳುವ ಗಾಣದೇವತೆಯಾಗಿದ್ದಾಳೆಂಬುದು ಸ್ಪಷ್ಟವಾಗುತ್ತದೆ.

ಆದ್ದರಿಂದ ಗಾಣಿಗರು ಪೂಜಿಸುವ ಗಾಣ–ಗಾಣದೇವತೆಗಾಣಾ ಗೌರಿಯಾಗಿದ್ದಾಳೆ. ಇನ್ನು ಕುಸುಬಿಯನ್ನು ಗಾಣಾವಾಡಿದ (ಕುಸುಬಿ ಗೌರಿ ಪದದ ಬಳಕೆಯೂ ಆಗಿದೆ) ಮೇಣದ ಗೌರಿ ಅಂದರೆ ಮೃದುದೇಹಿ ಮತ್ತು ಮೃದು ಸ್ವಭಾವದ ಸೂಕ್ಷ್ಮ ಸಂವೇದನಾಶೀಲೆ ಗೌರವ್ವನನ್ನು 'ಮ್ಯಾಣಾಗೌರಿ' ಎಂದು ಹೆಸರಿಸಿರಬೇಕು. (ಹೀಗೆ ಸೂಕ್ಷ್ಮಕಾಯದ ನಯ–ನಾಜೂಕಿನ ಮೃದು ಸ್ವಭಾವದ ಯುವತಿಯನ್ನುಜನಪದರು ಮ್ಯಾಣದ ಗೊಂಬಿ ಆಗ್ಯಾಳ' ಮ್ಯಾಣದಿಂದ ಮಾಡ್ಯಾರ ಆಕೆಯನ್ನ ಎಂದು ಹೇಳುವುದು, ಕೆಲವೊಮ್ಮೆ ಚೇಷ್ಟೆ ಮಾಡುವುದೂ ಉಂಟು)

ಒಟ್ಟಾರೆ ಗೌರವರ್ಣದವಳು, ಗಜಿರ ಕಳೆಯುಳ್ಳವಳು, ನೋಡಿದವರೊಗೆ ಅವಳ ಬಗ್ಗೆ ಅಭಿಮಾನ, ಗೌರವಭಾವನೆ ಹುಟ್ಟಿಸುವಂತವಳು ಎಂಬರ್ಥದಲ್ಲಿ ಜನಪದರು 'ಗೌರವ್ವ ಗೌರಮ್ಮ' ಎಂಬ ಅನ್ವರ್ಥಕನಾಮವನ್ನಿಟ್ಟಿರಬೇಕು ಶಿಷ್ಟ ಕಾವ್ಯಗಳಲ್ಲಿ ಅಪವಾದ ಮಾತ್ರವಾಗಿ ಬಳಕೆಯಾಗಿರುವ ಸೀಗಿ-ಗೌರಿ / ಸೀಗಮ್ಮ-ಗೌರಮ್ಮ ಎಂಬ ಅರ್ಥಪೂರ್ಣವಾದ ಪದಗಳನ್ನು ಹುಟ್ಟುಹಾಕಿದ ಶ್ರೇಯಸ್ಸು ಜನ ಪದರೀಗೆ ಸಲ್ಲುತ್ತದೆ. ಆನಪದ ಸಾಹಿತ್ಯಕೆ ಸಂದ ಕೊಡುಗೆ ಇದಾಗಿದೆ.

ಬೀದರ ಜಿಲ್ಲೆಯ ನಗರ ಗ್ರಾಮಗಳಲ್ಲಿ ಗೌರಿಯನ್ನು ಒಂಭತ್ತು ದಿನಗಳವರೆಗೆ ಕೂಡಿಸುತ್ತಾರೆ. ಕಟ್ಟಿಗೆಯಿಂದ ಮಾಡಿದ ಹೂಜಿ ಆಕಾರದ ಗೌರಿ ಕುಳ್ಳಿಯನ್ನು ಹಲವಾರು ಅಂಗಡಿಗಳಲ್ಲಿ ಮಾರಲು ಮಾರಾಟಕ್ಕೆಂದು ಇಟ್ಟಿರುತ್ತಾರೆ. ಕುಟುಂಬದವರು ತಮಗೆ ಎಷ್ಟು ಜನ ಹೆಣ್ಣು ಮಕ್ಕಳಿದ್ದಾರೆ, ಎಂಬುದು ಗಮನದಲ್ಲಿಟ್ಟು ಕೊಂಡು ಖರೀದಿ ಮಾಡಿ ತರುತ್ತಾರೆ. ಗೌರಿ ಹುಣ್ಣಿಮೆ ಒಂಭತ್ತು ದಿನಗಳಿರುವವರೆಗೆ ಗೌರಿ ಕುಳ್ಳಿಯನ್ನು ದಿನಾಲು ಒಂದೊಂದು ಸ್ಥಳದಲ್ಲಿಟ್ಟು ಪೂಜೆ ಮಾಡಿ ಆರತಿ ಹಾಡು ಹೇಳಿ ನೈವೇದ್ಯ ತೋರುವರು ಒಂದು ದಿನ ದೇವರ ಜಗುಲಿಯ ಮೇಲೆ, ಒಂದು ದಿನ ಬೀಸುವ ಕಲ್ಲಿನ ಮೇಲೆ ಮತ್ತೊಂದು ದಿನ ಮನೆಯ ಮಾಳಿಗೆಯ ಮೇಲಿಟ್ಟು ಪೂಜಿಸುವರು, ಬಾವಿಯ ಕಟ್ಟೆಯ ಮೇಲೆಯೂ ಸಹ ಗೌರಿ ಕುಳ್ಳಿಯನ್ನು ಇಟ್ಟು ಪೂಜಿಸಿ ಹಾಡುವರು ಹೀಗೆ ಎಂಟು ದಿನಗಳವರೆಗೆ ಒಂದೊಂದು ಸ್ಥಳದಲ್ಲಿಟ್ಟು ಪೂಜಿಸುವ ವಾಡಿಕೆ.

ಗೌರಿ ಹುಣ್ಣಿಮೆಯಂದು ಗ್ರಾಮದ ಹೆಣ್ಣು ಮಗಳು ೮-೧೦ ರಿಂದ ೧೨ ವಯಸ್ಸಿನ ಹುಡುಗಿಯರು ತಮ್ಮ ತಮ್ಮ ಗೌರಿಕುಳ್ಳಿಯನ್ನು ಸಿಂಗಾರ ಮಾಡಿ ಹೊಲಕ್ಕೊ ಅಥವಾ ಕೆರೆಗೊ ತೋಟಕ್ಕೋ ತೆಗೆದುಕೊಂಡು ಹೋಗಿ ಒಂದೆಡೆ ಎಲ್ಲರ ಗೌರ ಕುಳ್ಳಿಗಳನ್ನುಇಟ್ಟು ಪೂಜೆ ಮಾಡುವರು ಎಲ್ಲರು ಗೌರಿಯ ಕುರಿತು ಹಾಡುಹೇಳಿ ನೈವೇದ್ಯ ತೋರಿ ಎಲ್ಲರೂ ಊಟ ಮಾಡಿ ಸಂಭ್ರಮಿಸಿ ಅಲೆದಾಡಿ ಆಟ ವಾಡಿ ಕುಣಿದು ಕುಪ್ಪಳಿಸುವರು.

ಸಾಯಂಕಾಲ ಮನೆಗೆ ಬರುವಾಗ ಎಲ್ಲ ಹೆಣ್ಣು ಹುಡುಗಿಯರು ತಮ್ಮ-ತಮ್ಮ ಗೌರಿ ಕುಳ್ಳಿಗಳನ್ನು ತೆಗೆದುಕೊಂಡು ಚೆಂಡು ಹೂವಿನಿಂದ ಮಾಲೆ (ಸರ) ಮಾಡಿ ಕುಳ್ಳಿಯ ಮಧ್ಯದ ಗುಂಡಿಗೆ ಸಿಕ್ಕಿಸುವರು ಮಾಲೆಯನ್ನು ಕೈಯಲ್ಲಿ ಹಿಡಿದು ಗೌರಿ ಕುಳ್ಳಿ ಕೆಳಗಡೆ ನೇತಾಡುತ್ತಾ ಸಡಗರ - ಸಂಭ್ರಮದಿಂದ ಕೊನೆಗೆ ಕುಂಯ್ಯಾ ಮಾಡಿ ಧಾರ್ಮಿಕ ನಂಬಿಕೆ ಮತ್ತು ಆಚರಣೆಗಳ ಹಿನ್ನೆಲೆಯಲ್ಲಿಯೇ ಈ ಸೀಗಿ-ಗೌರಿ ಹಾಡುಗಳು ರಚನೆಯಾಗಿವೆ. ಇವುಗಳಲ್ಲಿ ತಾತ್ವಿಕ

ವಿಚಾರಗಳೂ ಅಡಕವಾಗಿರುತ್ತವೆ. ಕಾಲ ಕ್ರಮೇಣ ಆಧುನೀಕರಣದಿಂದ ಆಚರಣೆಗಳು ಸಂಪ್ರದಾಯಗಳಾಗಿ ಪರಿಣಮಿಸಿ ತಾತ್ವಿಕ ವಿಚಾರಗಳು ಗೌಣವಾಗುತ್ತವೆ ಇಲ್ಲವೇ ಮರತೇ ಹೋಗುತ್ತವೆ. ಜಾಗ ತೀಕರಣದ ಹಿನ್ನೆಲೆಯಲ್ಲಿ ನಮ್ಮ ನೆಲ ಸಂಸ್ಕೃತಿ, ಜಲ ಸಂಸ್ಕೃತಿ, ಕಾಪಾಡಿಕೊಳ್ಳುವ ಅಗತ್ಯತೆ, ಅನಿವಾರ್ಯತೆ ಹಿಂದಿಗಿಂತಲೂ ಇಂದು ಮುಖ್ಯವಾಗಿದೆ. ಓ ಎಲ್ಲ ವಿಚಾರಗಳ ಹಿನ್ನೆಲೆಯಲ್ಲಿ ಸೀಗಿ–ಗೌರಿ ಹಾಡು ಹಬ್ಬಗಳಲ್ಲಿ ಬಿಂಬಿತವಾಗಿರುವ, ಹಿಡಿದಿಟ್ಟಿರುವ ದೇಶಿ ಸಂಸ್ಕೃತೀಯ ಚಿಂತನೆಯನ್ನು ಸ್ಥೂಲವಾಗಿ ನಡೆಸಲಾಗಿದೆ. ಈ ಸಂಗ್ರಹದ ಸೀಗಿ–ಗೌರಿ. ಹಾಡುಗಳನ್ನು ಕ್ರಮವಾಗಿ ನಾಲ್ಕು ವಿಭಾಗಗಳಲಿ ವಿಂಗಡಿಸಲಾಗಿದೆ.

ವಿವಿದ ಜಿಲ್ಲೆಯ ಮತ್ತು ತಾಲೂಕಿನ ಗೌರಿ ಹುಣ್ಣಿಮೆಯ ವಿಶೇಷತೆ:

ಅ. ಬೆಳಗಾಂವಿ ಜಿಲ್ಲೆಯ ಸವದತ್ತಿ ತಾಲೂಕ ವಿಶೇಷತೆ: ಗೌರಿ ಹುಣ್ಣಿಮೆಯ ಹಿಂದಿನ ದಿನ ಹೂಗಾರ ಮನೇಲಿ ಕೆಂಪು ಮಣ್ಣಿನಿಂದ ಗೌರಿಯ ಮೂರ್ತಿಯನ್ನು ಮಾಡಿ ಅದಕ್ಕೆ ಆಭರಣಗಳ ಅಲಂಕಾರ ಮಾಡಿ ಹೊಸ ಸೀರೆಯನ್ನು ಉಡಿಸಿ ಹೂಗಳಿಂದ ಶೃಂಗಾರ ಮಾಡಿರುತ್ತಾರೆ. ಅಲ್ಲಿನ ಸಂಪ್ರದಾಯದ ಪ್ರಕಾರ ಮದುವೆಯಾಗಿ ಹೊಗಿದ್ದ ಹೆಣ್ಣು ಮಕ್ಕಳನ್ನು ಅಣ್ಣ ಅಥವಾ ತಂದೆ ಹೋಗಿ ತವರಿಗೆ ಕರೆದುಕೊಂಡು ಬರುತ್ತಾರೆ; ಮತ್ತು ಸಕ್ಕರೆಯಿಂದ ಮಾಡಿದ ಗೊಂಬೆಗಳನ್ನು ಒಂದು ತಾಟಿನಲ್ಲಿ ಜೋಡಿಸಿ ಅದರಲ್ಲಿ ದೀಪ ಹಚ್ಚಿ ಹೆಣ್ಣು ಮಕ್ಕಳೆಲ್ಲ ಹೊಸ ಬಟ್ಟೆ (ರೇಷ್ಮೇಸೀರೆ) ಉಟ್ಟುಕೊಂಡು ಗೆಳತಿಯರು, ಅಕ್ಕ–ತಂಗಿಯರೆಲ್ಲ ಕೈಯಲ್ಲಿ ಆರತಿ, ತಾಟು ಹಿಡಿದು ಹಾಡು ಹೇಳುತ್ತಾ ಸಂಪ್ರದಾಯವಿದ್ದ ಮನೆಯಲ್ಲಿ / ಗುಡಿಯಲ್ಲಿ ಗೌರಿಯನ್ನು ಕೂಡಿಸಿರುವ ಕಡೆಗೆ ಹೋಗುತ್ತಾರೆ.

ಗೌರಿ ಗೌರಿ ಎಂತ, ಗಣಪತಿ ಎಂಥ
ಮುತ್ತಿನ ಚೆಂಡು ಎಂತ ಹೋಗಿ ಬಾ ಗೌರಿ
ಸಾಗಿ ಬಾ ಗೌರಿ॥

ಎಲ್ಲರೂ ಸೇರಿ ಗೌರಿಗೆ ಆರತಿ ಮಾಡಿ ಹಾಡು ಹೇಳುತ್ತಾ ಮನೆಗೆ ಬಂದು ಮನೆಯ ಬಾಗಿಲಿಗೆ ಬೆಳಗಿ ಎಲ್ಲರೂ ಸಂಭ್ರಮ ಪಡುತ್ತಾರೆ.

ಬೀದರಿನ ನನ್ನ ಮಗನ ಸುಮಿತನ ಸಂಬಂಧ ಬೆಳಗಾಂವಿ ಜಿಲ್ಲೆಯ ಸವದತ್ತಿ ತಾಲೂಕಿನ ರುದ್ರಪ್ಪಾ ಮತ್ತು ರತ್ನಾ ದಂಪತಿಗಳ ಮಗಳಾದ ಅರ್ಪಿತಾ (ಶೈಲಾ)ಳ ಜೊತೆಗೆ ವಿವಾಹ ನಿಶ್ಚಯವಾಯಿತು. ಸಂಪ್ರದಾಯದಂತೆ ನಿಶ್ಚಿತಾರ್ಥವಾದ ಹೆಣ್ಣು ಮಕ್ಕಳಿಗೆ ಗಂಡನ ಮನೆಯರು ಸಕ್ಕರೆಯಿಂದ ಮಾಡಿದ ಗೊಂಬೆಗಳನ್ನು, (ಬಣ್ಣ–ಬಣ್ಣದ) ರೇಷ್ಮೆ ಸೀರೆ ಮತ್ತು ಹೂವಿನ ದಂಡಿಯನ್ನು ತರಬೇಕು. ಅಂದು ಅವಳಿಗೆ ಸೀರೆ ಉಡಿಸಿ ಮುತ್ತೈದೆರೆಲ್ಲಾ ಅವಳನ್ನು ಕೂಡಿಸಿ

ಅವಳಿಗೆ ಸಕ್ಕರೆ ಗೊಂಬೆಯಿಂದ ಕೂಡಿದ್ದ ತಾಟಿನಲ್ಲಿ ದೀಪ ಹಚ್ಚಿ ಆರತಿ ಮಾಡುತ್ತಾರೆ ಮತ್ತು ಹಾಡುಗಳನ್ನು ಹಾಡುತ್ತಾರೆ.

ಅಲ್ಲಿ ಮತ್ತೊಂದು ವಿಶೇಷತೆ ಏನೆಂದರೆ ಗೌರಿ ಹುಣ್ಣಿಮೆಗೆ ಮನೇಲಿ ಸತ್ತ ಹಿರಿಯರಿಗೆ ನೈವೇದ್ಯ (ಎಡೆ) ಹಾಕುವ ಸಂಪ್ರದಾಯವನ್ನು ನಾವು ಈ ಜಿಲ್ಲೆಯಲ್ಲಿ ಕಾಣುತ್ತೇವೆ. ಹಿರಿಯರ ಫೋಟೊವನ್ನು ಇಟ್ಟು ಅವರಿಗೆ ಒಪ್ಪುವ ಬಟ್ಟೆಯನ್ನು ತಂದು ಅವರು ಬದುಕಿದ್ದಾಗ ಯಾವ ಯಾವ ವಸ್ತುಗಳು ಆಹಾರ ಪದಾರ್ಥಗಳು ಇಷ್ಟಪಡುತ್ತಿದ್ದ ಅಡುಗೆ ಸಿಹಿ ತಿನಿಸುಗಳನ್ನು ಮಾಡಿ ಅವರ ಫೋಟೋದ ಎದುರಲ್ಲಿ ಇಟ್ಟು ಒಂದು ತಾಟಿನಲ್ಲಿ ಬೆಂಕಿ ಹಾಕಿ ಅದರಲ್ಲಿ ಧೂಪ ಹಾಕಿ ನೈವೇದ್ಯ ತೋರುತ್ತಾರೆ. ಎಲ್ಲರೂ ಸೇರಿ (ಕುಟುಂಬದ ಸದಸ್ಯರೆಲ್ಲರೂ) ಊಟ ಮಾಡುತ್ತಾರೆ. ತವರು ಮನೆಗೆ ಬಂದ ಹೆಣ್ಣು ಮಕ್ಕಳಿಗೆ ಹೊಸ ಸೀರೆಯನ್ನು ಉಡಿಸಿ ಗಂಡನ ಮನೆಗೆ ಕಳುಹಿಸುತ್ತಾರೆ. (ರತ್ನಾ ರುದ್ರಪ್ಪಾ ಹಂಚನಾಳ ಸವದತ್ತಿ ಬೆಳಗಾಂವಿ ಜಿಲ್ಲೆ)[೨]

ಆ. ಯಾದಗಿರಿ ತಾಲೂಕ : ಯಾದಗಿರಿ ತಾಲೂಕಿನಲ್ಲಿ ಪಡಸಾಲೆಯ ಒಂದು ಮಾಡದಲ್ಲಿ (ಅದಕ್ಕೆ ಗೌರಿ ಮಾಡವೆಂದೇ ಕರೆಯುಲಾಗಿದೆ) ಶಿವ-ಗೌರಿ-ಗಣಪ ಒಂದೇ ಪೀಠದಲ್ಲಿ ಕುಳಿತಿರುವಂತೆ ಬಡಿಗನಿಂದ ಮಾಡಿಸಿದ ಮೂತಿ ಇದ್ದು ಪ್ರತಿವರ್ಷವೂ ಅದನ್ನೇ ತೊಳೆದು ಇಟ್ಟು ಮತ್ತೆ ಪೂಜಿಸುವರು ಒಂಭತ್ತು ದಿನಗಳವರೆಗೆ ಹಾಡಿ ಕೊನೆಯ ದಿನ ಕಾರ್ತಿಕ ಹುಣ್ಣಿಮೆಯೆಂದು ನೈವೇದ್ಯ ಮಾಡಿ ಮುಗಿಸುವರು[೩]

ಇ. ಅಳಂದ ತಾಲೂಕ ಅಳಂದ ತಾಲೂಕಿನಲ್ಲಿ ಆಚರಣೆಯ ರೀತಿ ಬೇರೆಯಾಗಿದೆ ತಳವಾರ 'ಭಾಜದ' ಮನೆಗಳಿಗೆ ಒಂದೊಂದು ಬುಟ್ಟಿ ಮಣ್ಣು ತಂದು ಹಾಕುವನು (ಮಾಲೀಗೌಡ, ಪೋಲಿಸಗೌಡ, ಕುಲಕರ್ಣಿ, ಐಗೋಳು, ಅಕ್ಕಸಾಲಿಗರು, ಹೂಗಾರರು ಭಾಜದ ಮನೆಯವರು) ಅವನಿಗೆ ಕೊಬ್ಬರಿ, ಅಳ್ಳು, ಕುಬುಸದ ಕಣ ಕೊಡುವರು ಈ ರೀತಿ ತಯಾರಿಸಿ, ಸಾಯಂಕಾಲ ಅರಷಿಣ ಕುಂಕುಮದಿಂದ ಪೂಜಿಸಿ ಹೂ ಹೂ ಏರಿಸಿ ಪಟಾಕಿ ಹಚ್ಚಿ ಆರತಿ ಬೆಳಗುವರು ಗೌರಿಯ ಕೋಲು ಪದಗಳನ್ನು ಹಾಡುವರು ಆರತಿ ಮಾಡಿದ ಮೇಲೆ ಮತ್ತು ಇನ್ನೊಬ್ಬರಲ್ಲಿಗೆ ಹೋಗಿ ಅಲ್ಲಯೂ ಇದೇ ರೀತಿ ಪೂಜಿಸಿ ಹಾಡುವರು ಆಯಾ ಓಣಿಗಳಿಗೆ (ಗಲ್ಲಿಗಳಿಗೆ) ಹೋಗಿ ಹೀಗೆಯೇ ಹಾಡಿ ಮುಗಿಸಿದ ನಂತರ ಒಂದು ಮಣಿಯ ಮೇಲೆ ಮಾಡಿಟ್ಟಿದ್ದ ಗೌರಮ್ಮನ್ನನ್ನು ಊರಿನ ಪ್ರಮುಖ ಸ್ಥಳಗಳಲ್ಲಿ ವಾದ್ಯಗಳನ್ನು ಉದುತ್ತ ಭಾರಿಸುತ್ತ, ಭಜನೆ ಮಾಡುತ್ತ ತಂಡದವರು ಹೋಗುತ್ತಾರೆ, ಹೆಣ್ಣು ಮಕ್ಕಳು ಅವರನ್ನು ಊರ ಅಗಸಿಯತನಕ ಹಿಂಬಾಲಿಸುತ್ತಾರೆ. ಗಂಡಸರು ಊರ ಹೊರಗಿನ ಕೆರೆಗೋ, ಬಾವಿಗೋ ಹೊಲಕ್ಕೋ ಒಯ್ದು ವಿಸರ್ಜಿಸಿ ಮನೆಗೆ ಬರುತ್ತಾರೆ[೪]

ಈ. ಅಂಬಲಗಿ ಗ್ರಾಮ: ಅಂಬಲಗಿ ಗ್ರಾಮದಲ್ಲಿ ಗೌರಿ ಹುಣ್ಣಿಮೆಯಲ್ಲಿ ಗೌರಿ ಆಡುವುದೆಂದೇ ಹೇಳುತ್ತಾರೆ. ಈ ಮೇಲೆ ವಿವರಿಸಿದ ಆಚರಣೆಗಳಿಗಿಂತ ತುಂಬಾ ಭಿನ್ನವಾಗಿದೆ ದೀಪಾವಳಿಯ ಪಾಡ್ಯದ ದಿನದಂದು ಕುಂಬಾರನ ಮನೆಯಿಂದ ಮಣ್ಣಿನ ಕುಳ್ಳಿಯನ್ನುತಂದು ಪೂಜಿಸಿ ಆಡುತ್ತಿದ್ದರು ನಾಗರಿಕತೆ ಹಳ್ಳಿಗಳಿಗೆ ಕಾಲಿಟ್ಟಂತೆ ಮಣ್ಣಿನ ಕುಳ್ಳಿಯ ಬದಲಾಗಿ ಮರದಿಂದ ತಯಾರಿಸಿದಿ ಕುಳ್ಳಿಯನ್ನು ತರುತ್ತಾರೆ. ಅದರಲ್ಲಿ ಹಾಲು ತುಪ್ಪ ಹಾಕಿ ಮಂಗಳ ದ್ರವ್ಯಗಳಾದ ಅರಿಷಿಣ-ಕುಂಕುಮ ಇತ್ಯಾದಿಗಳನ್ನು ಏರಿಸಿ ಪೂಜಿಸುತ್ತಾರೆ. ಎರಡನೆಯ ದಿನ ಅದೇ ಕುಳ್ಳಿಯನ್ನು ಹೊಸ್ತಿಲ ಮೇಲಟ್ಟು ಪೂಜೆಗೈಯುವರು ಮೂರನೆಯ ದಿನ ಒರಳು ಕಲ್ಲಿನ ಮೇಲಿಟ್ಟು ನಾಲ್ಕನೆಯ ದಿನ ಬೀಸುವ ಕಲ್ಲಿನ ಮೇಲಿಟ್ಟು ಪೂಜೆ ಮಾಡುವರು ಐದನೆಯ ದಿನ ಸಮೀಪದ ದೇವರ ಗುಡಿಗೆ ಇಲ್ಲವೆ ಬಾವಿಯ ಕಟೆಗೆ ಬಯ್ದು ಪೂಜೆ ಮಾಡುವರು. ಹೀಗೆ ದಿನಾಲು ಪೂಜಿಸುವುದು, ಪೂಜಿಸುತ್ತ ಗೌರಿ ಹಾಡುಗಳನ್ನು ಹಾಡುವುದು ನಡೆಯುತ್ತಲೇ ಇರುವುದು.[೫೫]

ಹುಣ್ಣಿಮೆಗೆ ಎರಡು ಅಥವಾ ಮೂರು ದಿನವಿರುವಾಗ ಹಳ್ಳ, ಕೆರೆ, ನದಿಗೆ ಹೋಗುವರು. ಆ ಕುಳ್ಳಿಗೆ ಜೇಕಿನ ತಪ್ಪಲನ್ನು (?) ಕಟ್ಟಿ ಹೆರಳಿನಂತೆ ದಪ್ಪವಾಗಿ ಹಣೆಯುತ್ತ ಅದರ ಮಧ್ಯ-ಮಧ್ಯದಲ್ಲಿ ಚೆಂಡು ಹೂ, ಹೊನ್ನಿ ಹೂ ಸೆವಂತಿಗೆ ಹೂ, ಇತ್ಯಾದಿಗಳನ್ನು ಇಟ್ಟು ಅಂದಗೊಳಿಸುವರು ಅಲ್ಲಿಯೇ ? ಕುಳಿತು ತಾವು ಮನೆಯಿಂದ ಸಿದ್ಧಪಡಿಸಿಕೊಂಡು ತೆಗೆದುಕೊಂಡು ಹೋಗಿದ್ದ ಅಡುಗೆಯನ್ನು ಊಟ ಮಾಡುವರು ಕೊನೆಗೆ ಹೂಗಾರರಿಂದ ತಯಾರಿಸಿಕೊಂಡು ತಂದಿದ್ದ ತೆಪ್ಪದ ಮೇಲೆ ಕಣಕದ (ಹಿಟ್ಟಿನ) ದೀಪವನ್ನಿಟ್ಟು ನೀರಿನಲ್ಲಿ ಬಿಡುವರು ಆಗ.

ಕಲಕಲಗೌರಿ ಕೋಲ
ಕಂಚಿನಗೌರಿ ಕೋಲ
ಗಂಧದ ಬಟ್ಟ ನಿನಗ
ಕುಂಕುಮ ಬಟ್ಟು ನನಗ

ಎಂದು ಸಾಮೂಹಿಕವಾಗಿ ಹಾಡುವರು ಮನೆಗೆ ಮರಳುವಾಗ ದೀಪದ ಬಿಂಬವನ್ನು ನೋಡಿಯೇ ಬರುವರು ಏಕೆಂದರೆ ನೀರಿನಲ್ಲಿನ ದೀಪದ ಪ್ರತಿ ಬಿಂಬವನ್ನು ನೋಡಿದರೆ ಶುಭವಾಗುವುದೆಂಬ ಬಲವಾದ ನಂಬಿಕೆ. ಪೂಜೆ ಮಾಡಿದ ತಮ್ಮ ತಮ್ಮ ಕುಳ್ಳಿಗಳನ್ನು ಮನೆಗೆ ತಂದು ಜಗಲಿಯ ಮೇಲಿಟ್ಟು ಮತ್ತೆ ಪೂಜಿಸುತ್ತಾರೆ. ಗೌರಿ ಹುಣ್ಣಿಮೆಯ ದಿನ ಮಾಡುವ ಪೂಜೆಯೇ ಕಡೆಯ ಪೂಜೆಯಾಗುತ್ತದೆ.

ಉ. ಬಾಗಲಕೋಟ ನಗರ–ತಾಲೂಕ–ಗ್ರಾಮಾಂತರ: ಬಾಗಲಕೋಟ ನಗರ–ತಾಲೂಕ–ಗ್ರಾಮಾಂತರ ಪ್ರದೇಶಗಳಲ್ಲಿ ದೀಪಾವಳಿ (ದೀವಳಿಗೆ) ಅಮವಾಸ್ಯೆಯಾದ ಐದನೆಯ ದಿನ ಕಡೆ ಪಂಚಮಿಯ ದಿನ ಕೂಡಿಸುತ್ತಾರೆ. ಕುಂಬಾರನಲ್ಲಿಗೆ ಹೋಗಿ ಆತನಿಗೆ ಜಾಜಾ, ಜೋಳ, ಗೋಧಿ, ಅಕ್ಕಿ ಮೇಲೆ ಸ್ವಲ್ಪ ಹಣವನ್ನು ಕೊಟ್ಟು ನಂದಿಯ ಮೇಲೆ ಕುಳಿತ ಶಿವ–ಪಾರ್ವತಿಯ ಬಣ್ಣದ ಮೂರ್ತಿ ಇಲ್ಲವೆ ಶಿವ–ಪಾರ್ವತಿ ಜೊತೆಯಾಗಿ ನಿಂತಿರುವ ಮೂರ್ತಿಯ ಜೊತೆಗೆ ಪ್ರತ್ಯೇಕವಾಗಿ ಬಸುರಿ ಗೌರವ್ವನ ಮೂರ್ತಿಯನ್ನು ತರುತ್ತಾರೆ. ಗೌರವ್ವನನ್ನು ಕೂಡಿಸುವ (ಕುಳಿತು ಕೊಳ್ಳುವ) ಪದ್ಧತಿಯಿದ್ದ ಗುಡಿ/ಮಠ/ಮನೆಗಳಲ್ಲಿ ತಂದು ಕೂಡಿಸುತ್ತಾರೆ. ಅಂದಿನಿಂದ ಕನ್ಯೆ ಮಕ್ಕಳು ಆರತಿ ಬೆಳಗಲು ಹೋಗುತ್ತಾರೆ. ಈ ಮೊದಲು ಹೇಳಿದಂತೆ ಸೀಗವ್ವನಿಗೆ ಆರತಿಯಲ್ಲಿ ಏನಾದರೂ ತಿಂಡಿ / ತಿನಿಸು, ಪದಾರ್ಥಗಳನ್ನಿಟ್ಟುಕೊಂಡು ಬರುವಂತೆ ಇಲ್ಲಿಯೂ ಅದೇ ರೀತಿಯಾಗಿ ತರುತ್ತಾರೆ.

ಆರತಿ ತಟ್ಟೆಗೆ ಹುಣ್ಣಿಮೆ ದಿನ ಸಕ್ಕರೆಯಿಂದ ತಯಾರಿಸಿದ ವಿಧ–ವಿಧದ ಅಂದರ–ಚೆಂದದ ಗೊಂಬೆಗಳನ್ನಿಟ್ಟುಕೊಂಡು ಬೆಳಗಲು ಹೋಗುತ್ತಾರೆ. ಇನ್ನುದ್ದಾದಸಿಯ ದಿನ ಅಂದರೆ ತುಳಸಿ ಲಗ್ನದ ದಿನ ಓಣಿಯ ಹೆಣ್ಣು ಮಕ್ಕಳೆಲ್ಲ ಸೇರಿ ಬಸುರಿ ಗೌರವ್ವನಿಗೆ ಬಂಕಿ–ಬಯಕಿಯ ಊಟ ಕೊಟ್ಟು ಕುಬುಸ ಮಾಡುತ್ತಾರೆ. ಹುಣ್ಣಿಮೆಯ ದಿನದಂದು ಮಗುವನ್ನು ತೊಟ್ಟಿಲಿಗೆ ಹಾಕಿ 'ಗಣಪ'ನೆಂದು ಹೆಸರಿಡುತ್ತಾರೆ (ನಾಮಕರಣ ಮಾಡುತ್ತಾರೆ) ಹುಣ್ಣಿಮೆಯ ಮರುದಿನ ಗೌರವ್ವನನ್ನು ಗಂಡನ ಮನೆ ಕಳಿಸುತ್ತಾರೆ. ಅಂದರೆ ಸಮೀಪದ ಬಾವಿ, ಕೆರೆ, ನದಿಗಳಿಗೆ ವಿಧಿವತ್ತಾಗಿ ಪೂಜಿಸಿ ಹಾಡುಗಳನ್ನು ಹೇಳುತ್ತಾ ಹಾಕುತ್ತಾರೆ ಗೌರವ್ವನೊಂದಿಗೆ ಶಿವ–ಪಾರ್ವತಿಯನ್ನು ಬಾಯಿಗೆ ಹಾಕುತ್ತಾರೆ. ಅಂದು ಮಂಗಳವಾರವಿದ್ದರೆ ಮನೆ ಮಗಳನ್ನು ಗಂಡನ ಮನೆಗೆ ಕಳಿಸುವುದಿಲ್ಲ.

ಸೀಗಿ–ಗೌರಿ ಹಾಡುಗಳನ್ನು ಆಚರಣೆಯ ದೃಷ್ಟಿಯಿಂದ ಪರಿಶೀಲಿಸಿದಾಗ ಆಡಂಬರದಿಂದ ದೂರವಾಗಿರುವ ಕಡಿಮೆ ಖರ್ಚಿನ ಹಬ್ಬಗಳಾಗಿವೆ. ಸಂಸ್ಕೃತಿ ದೃಷ್ಟಿಯಿಂದ ಅರ್ಥ ಪೂರ್ಣ ಮತ್ತು ಔಚಿತ್ಯ ಪೂರ್ಣವಾಗಿವೆ ಎಂಬುದು ಗಮನಾರ್ಹ ಒಂದು ರೀತಿಯಲ್ಲಿ ಸಾಮಾಜಿಕ ಸ್ನೇಹ–ಸೌಹಾರ್ದದ ಸಂಕೇತವಾಗಿದೆ. ಇದರಲ್ಲಿ ಅಕ್ಷರಸ್ಥರು–ಅನಕ್ಷರಸ್ಥರು ಎಂಬ ತಾರತಮ್ಯ ಇರುವುದಿಲ್ಲ. ಮುಖ್ಯವಾಗಿ ಮನೋರಂಜನೆಯೇ ಈ ಹುಣ್ಣಿಮೆಗಳ ಆಶಯ–ಉದ್ದೇಶವಾಗಿದೆ.

೫ೀಗಿ – ಗೌರಿಯನ್ನೂ ಕೂಡಿಸಿದಾಗ / ಆಡುವಾಗ ಹೇಳುವ ಹಾಡುಗಳು ಮತ್ತು ಆರತಿ ಹಾಡುಗಳು.

ಸಾಮಾನ್ಯವಾಗಿ ಗೌರಿಯನ್ನು ಆಡುವಾಗ ಕನ್ಯೆಮಕ್ಕಳೆಲ್ಲರೂ ಒಂದೆಡೆ ಕೂಡಿದಾಗ, ಚಿತ್ರಗಳನ್ನು ಬಿಡಸುತ್ತಿರುವಾಗ ಮನೆಯಿಂದ ಮನೆಗೆ ಹೋಗುತ್ತಿರುವಾಗ, ಹೇಳುವ ಹಾಡುಗಳು ತುಂಬಾ ಸರಳ ಅರ್ಥದಿಂದ ಕೂಡಿದ್ದು ಪ್ರಾಸ ಬದ್ಧವಾಗಿರುತ್ತದೆ. ಉದಾ:-

ಒದ ಹೇರಕ್ಕಿ ಬಂದಾವ ಗೌರಿ
ಒಂದು ಬಾಗಿಲಿಗೆ ನಿಂತಾವ ಗೌರಿ
ರಾಯರಾಡೂದು ಹಾದಿ ಬೀದ್ಯಾಗ
ಶೇಟ್ಟಾರಾಡೂದು ಪಟ್ಟಣ ಸಾಲ್ಯಾಗ
ನಾವಾಡೂದು ಗವರಿ ಪಾಳ್ಯಾಗ
ಆಲೂರ ಚೆನ್ನಮ್ಮ ಕೈ ಕಟ್ಟಿ ನಿಂತಾಗ
ಬಾರಪ್ಪ ಬೆಳದಿಂಗಳ"
ಒಂದು ಚುಕ್ಕಿ ಚಂಡೇನ ಹೂವ
ತೇಲೂಸ್ತ ಮುಳಗುಸ್ತಾ
ಗಂಧದ ಮಡುವಾ ಢುಳೂಕುಸ್ತಾ ಕೋಲೆ.
ಒಂದ ಪವಟಣಗಿ ಏರುತ್ತ
ಒಂದ ಮುತ್ತ ಉದರಸ್ತಾ
ಏಕದಾರುತೆ ಗೌರಿ ಬೆಳಗದಾರುತೆ

ಹೀಗೆ ಒಂದು ಅಂಕಿಯಿಂದ ಐದು ಅಂಕಿಯವರೆಗೆ ಹೇಳುತ್ತಾ ಹೋಗುವರು ಹಾಗೆಯೇ ಒಂದು ಅಂಕಿಯಿಂದ ಐದು ಪ್ರಕಾರಗಳಲ್ಲಿರುವ ಹಾಡುಗಳನ್ನು ಹೇಳುತ್ತಾರೆ. ಉದಾ:-

ಕಣಕದಾರೂತಿ ಮಾಡೇನ ಗೌರಿ
ಭಾಳ ದೀವಿಗಿ ಹಚ್ಚೇನ ಗೌರಿ

ಹೀಗೆ ಹೂರಣದಾರೂತಿ; ಸಜ್ಜಕದಾರೂತಿ; ಸಕ್ಕರಿಯಾರೂತಿ, ಮತ್ತು ಬಾನದಾರೂತಿ ಮಾಡೇನ' ಎಂದು ಹಾಡುವರು' ಈ ಸಂದರ್ಭದಲ್ಲಿ ಹಾಡುವ ಹಾಡುಗಳಲ್ಲಿ ಗೌರಿಯನ್ನು ಕೂಡಿಸಿದಾಗ ಹೇಳುವ ಹಾಡುಗಳು ಮತ್ತು ಆರತಿ ಮಾಡುವಾಗ ಮಾತ್ರ ಹೇಳುವ ಹಾಡುಗಳೆಂದು ಪ್ರತ್ಯೇಕವಾಗಿಯೇನೂ ಹೇಳುವುದಿಲ್ಲ' ಆದರೆ ಎಲ್ಲಾ ರೀತಿಯ ಹಾಡುಗಳನ್ನು ಹಾಡಿದ ನಂತರ ಕೊನೆಯದಾಗಿ

ಗೌರಿ ಗೌರಿ ಗಾಣಾ ಗೌರಿ ಮ್ಯಾಣಾ ಗೌರಿ
ಕುಳ್ಳಿ ಗೌರಿ ಕುಸಬಿ ಗೌರಿ ಕುಂಕುಮ ಗೌರಿ

ಇತ್ಯಾದಿ ಹಾಡನ್ನು ಹೇಳಿ ಆರತಿ ಎತ್ತುವುದು ವಾಡಿಕೆ. ಇನ್ನು ಯದಂಕಿಯ ಹಾಡುಗಳು ಮತ್ತು ಐದು ಪ್ರಕಾರದ ಹಾಡುಗಳು ಇಂತಿಷ್ಟೇ ಅಂಕಿಯಲ್ಲಿರಬೇಕೆಂಬ ನಿಯಮವಿಲ್ಲ ಹಾಡುವವರ ಜಾಣ್ಮೆಗನುಗುಣವಾಗಿ ಹೆಚ್ಚು ಅಂಕಿಯಲ್ಲಿ ಬೆಳೆಸಲೂಬಹುದು ಇಲ್ಲಿ ಓದುಗರ ತಿಳುವಳಿಕೆಗಾಗಿ ಬರವಣಿಗೆಯ ಅನುಕೂಲಕ್ಕಾಗಿ ಐದು ಅಂಕಿಯ ಮಿತಿಗೆ ಒಳಪಡಿಸಲಾಗಿದೆ.

ಸಸ್ಯಾರಾಧನೆಗೆ ಸಂಬಂಧಿಸಿದಂತೆ ಹೆಸರಿಸಲಾಗಿರುವ ಅವರೆ, ತೊಗರಿ, ಎಳ್ಳು (ಹುಚ್ಚೆಳ್ಳು) ಕುಕ್ಕೇನ ಹೂ (ಹೊನ್ನಿಹೂ) ಚೆಂಡು ಹೂ, ಸೆವಂತಿಗೆ, ಅಚ್ಚಮಲ್ಲಿಗೆ ಇತ್ಯಾದಿಗಳು ಹೊಲದ ಬದಿಯಲ್ಲಿ ಬೆಳೆಯುವ, ನಿತ್ಯ ದೃಷ್ಟಿಗೆ ಬೀಳುವಂತಹ ಹೂಗಳು, ಕಾಸಿಲ್ಲದೆ ಸಿಗುವಂತಹ ಹೂಗಳಾಗಿವೆ. ಹೀಗಾಗಿ ಹಾಡುಗಳಲ್ಲಿ ಅವುಗಳನ್ನು ಹೆಸರಿಸಿರುವುದು ಸ್ವಾಭಾವಿಕ. ಆದರೆ ಅದೇ 'ಬಾರೋ ತಮ್ಮ ಗಿಣಿರಾಮ' ದಲ್ಲಿ ಬಂದಿರುವ–

ಗೌರಮ್ಮನ ಕಟ್ಟಿಮ್ಯಾಲೆ (ಉತ್ತತಿ) ಖಾರೀಕ ಗಿಡ ಹುಟ್ಟಿ
ಖಾರೀಕ ಹಣ್ಣ ಮೆಲಿಯೂತ ಬಾರೋ ತಮ್ಮಗಿರಿರಾಮ
ಗೌರಮ್ಮನ ಕಟ್ಟೀ ಮ್ಯಾಲೆ ಬಾದಾಮ ಗಿಡ ಹುಟ್ಟಿ
ಬಾದಾಮ ಹಣ್ಣು ಮೆಲಿಯೂತ ಬಾರೋ ತಮ್ಮ ಗಿಣಿರಾಮ ಇತ್ಯಾದಿ,

ಇಲ್ಲಿ ಬಳಕೆಯಾಗಿರುವ ಖಾರೀಕು, ಬದಾಮಗಳು ಈ ಭಾಗದ ಬೆಳೆಯಲ್ಲಿವಾದರೂ ಆರೋಗ್ಯ ದೃಷ್ಟಿಯಿಂದ ಬಾಣಂತಿಯರಿಗೆ, ಮಕ್ಕಳಿಗೆ ತುಂಬ ಅವಶ್ಯಕ–ಪೌಷ್ಠಿಕ ಆಹಾರವೆಂಬ ಕಲ್ಪನೆ ಅವರಿಗಿತ್ತು ಎಂಬುದು ತಿಳಿದ ಸಂಗತಿಯಾಗಿರುತ್ತದೆ. 'ಹೆಣ್ಣು ಮಕ್ಕಳೆಲ್ಲಾ ಗವರ್ಯಾಡಿ' ಮತ್ತು ಗವರಮ್ಮನನ್ನು ಬಣ್ಣಿಸುವ ಸಂದರ್ಭಗಳಲ್ಲಿ ಜನಪದ ಮಹಿಳೆಯ ನಿಸರ್ಗ ಸೌಂದರ್ಯ ಪ್ರಜ್ಞೆ ಗರಿಗೆದರಿನಿಂತಿದೆ;

ಚೆಚ್ಚೇದ ತೆನಿಮ್ಯಾಲ ಗುಜ್ಜಿ ಪಾತರಗಿತ್ತಿ
ಗುಜ್ಜಾನ ಗುಜ್ಜಿ ಗವರಮ್ಮ ಕೋಲ॥
ಗುಜ್ಜೀಯಾನ ಗುಜ್ಜಿ ಗವರಮ್ಮ ಬರುವಾಗ ಚೆಚ್ಚೇದ ಹೊಲ ಬಯಲಾಗಿ ಕೋಲ॥
ಜ್ವಾಳಾದ ತೆನಿಮ್ಯಾಲ ಜಾಣ ಪಾತರಗಿತ್ತಿ
ಜಾಣಾನ ಜಾಣೆಗವರಮ್ಮ ಬರುವಾಗ
ಜ್ವಾಳಾದ ಸಾಲ ಬಯಲಾಗಿ ಇತ್ಯಾದಿ...

ದೇಹ ಸೌಷ್ಟವನ್ನು ಗೌರಮ್ಮನ ಚೆಲುವಿಕೆಯನ್ನು ಕುರಿತು ಪ್ರಶಂಸಿಸುವ ಪ್ರಸಂಗದ ಹಾಡುಗಳಲ್ಲೆಲ್ಲ ಇವೇ ಸಾಲುಗಳು ಉಕ್ತವಾಗಿದೆ. ಈ ಪುನರುಕ್ತಿಯೂ ಹಾಡಿನ ಮೆರುಗನ್ನು ಅಧಿಕಗೊಳಿಸಿದೆ. ಇಲ್ಲಿ ಹಾಲು ತುಂಬಿದ ಸಜ್ಜೆ, ಜೋಳ, ಗೋಧಿ ತೆನೆಗಳು ಭಾರದಿಂದ ಬಾಗಿವೆ ಅವುಗಳ ಮೇಲೆ ಅಂದವಾದ ಬಣ್ಣ–ಬಣ್ಣದ ಪಾತರಗಿತ್ತಿಗಳು ಕುಳಿತು ಭೂದೇವಿಯ ಚೆಲುವನ್ನು ಇಮ್ಮಡಿಗೊಳಿಸಿವೆ ತೆನೆಗಳ ಭಾರದಿಂದ ಮೈ ತುಂಬಿಕೊಂಡು (ನೆಲಕಾಣಿಸದಷ್ಟು) ಡುಮ್ಮಾಗಿರುವ, ನೋಡುವವರನ್ನು ಆಕರ್ಷಿಸುತ್ತಿರುವ, ಕಣ್ಮನಗಳಿಗೆ ಮದುನೀಡುತ್ತಿರುವ 'ಗುಚ್ಚಾನ ಗುಜ್ಜಿ ಗವರಮ್ಮ ನನ್ನು ವರ್ಣಿಸುವ ರೀತಿಯಲ್ಲಿ ಜನಪದ ಮಹಿಳೆ (ಕವಯಿತ್ರಿ)ಯ ಕಲ್ಪನೆಯಿದೆ ಭಾವಗೀತೆಯ ಲಯವಿದೆ ಮಾಧಯ್ಯವಿದೆ–ಸೀಗಿ–ಗೌರಿ ತವರಿಗೆ ಬರುವಾಗ ಇರುವ ಮುಂಗಾರಿನ ಬೆಳೆಯ ಈ ಹುಲುಸು–ಸಮೃದ್ಧಿ, ಅವಳು, ಗಂಡನ ಮನೆಗೆ ಹೋದ, ಮೇಲೆ ಅಂದರೆ ರಾಶಿ ಮಾಡಿದಾಗ 'ಚೆಚೇದ ಸಾಲ ಬಯಲಾಗಿ' ಭೂತಾಯಿಯ ಮಡಿಲು

ಬರಿದಾಗುತ್ತದೆ. 'ಹಾಳು ಹಾಳು' ಎನ್ನಿಸುವುದೆಂಬ ಕಳವಳ ವಿಷಾದದ ಛಾಯೆ ಇಲ್ಲದೆ' ಧಾನ್ಯ ಸಂಪತ್ತು ತುಂಬಿದಾಗಿನ ಮನೆ ಸಂತೋಷ ಲವಲವಿಕೆ ಅಂದರೆ ಮಗಳು ಗವರಿ ಮನೆಗೆ ಬಂದಾಗಿನ ಖುಷಿ, ಅವಳು ಗಂಡನ ಮನೆಗೆ ಹೋದಾಗಿನಿಂದ ಅಂದರೆ ಭೂಮಿ ಬಯಲಾದಾಗ ಆ ಸಂತೋಷ ಬಹಳ ಹೊತ್ತು ಇರುವುದಿಲ್ಲ, ಹೀಗೆ ಏಕಕಾಲಕ್ಕೆ ಅನುಭವಿಸುವ ಹೆಣ್ಣಿನ ನಲಿವು-ನಿರಾಶೆಯ ಸಮ್ಮಿಶ್ರ ಭಾವ ಹೃದಯ ಸ್ಪರ್ಷಿಯಾಗಿ ಮೂಡಿಬಂದಿದೆ ಕೃಷಿಕ ಹೆಣ್ಣು ಮಗಳು ಕೃಷಿಕಳಾಗಿ ನಿಸರ್ಗ ಬೆಳೆ-ಧಾನ್ಯಗಳೊಂದಿಗೆ ಎಷ್ಟೊಂದು ಆಧ್ಯಾತ್ಮಳಾಗಿ ಬದುಕುತ್ತಿದ್ದಳು. ಅದನ್ನು ಅನುಭವಿಸುತ್ತಿದ್ದಳು. ಎಂಬುದು ಈ ಹಾಡುಗಳಿಂದ ವ್ಯಕ್ತವಾಗುತ್ತದೆ. 'ಕಂಚಿನ ಗವರಿ ಕೋಲೆ' ಹಾಡಿನಲ್ಲಿ ಜನಪದ ಮಹಿಳೆ ತನ್ನ ಮನದ ಅಪೇಕ್ಷೆ ಬೇಡಿಕೆಯನ್ನು ಗವರಮ್ಮನಲ್ಲಿ ಮುಕ್ತ ಮನಸ್ಸಿನಿಂಧ ಹೇಳಿಕೊಂಡಿದ್ದಾಳೆ.

ಕೋಲು ಕೋಲು ಗವರಿ ಕೋಲೆ
ಕಂಚಿನ ಗವರಿ ಕೋಲೆ
ಬಂದೆಳಿ ಸರ ನಿನಗ
ಘಮದಧ ಭರ್ತಾೂ ಣಣಘೇ

ಎರಡೆಳೆ ಸರ ನಿನಗ
ಕುಂಕುಮ ಬಟ್ಟು ನನಗ

ಮೂರೆಳೆ ಸರ ನಿನಗ
ಮುತ್ತೈತನ ನನಗ

ಹೀಗೆಯೇ ಮುಂದುವರಿದು ಹರಕಿನಬಾನ, ಹೇಳಿಕೆ ಪತ್ತಳ ಕಂಟಲದಕ್ಕಿ ತನಗಿರಲಿ, ಕೊನೆಯದಾಗಿದೆಯೆಂಬಂತೆ ಒಂಭತ್ತೆಳಿ ಸರ ನಿನಗ ಟೊಪ್ಪಿಗಿ' ಮಗನ ನನಗ ಕೊಡೆಂದು ಕೇಳಿಕೊಳ್ಳುತ್ತಾಳೆ. ಇಲ್ಲಿ ಒಂದೆಡೆ 'ಬಂಗಾರ ಸರ' ಸಂಪತ್ತು ಮತ್ತೊಂದೆಡೆ ದವಸ ಧಾನ್ಯದ ಸಂಪತ್ತು ಇನ್ನೊಂದೆಡೆ ಮಂಗಳ ದ್ರವ್ಯಗಳ ಸಂಪತ್ತನ್ನು ಹೇಳಲಾಗಿದೆ ಬಂಗಾರಸರ ಖನಿಜ ಸಂಪತ್ತೆಲ್ಲಾ ಗವರಿಗೇ ಇರಲಿ ತನಗೆ ಮಾತ್ರ ಗಂಧ-ಕುಂಕುಮ ಮುತ್ತೈದಿತನದ ಭಾಗ್ಯ ಸದಾ ಇರಲಿ ಅದರೊಂದಿಗೆ ಜೀವನಾವಶ್ಯಕ ವಸ್ತುಗಳಾದ ಧಾನ್ಯ, ಸಂಪತ್ತು, ಹರಕಿನಬಾನ, ಕುಚ್ಚಲಕ್ಕಿಯ ಸಮೃದ್ಧಿಯಿರಲಿ, ಹಾಗೆಯೇ ತನ್ನ ವಂಶವನ್ನು ಉಳಿಸುವ ಬಳೆಸುವ ಕೃಷಿ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗಲು ತನಗೊಬ್ಬ ಟೊಪ್ಪಿಗೆ ಮಗನನ್ನು ದಯಪಾಲಿಸಲೆಂದ ಬೇಡಿಕೊಳ್ಳುತ್ತಾಳೆ. ಒಟ್ಟಾರೆ ವ್ಯಕ್ತಿ ಹಿತದಲ್ಲಿ ಸಮಷ್ಟಿ ಹಿತ ಕಲ್ಯಾಣದ ಸಂದೇಶವಿದೆ.

ಮತ್ತೆ ಬೇರೆ ಹಾಡುಗಳಲ್ಲಿ ಮುತ್ತು, ಹವಳ, ಮಾಣಿಕ್ಯ, ವಜ್ರ,-ವೈಡೂರ್ಯಗಳ ಬೇಡಿಕೆಯನ್ನು ಗವರಮ್ಮನ ಮುಂದಿಟ್ಟಿದ್ದರೂ ಅವುಗಳೆಲ್ಲವೂ ಕ್ಷಣಿಕ ತೃಪ್ತಿಯನ್ನು

ನೀಡುವಂಥಹವು ಎಂಬ ಅರಿವು ಅವಳಿಗಿದೆ. ಈ ಶ್ರೀಮಂತಿಗೆ ತೋರಿಕೆಗೆ, ಹೇಳಿಕೊಳ್ಳುವುದಕ್ಕೆ ಚೆಂದ ಆದರೆ ಹೊಟ್ಟೆ ತುಂಬಿಸುವುದಕ್ಕಲ್ಲ. ಎಂಬ ವಾಸ್ತವಿಕಾಂಶವನ್ನು ಬಲ್ಲವಳಾಗಿದ್ದಾಳೆ. ಹೀಗಾಗಿ ಈ ಕ್ಷಣಿಕ ಸುಖದ ಸಂಪತ್ತಿಗೆ ಅಷ್ಟಾಗಿ ಒತ್ತುಕೊಟ್ಟಿಲ್ಲ.

ಸಸ್ಯಾರಾಧನೆಗೆ ಸಂಬಂದಿಸಿದಂತೆ ರಚನೆಯಾದ ಹಾಡುಗಳಲ್ಲಿ ಮುಖ್ಯವಾಗಿ ಬಿಂಬಿತವಾಗಿರುವುದು ಕೃಷಿ ಸಂಸ್ಕೃತಿ. ಇಲ್ಲಿ ಧಾನ್ಯ ಸಮೃದ್ಧಿಗೆ ಪ್ರಥಮ ಆದ್ಯತೆ "ಅನ್ನ ದೇವರ ಮುಂದೆ ಇನ್ನೊಂದು ದೇವರಿಲ್ಲ" ಎಂದು ನಂಬಿದವರು ಜನಪದರು ಅಂತೆಯೇ ಭೂಮಿತಾಯಿ ಕೊಟ್ಟ ಸಂಪತ್ತು ತಮಗಿರಲಿ, ಅದುವೇ ಶಾಶ್ವತವಾಗಿರಲಿ ಎಂಬ ಆಶಯ, ಬೇಡಿಕೆ ಈ ಹಾಡುಗಳಲ್ಲಿ ಹಾಸುಹೊಕ್ಕಾಗಿದೆ 'ನಮ್ಮ ಗವರಿಗೆ ಏನೇನ ಸಿಂಗಾರ' ದಲ್ಲಿ ಬಂದಿರುವ ವರ್ಣನೆ ಮೇಲೆ ನಿರೂಪಿಸಿದಕ್ಕಿಂತ ಭಿನ್ನವಾಗಿದೆ.

ಅಯ್ಯಗೋಳ ಗವರಿಗೆ ಏನೇನ ಸಿಂಗಾರ
ವಿಭೂತಿ ಬಟ್ಟ ಕುಡಿನತ್ತು.
ಅಕಸಾಲ್ಯಾರ ಗವರಿಗೆ
ಅಗಸಿ ಕಾಳಟ್ಟು ಹೂ ಬುಗುಡಿ
ಕುಂಬಾರ ಗವರಿಗೆ... ಕುಂಬಳದ ದಡಿ ಸೀರ ಕುಡಿನತ್ತ
ಸೆಟ್ಟರ ಗವರಿಗೆ... ಪಟ್ಟೋಳಿ ಸಿರಿ.
ಹೂಗಾರ ಗವರಿಗೆ... ಹೂವಿನ ದಂಡಿ ನನೆದಂಡಿ,

ಆಯಾ ವೃತ್ತಿಧರ್ಮವನ್ನು ಗುರುತಿಸಿ ವರ್ಣಿಸಿರುವುದು ಜನಪದ ಕವಯಿತ್ರಿಯ ವ್ಯವಹಾರಿಕ ಬೌದ್ಧಿಕ ಜಾಣ್ಮೆ ನಿಜಕ್ಕೂ ಮೆಚ್ಚುವಂತಹದ್ದು, ಅಕಸಾಲ್ಯಾರ ಗವರಿಗೆ ಅಗಸೀ ಕಾಳಮ್ಮ ಹೂಬುಗಡಿ ಎಂದಿರುವುದು ಆತನ ಜಿಪುಣತನವನ್ನು ಎತ್ತಿ ತೋರಿಸುತ್ತದೆ.

'ಗೌರಮ್ಮ ಹಡದಾಳ ಹೆಣ್ಣು'ದಲ್ಲಿ
ಅಡವಿಯ್ಯಾಗ ಇರುವುದು ಪಲ್ಲ್ಯಾ
ಗಂಡಸರಿಗೆ ಹೋಚ್ಚದು ಶಲ್ಲ್ಯಾ
ನಮ್ಮ ಗವರಮ್ಮ ಇಟ್ಟಾಳವೆಲ್ಲ್ಯಾ
ಹೊಲದಲ್ಲಿ ಇರುವದು ಕುಂಟಿ
ಕುಂಟಿಗಿ ಹಚ್ಯಾರ ಹೆಂಟಿ
ನಮ್ಮ ಗವರಮ್ಮ ಇಟ್ಟಾಳ ಗಂಟಿ

ಹೀಗೆ ಈ ಹಾಡು ಗಬ್ಬಗಳು ಕೆಲವು ಪ್ರಾಸಬದ್ಧವಾಗಿ ಒಡಪಿನ ಧಾಟಿಯಲ್ಲಿ ಇದ್ದು ಜನಪ್ರಿಯವಾಗಿವೆ. ಸಾಂಗತ್ಯದ ರೀತಿಯಲ್ಲಿ ಲಯಬದ್ಧವಾಗಿವೆ. ಹಾಡಿದಾಗಲೇ ಈ ಗೀತೆಗಳ ಮಾಧುರ್ಯ, ಸ್ವಾರಸ್ಯ ಹೆಚ್ಚುತ್ತದೆ. ಕಿವಿಗೆ ಇಂಪು ಮನಕ್ಕೆ ಉಲ್ಲಾಸ ನೀಡುತ್ತದೆ.

ಸೀಗಿ ಗೌರಿಯನ್ನು ತವರಿಗೆ ಕರೆದುಕೊಂಡು ಬರುವ ಮತ್ತು ಗಂಡನ ಮನೆಗೆ ಕಳುಹಿಸಿಕೊಡುವ ಸಾಂದರ್ಭಿಕ ಹಾಡುಗಳು

ಜನಪದರು ಸೀಗೆ-ಗೌರಿಯನ್ನು ತಮ್ಮ ಮನೆಯ ಮಗಳೆಂಬ ನಿಟ್ಟಿನಲ್ಲಿಯೇ ಕಂಡಿದ್ದಾರೆ. ಎಂದು ಈ ಮೊದಲೇ ಹೇಳಲಾಗಿದೆ. ಅದರಿಂದ ಈ ಹಾಡುಗಳಲ್ಲಿ ಮದುವೆಯಾದ ಮಗಳನ್ನು ಹಬ್ಬ-ಹರಿದಿನಗಳು ಬಂದಾಗ ತವರಿನವರು (ಅಣ್ಣ-ತಂದೆ) ಕರೆಯಲು ಹೋಗುವುದು ಮಗಳು ಅವರ ಬರುವಿಕೆಗಾಗಿ ಕಾತರದಿಂದ ಕಾಯುವುದು ಅಣ್ಣ-ತಂದೆ ಬಂದರೆ ಸಂಭ್ರಮದಿಮದ ಅತಿಥ್ಯ ನೀಡುವುದು. ಅತ್ತೆ-ಮಾವರ ಅನುಮತಿಯನ್ನು ತಂದೆ ಕೇಳಿದರೆ, ಗಂಡನ ಅನುಮತಿಯನ್ನು ತಾನು ಪಡೆದು ಕುಣಿಯುತ್ತ ತಾನು ಬರುವುದು. ಪಂಜರದ ಗಿಳಿ ಪಂಜರದಿಂದ ಬಿಡುಗಡೆ ಪಡೆದಂತೆ ಹಾಯಾಗಿ-ಮುಕ್ತವಾಗಿ ತಾಯಿ-ತಂಗಿ-ಗೆಳತಿಯರೊಂದಿಗೆ ಹರಟೆ ಹೊಡೆಯುವುದು, ತಾಯಿ ನಿತ್ಯ ಹೊಸದೊಂದು ತಿನಿಸು ಮಾಡಿ ಉಪಚರಿಸುವುದು ಉಣಿಸುವುದು ಆದರೆ ಆಗಲೇ ಗಂಡ ಕರೆಯಲು ಬಂದರೆ ತುಟಿ ಪಿಟಕೆನ್ನದೆ ಅವನ ಬೆನ್ನು ಹತ್ತಿ ಬರುವದು-ಇದೇ ಮೊದಲಾದ ಲೋಕದ ನಡವಳಿಕೆಗಳು ಯಥಾವತ್ತಾಗಿ ಬಿಂಬಿತವಾಗಿವೆ. ಉದಾ:- ಗೌರಿಗೆ ಹಬ್ಬಕ್ಕೆ ತವರಿಗೆ ಹೋಗುವ ಬಹಳಷ್ಟು ಹಂಬಲ-ಆಸೆ, ಗಿರಿರಾಜ ಕರೆಯಲು ಬಂದಿದ್ದಾರೆ. ಆದರೆ ಶಿವನ ಎದುರಿಗೆ ನಿಂತು ಕೇಳುವ ಧೈರ್ಯವಿಲ್ಲ. ಅದಕ್ಕೆ ಶಿವನಿಗೆ ಕೊಂಚ ಮರೆಯಾಗಿ ನಿಂತುಹೀಗೆ ಕೇಳಿದಳಂತೆ.

ಕಾಜೀನ ಕಂಬಕ ನಿಂತಾಳ ಶ್ರೀಗೌರಿ
ಕಾಜೀನ ಬಳಿಯ ಸರಸೂತ ಕೇಳ್ಯಾಳ
ಐದದಿನ ಇದ್ದು ಬರುವೇನ॥

ಇಲ್ಲಿ ವರ್ಷದ ಕಡು ಕೋಪದ ಗಂಡನನ್ನು ನೇರವಾಗಿ ನೋಡಿ ಕೇಳುವ ಧೈರ್ಯವಿಲ್ಲ. ಆದರೆ ತವರಿನ ಆಸೆಯನ್ನು ಆದುಮಿಡಲಾರದೆ ಹೆದರಿ-ಹೆದರಿ ಕೇಳುವ ಹೆಣ್ಣಿನ ಚಿತ್ರಣ ಕಣ್ಮುಂದೆ ಬಂದು ನಿಲ್ಲುತ್ತದೆ. ಗೌರಿ ಹಬ್ಬಕೆ ತಂದೆ ಕರೆಯಲು ಬಂದಿದ್ದಾನೆ. ಗಂಡನನ್ನು ತಂದೆ ನೇರವಾಗಿ ಕೇಳಿದರೆ ಎಲ್ಲಿ ಬೇಡವೆನ್ನುವನೋ ಎಂಬ ಅಳುಕು ತವರಿನ ಸೇಳೆತ ಆಗ ತಾನೇ ಮುಂದಾಗಿ ಗಂಡನ ಅನುಮತಿ ಪಡೆಯುವ ಗವರವ್ವನ ಚಿತ್ರಣವಿಲ್ಲದೆ;

(ತಾಯಿ ಮಕ್ಕಳು ನೆರೆದಾರ (ತವರಲ್ಲಿ) ತವರಾಗ)
ಬಾಳೀಯ ಕಂಬಕ್ಕ ಬಾಗಿ ನಿಂತಾಳ ಗೌರಾ
ಬಂಗಾರದ ಬಳಿಯ ತಿರವೂತ ಕೋಲು ಕೋಲ ॥
ಬಂಗಾರದ ಬಳಿಯ ತಿರವೂತ ಕೇಳ್ಯಾಳ
ಹೋಗಿ ಬರತೀನಿ ತವರಿಗೆ ಕೋಲು ಕೋಲ॥

ತನ್ನ ಬರುವಿಕೆಯನ್ನು ಗಮನಿಸದ ಗಂಡನ ಲಕ್ಷ್ಯವನ್ನು (ಗಮನ) ತನ್ನೆಡೆ ಸೆಳೆಯಲು ಕೈ ಬಳೆಗಳನ್ನು ಮೇಲೆ ಕೆಳಗೆ ಸರಿಸುತ್ತಾಳೆ. ಆತ ತನ್ನೆಡೆಗೆ ಹೊರಳಲು ಮೇಲ ಧ್ವನಿಯಲ್ಲಿ ಅಪ್ಪ ಬಂದಾರ ಕರಿಲಾಕ ತವರಿಗೆ ನಾಲ್ಕು ದಿವಸ ಹೋಗಿಬರ್ತೀನಿ– ಎಂದು ನುಡಿದು ಅನುಮತಿಗಾಗಿ ಕಾಯುತ್ತಾಳೆ. ಗಂಡನು ಕೇಳಿಯೂ ಕೇಳಿಸದಂತೆ ಸುಮ್ಮನಿರಲು, ಮತ್ತೆ ಮುಂದುವರಿದು ನನ್ನ ತವರವರು ಭಾಳ ಬಡವರು ಅವರು ಉಣ್ಣುವುದು ಅಕ್ಕಿ, ಜೋಳ, ರಾಗಿಯ ರೊಟ್ಟಿ, ಅದರ ಮೇಲೆ ಗೋಳಿಯ ಪಲ್ಲ್ಯಾ, ರಾಜಗೀರಿಯ ಪಲ್ಲ್ಯಾ ಆದರೂ ಅಂಥವರ ಮನೆಯಲ್ಲಿ ಬಂದ ಹತ್ತ ದಿನವಿದ್ದು ಬರ್ತೀನಿ ಎಂದು ಆತನ ಮನ ಒಡಂಬಡುವ ರೀತಿಯಲ್ಲಿ ಕೇಳಿಕೊಳ್ಳುತ್ತಾಳೆ. ಇಲ್ಲಿ ಉತ್ತಮ ಸಂಸ್ಕಾರವನ್ನು ಪಡೆದ ಗಂಡನನ್ನು ಅರ್ಥೈಸಿಕೊಂಡಿರುವ ನಯ–ವಿನಯದ ಸುಸಂಸ್ಕೃತ ಹೆಣ್ಣಿನ ಚಿತ್ರಣವಿದೆ. ಆದರೆ ಅದೇ ಗಂಡನಾದವನು ಅವಳ ಬಾಯಿಂದ ತವರವರು 'ಬಡವರು' ಎಂಬ ಶಬ್ದ ಕಿವಿಗೆ ಬೀಳುತ್ತಲೇ–ಅವೇಶಕ್ಕೊಳಗಾಗುತ್ತಾನೆ.

ಸರಗೀಯ ಉಚ್ಚೈಂದ ಸರಗೋಳ ಉಚ್ಚೈಂದ
ದಾರ ಧರಸೆಂದ ಕೊರಳಲಿ ಕೋಲು ಕೋಲ ॥
ದಾರ ಧರಿಸೆಂದ ಕೊರಳಲಿ ತವರ ಮನಿಯಾಗ
ತಾಳಿ ಸಾಮಾನಿಟ್ಟ ಬರತಿಯೆಂಬ ಕೋಲು ಕೋಲ॥
ವಾಲೀಯ ಉಚ್ಚೈಂದ ಬುಗಡಿಯ ಉಚ್ಚೈಂದ
ಬೆಂಡ ಧರಿಸೆಂದ ಕಿವಿಯಲಿ ಕೋಲು ಕೋಲ॥

ಇಲ್ಲಿ ಶ್ರೀಮತಂತರ ಶ್ರೀಮಂತಿಕೆಯ ಸೊಕ್ಕು ದರ್ಪ ಮತ್ತು ಅವರಿಗೆ ಬಡವರ ಬಗ್ಗೆ ಇರುವ ಅಸಡ್ಡೆ, ಮಗಳ ಮೈ ಮೇಲಿನ ಒಡವೆಗಳನ್ನು ಮಾರಿಕೊಳ್ಳುವ ಲಾಲಚಿಗಳೆಂಬ ಅಸಹ್ಯ ತಿರಸ್ಕಾರ ವ್ಯಕ್ತವಾಗಿದೆ. ಅದಕ್ಕೆ ಸಮಾನ ಅಂತಸ್ಥರೊಂದಿಗೆ ಸಂಬಂಧ–ಬೀಗತನ ಬೆಳೆಸಬೇಕು ಇಲ್ಲದಿದ್ದರೆ ಹೆಣ್ಣು ಗಂಡನ, ಗಂಡನಸಂಭಧಗಳಿಂದ ಈ ರೀತಿಯ ಅವಹೇಳನಕ್ಕೆ ಗುರಿಯಾಗುತ್ತಾಳೆಂದು ಹೇಳಿರುವುದು ಜನಪದ ಕವಯಿತ್ರಿಯ ಲೋಕಾನುಭವಕ್ಕೆ ನಿದರ್ಶನವಾಗಿದೆ.

ಉದಾ:–ಬಡತನ ಅನ್ನೋದು ಬಹಳ ಕೆಟ್ಟದ್ದು, ಅದರಲ್ಲಿ ಹಸಿವು ಇನ್ನು ಕೆಟ್ಟದ್ದು ಅದನ್ನು ಹಿಂಗಿಸಿಕೊಲು ಏನೆಲ್ಲ ಮಾಡಲು ಹಚ್ಚತ್ತದೆ. ವೀವೇಕ ಶೂನ್ಯ–ರನ್ನಾಗಿಸುತ್ತದೆ. ಹೆಣ್ಣು–ಮಕ್ಕಳ ವಸ್ತು ಒಡವೆಗಳನ್ನು ತೆಗೆದುಕೊಳ್ಳುವ ಹೇಯ ಕೃತ್ಯಕ್ಕೆ ತೊಡಗಿಸುತ್ತದೆ. ಅಂಥ ಹೆತ್ತವರೂ ಲೋಕದಲ್ಲಿದ್ದಾರೆ. ಎಂಬ ಸಾಮಾಜಿಕ ಸಂವೇದನೆ ವ್ಯಕ್ತವಾಗಿದೆ.

ಗಂಡನ–(ಶಿವನ) ಅನುಮತಿ ಪಡೆದು ತವರಿನಿಂದ ಖುಷಿ–ಖುಷಿಯಾಗಿ ಮರಳಿ ಬಂದ ಗವರಿಗೆ ಶಿವನು 'ಹೋಗಿ ಬಂದ್ಯಾಗವರ ತವರಿಗೆ' ತವರ ಮನಿಯಿಂದ ಏನೇನ ತಂದಿ ? ನಿಮ್ಮಪ್ಪ–ಅವ್ವ ಏನು ಕೊಟ್ಟರು ಎಂದು ನಗುತ ಗವರನ ಕರೆದು ಕೇಳುತ್ತಾನೆ. ಆಗ ಗವರಾ ಬಂದು ಅವನ ಮನದ ಒಲವು, ಲಗರಿಯನ್ನು ಅರ್ಥೈಸಿಕೊಂಡು ಹೀಗೆ ಉತ್ತರಿಸುತ್ತಾಳೆ.

ಮೊದಲು ಲೋಕಾಭಿರಾಯವಾಗಿ ತಂದಿ ಗಿರಿರಾಜರು ಬಹಳ ಬಡವಾಗ್ಯಾರು ಉಳಿದ ಬಂಧು ಬಳಗವೆಲ್ಲಾ ಸುಖವಾಗಿ ಇದ್ದಾರೆ. ನಮ್ಮವರು ಬಡವರು, ನಿಮ್ಮಷ್ಟು ಶ್ರೀಮಂತರಲ್ಲಿ ಕೊಟ್ಟಾರ ಅಷ್ಟೀಷ್ಟು.

ಮೂಗಿಗೆ ಮೂಗುತಿ ಕೊಟ್ಟರು
ಮುಂದಿನ ಹರಳೆಲೆ ಕೊಟ್ಟರು
ಕಟ್ಟು ಕಟ್ಟಾನೆ ಕೊಟ್ಟರ
ಕಿವಿಗೆ ಒಪ್ಪುವಂತ ಬುಗುಡಿ ಬಾವುಲಿ ಕೊಟ್ಟರು
ಅದರಂತೆ...

ಹಾಕುವ ಮಂಚ, ಕುತನೀಯ ಥಡಿ, ಗಂಧದ ಬೀಸಣಿಕೆ, ಅಲ್ಪ-ಸ್ವಲ್ಪ, ಕೊಪ್ಪರಿಗೆ ಹಂ, ಎಪ್ಪತ್ತೈದಾನೆ ಕುದರೆ, ಮೇಲೆ ಆರು ಸೇರು ದಮ್ಮಕ್ಕಿ, ಸಣಕಿಣರ, ಎಳು ಕೊಳುವೆ ಮೆಣಸು, ಟೆಂಗಿನಕಾಯಿ, ಬ್ಯಾಳಿ-ಬೆಲ್ಲ ಇತ್ಯಾದಿ, ತಮ್ಮ ಮನೆಯಲ್ಲಿ ಇದ್ದದು ಬೆಳೆದದ್ದು ತಮ್ಮ ಕೈಲಾದಷ್ಟು ಕೋಟ್ಟರು ನಮ್ಮವರು ಬಡವರು ಇನ್ನೇನುಕೊಡಲು ಸಾಧ್ಯ, ಅದಲ್ಲದೆ ತಾನು ಅವರ ಇಚ್ಚೇದ ಮಗಳಂತ ಇಷ್ಟೆಲ್ಲಾ ಕೊಟ್ಟರು ಅದಕ್ಕೂ ಮಿಗಿಲಾಗಿ ನನ್ನನ್ನೇ ನಿಮಗೆಕೊಟ್ಟಾರವರು' ಎಂದಾಗ ಅಲ್ಲಿ ಕುಂತ ಜನ ಗವರವ್ವನ ಮಾತಿನ ಜಾಣ್ಮೆಗೆ ತಲೆದೂಗಿದರು ಖುಷಿಯಿಂದ ನಕ್ಕರು, ಅವಳ ಮಾತಿಂದ ಕೈಲಾಸವೇ ಒಪ್ಪಿತೆಂದರೆ ಹೀಗೆ ಸಾಮಾಜಿಕ ನಡವಳಿಕೆಗಳನ್ನು ಕುರಿತು ಹಾಡಿದ ಹಾಡುಗಳಲ್ಲಿ ಪುರುಷ ಸಮಾಜದ ಹಲವಾರು ಮುಖಗಳು ಬಿಂಬಿತವಾಗಿವೆ. ಹಾಗೆಯೇ ಎಷ್ಟೇಲ್ಲಾ ಕೊಟ್ಟರೂ ತವರವರು ಬಡವರೆಂದು ಹೆಳುತ್ತಲೇ. ಪರೋಕ್ಷವಾಗಿ ಗಂಡನ ಮನೆಯವರು ಬಹಳ (ಅವರಿಗಿಂತ) ಶ್ರೀಮಂತರು ಎಂಬುದನ್ನು ಎತ್ತಿ ತೋರಿಸುತ್ತಾಳೆ ಹೀಗೆ ಹೆಣ್ಣಿಗೆ ಗಂಡನ ಮನೆತನದ ಬಗೆಗಿರುವ ಹೆಮ್ಮೆ ಅಭಿಮಾನ ಪ್ರೀತಿ ವ್ಯಕ್ತವಾಗುತ್ತದೆ.

ತಾಯಿ ತವರಿಗೆ ಬಂದರೆ ಜೋತೆಗೆ ಮಕ್ಕಳಿರಬೇಕು ಮಕ್ಕಳೂ ಬರುತ್ತಾರೆ. ಇಲ್ಲಿ ಗವರಮ್ಮನ ಜೊತೆಗೆ 'ಗಣಪ' ಬಂದಿದ್ದಾನೆ. ಮಗಳು ಮೊಮ್ಮಗ ಬಂದಿದ್ದಾರೆ, ಅಂತ ಹೆತ್ತವರು ನಾನಾ ವಿಧದ ಅಡುಗೆ ಮಾಡಿ ಉಣಬಡಿಸುತ್ತಾರೆ. ಅದರಲ್ಲಿ ಗಣಪನಿಗೆಂದು ನಾಲ್ಕು ಸೇರು / ಖಂಡುಗ ಕಡ್ಲಿ ಒಡೆದು ಬ್ಯಾಳಿ ಕಡಬು ಹೋಳಿಗೆ ಇತ್ಯಾದಿ ಮಾಡಿ ಉಣ್ಣಲು ಕೊಟ್ಟರೆ ಗಣಪ ಲೆಂದು, ಸಾಲಲಿಲ್ಲ ಇನ್ನೂ ಬೇಕು ಎಂದು ಆಳುತ್ತಾನೆ. ಹಟ ಹಿಡಿಯುತ್ತಾನೆ. ತಾಯಿ ಗವರವ್ವ ತವರವರು ಬಡವರು ಇಷ್ಟು ಮಾಡಿದ್ದೇ ದೊಡ್ಡದು, ಬಾಯಿ ಮಾಡಬ್ಯಾಡ ಇಷ್ಟಕ್ಕ ಸಾಕುಮಾಡು ಮುಗಿಸು ಎಂದು ರಮಿಸುತ್ತಿರುವ ಕೇಳಿಕೊಳ್ಳುತ್ತಿರುವ ಚಿತ್ರಣವು "ಅಣ್ಣ ಗಿಣಿರಾಯ ಕರಿಲಾಕ ಬಂದಾವ' ಗವರ ಕರಿ ಬಂದರೇಳು ತವರಲ್ಲಿ ಕಂದ ಗಣಪನ ಬಂಡತನ ಇವೇ ಮೊದಲಾದ ಹಾಡುಗಳಲ್ಲಿ ಮನೋಜ್ಞವಾಗಿ ಮೂಡಿ ಬಂದಿವೆ. ಇಲ್ಲಿ ಹೆಣ್ಣಿಗೆ ಹುಟ್ಟಿ ಬೆಳೆದ ಮನೆಯ ನಂಟು

ಮೋಹ ಹೆಚ್ಚಾಗಿರುತ್ತದೆ. ಬಡತನಕ್ಕಿಂತ ಅಲ್ಲಿ ದೊರೆಯುವ ಹೆತ್ತವರ ಪ್ರೀತಿ ಮುಖ್ಯ ಆದರೆ ಮಗುವಿಗೆ, ಅದು ತಿಳಿಯುವುದಿಲ್ಲ 'ಬಡವರಿದ್ದರ ನನ್ನ ನಿನ್ಯಾಕ ಕರಸಬೇಕಿತ್ತು ಎಂದು ಧಿಮಾಕಿನಿಂದ ಗಣಪ ಕೇಳುತ್ತಾನೆ ಮಗನ ಹೊಟ್ಟೆಬಾಕತನ ತಾಯಿಗೆ ಗೌಣ, ನಗಣ್ಯ, ಮಗುವಿನ ಮುಗ್ಧತೆಯ ಮುಂದೆ ಮನವೇ ಉತ್ತರವಾಗುತ್ತದೆ ಈ ಮಾತಿಗೆ ಸ್ವಾಭಿಮಾನ ಬಡಿದೆಬ್ಬಿಸಿದಂತಾಗುತ್ತದೆ. ತಕ್ಷಣ ಗವರಮ್ಮ ನನ್ನ ಗಂಡ ಕಳಸಿದಾ ನಾಬಂದೆ ಎಂದು ಅಭಿಮಾನದಿಂದ ಉತ್ತರಿಸುತ್ತಾಳೆ.

ಮಗಳು ಗವರವ್ವ ತವರಿಗೆ ಬಂದು ಇನ್ನು ಬಂದ ವಾರವು ಆಗಿಲ್ಲ ಆಗಲೇ ಗಂಡನಿಂದ ಕರೆ ಬರುತ್ತದೆ. ಅವರಿರವರು (ಭಾವ-ಮೈದುನ-ಮಾನ) ಕರೆಯಲು ಬಂದರೆ ಏನೇನೋ ನೆಪ ಹೇಳಿ ಕಳುಹಿಸುವುದಿಲ್ಲ. ಆಗ ಗಂಡನೇ / ಶಿವನೇ ಕರೆದೊಯ್ಯಲು ಬರುತ್ತಾನೆ. ಅದರಲ್ಲೂ ಹುಣ್ಣಿಮೆಯ ದಿನವೇ ಕರೆದೊಯ್ಯುವೆನೆಂದಾಗ ತಾಯಿ ಅಸಹನೆಯಿಂದ ಸಿಡಿಮಿಡಿಗೊಳ್ಳುತ್ತಾಳೆ.

ಹಬ್ಬ-ಹರಿದಿನದಂದು ಹೆಣ್ಣು ಮಕ್ಕಳು ತವರಿನಲ್ಲಿ ಉಂಡುಟ್ಟ ನಲಿಯಬೇಕು ಹೀಗಿರುವಾಗ ಹಬ್ಬದ ದಿನವೇ ಕರಕ್ಕೊಂಡು ಹೋಗ್ತೀನಿ ಅನ್ನುವ ಅಂಥಹ ಅಳಿಯನನ್ನು ಉದ್ದೇಶಿಸಿ "ನಾಡಾಗ ಅವಯೇನ ಇವ ನಡಲೇ" ಎಂದು ಮನದಲ್ಲಿಯೇ ಶಪಿಸುತ್ತಾಳೆ. ಹುಣ್ಣಿಮೆಯ ದಿನ ಮಂಗಳವಾರ ಮಗಳನ್ನು ಕಳುಹಿಸಬಾರದೆಂಬ ಸಂಪ್ರದಾಯವಿದೆ. ಅದಕ್ಕೆ ವಿರುದ್ಧವಾದ ಅಳಿಯನ ನಡವಳಿಕೆಗೆ ಕೋಪ ಬರುತ್ತದೆ. ಅದಲ್ಲದೆ ತನ್ನ ಮಗಳಿಗೆ ಉಣ್ಣಿಸಬೇಕಾದ ತಿನಿಸುಗಳು ಉಡಿಸಬೇಕಾದ ಬಟ್ಟೆ ಬರೆಗಳು ಇನ್ನೂ ಸಿದ್ಧವಾಗಿಲ್ಲವೆಂಬ ನಿರಾಸೆಯ ನೋವು ಅದಕ್ಕೆ ಹೇಳುತ್ತಾಳೆ ಮಗಳಿಗಾಗಿ ತುಪ್ಪದಾಗ ಕರದ ಕರಬೆಕಾಯಿ ಮಾಡಿದ್ದೆ ಒಂದನ್ನಾದರೂ ಇನ್ನೂ ತಿಂದಿಲ್ಲ ಕಡಬು, ಉಂಡಿ, ಹೋಳಿಗೆ ಇತ್ಯಾದಿಗಳನ್ನು ಮಾಡಿದ್ದೆ ತೃಪ್ತಿಯಾಗುವಂತೆ ಇನ್ನೂ ತಿನಲಿಲ್ಲ ಇನ್ನೂ ಮಾಡಿ ತಿನಿಸಬೆಕಾದ ತಿನಿಸುಗಳು-ಹಿತ್ತಲಾಗಿನ ಕುಂಬಳಕಾಯಿ ಪಲ್ಯ ಹಲ್ವಾ, ತುಪ್ಪದ ಹಿರೇಕಾಯಿ ಭಜ್ಜಿ ಇತ್ಯಾದಿಗಳಿಗೆ, ಅಷ್ಟರಲ್ಲಿಯೇ ಅಳಿಯ ನಂದಿಯೇರಿ ಬಂದ ನಿಂತಾನ ತಕ್ಷಣ ವಾಸ್ತವ ಸ್ಥಿತಿಗೆ ಬರುತ್ತಾಳೆ. ಅಳಿಯ ನನ್ನು ಬೇಡಿಕೊಳ್ಳುತ್ತಾಳೆ. ನನ್ನ ಮಗಳಿಗೆ ಗೊಂಡೇ ಹೆಚ್ಚಿದ ಶಾಲು ಅಂದರ ಭಾಳ ಪ್ರೀತಿ ಅದು ಇನ್ನು ನೇಯ್ದು ಮುಗಿದಿಲ್ಲ ಅದಕ್ಕ ಹುಣ್ಣಿಮೆ ಮಾಡಿ ಕಳಿಸಿಕೊಡ್ತಿವಿ ಆಗಲೇ ಜಾಡರವನನ್ನು ಕರೆಸಿ ಹೇಳುತ್ತಾಳೆ. ಒಂದಾರ ಉಣಲಿಲ್ಲ ನನ ಮಗಳ' ಹಾಡಿನಲ್ಲಿ ಆ ಸೀರಿ ಸೇರಗಿನ ಮ್ಯಾಲ' ನೂರ ಸಾರಂಗ ಗಿಳಿ ನೂರ' ಕೆಚ್ಚಿರಬೇಕು – ಅದರಂತೆ ಜಾಡರ ಮನಿಗೆ ಬಂದಾಳ ಗೌರಿಯಲ್ಲಿ-

ಸೀರೇ ನೆಯ್ಯೋ ಸೆರಗ ನೆಯ್ಯೋ
ಸೆರಗಿನ ಸುತ್ತ ಬಾಳಿಯ ನೆಯ್ಯೋ
ಕೋಲು ಕೋಲೆನ್ನ ಚಿನ್ನದ ಕೋಲು ಕೋಲೆನ್ನ॥

ಸೆರಗಿನ ಸುತ್ತ ಬಾಳಿಯ ನೆಯ್ಯೋ
ಬಾಳಿಯ ಹಣ್ಣಿನ ಫಲಗಳನೆಯ್ಯೋ
ಕೋಲು ಕೋಲೆನ್ನ ಚಿನ್ನದ ಕೋಲು ಕೋಲೆನ್ನ॥

ಬಾಳಿಯ ಹಣ್ಣಿನ ಫಲಗಳನೆಯ್ಯೋ
ನಟ್ಟ ನಡುವೆ ಬಾವಿಯ ನೆಯ್ಯೋ
ಕೋಲು ಕೋಲೆನ್ನ ಚಿನ್ನದ ಕೋಲು ಕೋಲೆನ್ನ॥

ಬಾವಿಯ ಸುತ್ತ ಶರಣರ ನೆಯ್ಯೋ
ಗವರಿಯ ಹುಣ್ಣಿವಿಗೆ ಸೀರೆ ತಾರೋ
ಕೋಲು ಕೋಲೆನ್ನ ಚಿನ್ನದ ಕೋಲು ಕೋಲೆನ್ನ॥

ಎನ್ನುತ್ತಲಿರುವ ತಾಯಿಯ ಈ ಹಂಬಲದಲ್ಲಿ ಮಗಳ ಮೇಲಿರುವ ವಾತ್ಸಲ್ಯ ಪ್ರೀತಿ–ಮಮತೆಗಳೇ ತುಂಬಿ ಹರಿದಿವೆ. ಮಗಳು ಮನೆಯ ಮಹಾಲಕ್ಷ್ಮೀ ತವರವರು ಎಷ್ಟೇ ಬಡವರಿದ್ದರೂ ಸೀರೆ ಕೊಡಲಾಗದಿದ್ದರೂ ನೂಲ ಎಳಿ ನಾಧರೂ ಕೊಡಬೇಕೆಂಬ ಉದಾತ್ತ ಸಂಸ್ಕೃತಿಯನ್ನು ಅಳವಡಿಸಿಕೊಂಡವರು ಜನಪದರು ಹೀಗಾಗಿ ತವರಿಗೆ ಬಂದ ಮಗಳಿಗೆ ಸೀರೆ–ಕುಪ್ಪಸಕೊಟ್ಟು ಉಡಿಯಕ್ಕಿ ಹಾಕಿ ಮಡಿಲು ತುಂಬಿಸಿ ಕಳಿಸಿಕೊಡಬೇಕು. ಅಂದಾಗಲೇ ತಾಯಿಗೆ ನೆಮ್ಮದಿ, ತೃಪ್ತಿ, ಮಗಳಿಗೆ ಸಂತೋಷ.

ಸೀಗಿ ಆಡುವ ಪರಿಕರಗಳು

<u>ಹೆಂಡಿ</u> (ಸಗಣಿ) :– ಈ ಸಗಣಿ ಆಕಳು ಇಲ್ಲವೆ ಎತ್ತಿನದಾಗಿರಬೇಕು ಎಮ್ಮೆ ಅಥವಾ ಕೋಣದ ಸಗಣಿ (ಬಳಸಿದರೆ) ಇದ್ದರೆ ಅದರು ಅಶುಭ ಆಕಳು <u>'ಗಾಯತ್ರಿ'</u> ಎತ್ತು <u>'ಬಸವಣ್ಣ'</u> ಹೀಗೆ ಇವು ದೇವತೆಗಳು ಇವುಗಳ ಸಗಣಿಯೇ (ಶೀಗಿ) ಸೀಗಿ ಬಡಿಯಲು ಬೇಕು ಜೊತೆಗೆ ಹಿಂದುಗಳಲ್ಲಿ ಆಕಳ ಸಗಣಿ ಪವಿತ್ರ ಎಂಬ ಭಾವನೆಯೂ ಇದೆ. ಸಗಣಿಯನ್ನು ಪವಿತ್ರವೆಂದು ಭಾವಿಸಿರುವುದಕ್ಕೆ ಮಹಾಭಾರತದ ಅನುಶಾಸನ ಪರ್ವದಲ್ಲಿ ಒಂದು ಕಥೆ ಇದೆ.

ಹಸುಗಳೆಲ್ಲಾ ಒಂದೆ ಕಡೆ ಮೇಯುತ್ತಿದ್ದಾಗ ಅಲ್ಲಿಗೆ ಲಕ್ಷ್ಮೀ ಬಂದು ಅವುಗಳನ್ನು ನೋಡಿ ಯಾವ ವರಗಳನ್ನಾದರೂ ಬೇಡಿಕೊಳ್ಳಿ ಎಂದಳು ಹೊಟ್ಟಿ ತುಂಬಿಕೊಂಡಿದ್ದ ಹಸುಗಳು ಲಕ್ಷ್ಮೀಯ ಮಾತನ್ನು ಲಕ್ಷಕೊಡುವುದಿಲ್ಲ ಅವಳು ಮತ್ತೆ ಬಲವಂತ ಪಡಿಸಿದಳು ಆಗ ಹಸುಗಳು ನಮ್ಮ ಶ್ರೇಷ್ಠತೆ ನಮ್ಮ ಸಗಣಿಯಲ್ಲೂ ಉಳಿಯಬೇಕು ಎಂದು ಕೇಳಿಕೊಂಡವು ಆಗ ಲಕ್ಷ್ಮೀ ದೇವತೆ ಆಶೀರ್ವಸಿಸಿದಳು ಈ ಕಾರಣದಿಂದ ಇಂದಿನವರೆಗೂ ಸಗಣಿ ಮಂಗಳ ಕರವೆಂದು ನಂಬಿಕೆಯಿದೆ ಈ ಕಾರಣದಿಂದಲೇ ಹಿಂದುಗಳು ಸಗಣಿಯಿಂದ ಮನೆ ಸಾರಿಸುವುದು, ಅಂಗಳಕ್ಕೆ, ಮನೆಯ ಮುಂಬಾಗಿಲಿನ ಹೊರಗಡೆ ಛಳಿ ಹೊಡೆಯುವುದು ಮುಂತಾಗಿ ಮಾಡುತ್ತಾರೆ, ಜೊತೆಗೆ ಇದರಲ್ಲಿ

ಕ್ರಿಮಿನಾಶಕ ಶಕ್ತಿ ಇದ್ದು ಇದು ಸಾರಿಸುವುದರಿಂದ ಕ್ರಿಮಿನಿರೋಧಕ ಎಂಬ ಅಂಶವು ವೈಜ್ಞಾನಿಕವಾಗಿದೆ. ಇಷ್ಟೆಲ್ಲಾ ನಂಬಿಕೆಗಳ ಜೊತೆಗೆ ಮನೆಯ ಬಾಗಿಲ ಗೋಡೆಯ ಮೇಲೆ ಕೆಸರಿನಂತೆ ಅಂಟಿಸಿ ಸೀಗಿ ವಿನ್ಯಾಸಗಳನ್ನು ಬರೆಯಲು ಬೇಕಾಗುವ ವಸ್ತು ಸಗಣಿಯೇ ಆಗಿರಬಹುದೆಂದು ತರ್ಕಿಸಬಹುದಾಗಿದೆ.

ಬೀದರ ಜಿಲ್ಲೆಯ ಕೆಲವು ಕಡೆ ಸೀಗಿ ಬಡಿಯಲು ಸಗಣಿ ಬಳಸದೇ (ದರೋಜಿ) (ದ್ವಾರ) (ಮುಂಬಾಗಿಲು) ತಲೆಬಾಗಿಲು ಮುಂದೆ (ಚಿತ್ರದಲ್ಲಿ ತೋರಿಸಿದವಿನ್ಯಾಸದಂತೆ) ಸಿಮೆಂಟಿನಿಂದ ಅಥವಾ ಕೆಸರಿನಿಂದ ಮಾಡಿದ ಅಕೃತಿಯ ತೂತುಗಳಲ್ಲಿ ಹೂಗಳನ್ನು ಕೂಡಿಸುತ್ತ ಸೀಗಿ ಆಡುತ್ತಾರೆ. ಉದ್ದಗಲ ಏಳೇಳು ಚುಕ್ಕೆಗಳಿರುತ್ತವೆ ಈ ಆಚರಣೆ ಆಧುನಿಕತೆಯಡೆಗೆ ವಾಲಿದ್ದು ಗಮನಿಸಬಹುದು.



<u>ಕುಕ್ಕೇನ ಹೂ, ಕಾರಳ ಹೂ:-</u> ಈ ಹೂಗಳು ವಿಶೇಷವಾಗಿ ಬಳಸಿದರೂ ಕೆಲವು ಕಡೆ ಕಣಗಿಲ ಹೂ ಕನಕಾಂಬರಿ ಸೇವಂತಿಗೆ ಮುಂತಾದವುಗಳ ಜೋತೆಗೆ ತಮ್ಮಲ್ಲಿ ಸಿಗುವ ಹೂಗಳನ್ನು ಸಗಣಿಯಿಂದ ಬರೆದ ಸೀಗಿ ವಿನ್ಯಾಸದಲ್ಲಿ ಊರುತ್ತಾರೆ. ಹೂಗಳು ಸೀಗಿ ಆಡಲು ಬೇಕಾದರೆ ಅವುಗಳನ್ನು ತರುವ ಸಲುವಾಗಿ ಪ್ರತ್ಯೇಕವಾಗಿ ಯಾರು ಹೋಗುವುದಿಲ್ಲ ಜನಪದರು ದಿನಾಲು ಹೋಗೇ ಹೋಗುತ್ತಾರೆ ಹಾಗೂ ದನಗಳಿಗಾಗಿ ಮೇವು (ಹುಲ್ಲು) ತರುತ್ತಾರೆ ಸೀಗಿ ಆಡುವ ದಿನಗಳಲ್ಲಿ ಮಾತ್ರ ಕುಕ್ಕೇನ ಹೂ ಕಾರಳು ಹೂ ಮುಂತಾದ ಹೂಗಳಿರುವ ಮೇವನ್ನು ವಿಶೇಷವಾಗಿ ತರುತ್ತಾರೆ ಹೋಲಕ್ಕೆ ಹೋಗದೆ ಇದ್ದವರು ಹೀಗೆ ತಂದವರಲ್ಲಿಂದ ಸ್ವಲ್ಪ ಹೂಗಳನ್ನು ತರುತ್ತಾರೆ ಹೀಗೆ ಕೇಳಿ ತಂದ ಹೂಗಳ ಕುರಿತೂ ಸೀಗಿ ಆಡುವಾಗ ಹಾಡುತ್ತಾರೆ.

ಕುಕ್ಕೇನ್ಹೆವಾ ಕಡ ತಂದಿದಾ
ಗೌರಿ ನಿನುಗ ಕುಕ್ಕುರ್ಸತ ಕಡ ತಂದಿದಾ
ಕಾರಳ್ಹೂವಾ ಕಡ ತಂದಿದಾ
ಗೌರಿ ನೀನುಗ ಕಾರುಸ್ತ ಕಡ ತಂದಿದಾ

ಕೊನೆಯ (ಸೀಗಿ ಹುಣ್ಣಿಮೆ) ದಿವಸ ಮಾತ್ರ ಹೆಚ್ಚಾಗಿ ಎಲ್ಲರೂ ಝಂಡ್ಹೂ ವಿನದೇ ಸರಮಾಡಿ ಸೀಗಿ ವಿನ್ಯಾಸಗಳು (ಸುಣ್ಣ–ಜಾಜದಿಂದ) ಬರೆದವುಗಳ ಮೆಲೆ ಒಂದು ಮೊಳೆ ಹೊಡೆದು ಕಟ್ಟುತ್ತಾರೆ. ಕೆಲವರು ಝಂಡ್ಯಾನ ಹೂ ಸಿಗದಿದ್ದರ ಬೇರೆ ಹೂಗಳನ್ನುಬಳಸುವುರು.

<u>ಹಣತಿಗೆ:–</u> ವಿಶೇಷವಾಗಿ ದೀಪ ಹಚ್ಚಲು ಸಿಂಪಿಯನ್ನು ಉಪಯೋಗಿಸುತ್ತಾರೆ. ಬಹುಶಃ ಕಬ್ಬಿಣ ಅಥವಾ ಹಿತ್ತಾಳೆಯದಾದರೆ ಯಾರಾದರೂ, ತೆಗೆದುಕೊಂಡು ಹೋಗುತ್ತಾರೆಂಬ ವಿಚಾರವಿರ ಬೇಕು ಏಕೆಂದರೆ ಹಣತಿಗೆಯಲ್ಲಿ ಒಳ್ಳೇಣಿ (ಅಡುಗೆ ಮಾಡಲು ಬಳಸುವ ಎಣ್ಣೆ) ಹಾಕಿ ಮೊದಲೇ ಹತ್ತಿಯಿಂದ ಮಾಡಿಟ್ಟ ಬತ್ತಿಗಳಿಂದ ಮೊದಲೇ ದೀಪ ಹಚ್ಚಿ ಸೀಗಿ ವಿನ್ಯಾಸಗಳನ್ನು ಬರೆದ ಪಕ್ಕದ ಮಾಡದಲ್ಲಿಡುತ್ತಾರೆ. ಸೀಗಿ ಆಡಿದ ನಂತರವೂ ಅದನ್ನುಆರಿಸದೇ ಅದರೋಳಗಿನ ಎಣ್ಣೆ ಮುಗಿದು ಹೋಗುವ ತನಕ ಬೆಳಗಿ ಶಾಂತವಾಗುತ್ತದೆ. ಹಾಗೂ ದ್ವಾರ ಬಾಗಿಲ ಹೊರಗಡೆಯೇ ಉಳಿಯುತ್ತದೆ. ಆದ್ದರಿಂದಲೇ ಕೆಲವರು ಸಿಂಪಿ ಹಣತಿಯಾಗಿ ಬಳಸಿದಂತೆ ಹಿಟ್ಟಿನಿಂದಲೇ ಎಣ್ಣೆ ಹಾಕಿ ದೀಪ ಹಚ್ಚಲು ಬರುವಂತೆ ಕುಳ್ಳಿ (ಹಣತೆಯಂತೆ) ಮಾಡಿಕೊಳ್ಳುತ್ತಾರೆ. ಕುಂಬಾರನಿಂದ ಮಣ್ಣಿನ ಹಣತೆಯ ಬಳಕೆಯೂ ಮಾಡುವರು.[2]

<u>ಫರಾಳ:–</u> ದಿನಾಲು ಸೀಗಿ ಆಡಿದ ನಂತರ ಅಲ್ಲಿದ್ದ ಎಲ್ಲರಿಗೂ ಫರಾಳ ಹಂಚುತ್ತಾರೆ, ಇದನ್ನು ಪ್ರಸಾದ ಎಂಬ ಪದ ಬಳಸದೇ 'ಫರಾಳ' ಎಂದೇ ಬಳಸುವುದು ವಿಶಿಷ್ಟ್ಯ ಆಗಿದೆ. ಫರಾಳ ಕೊಡಲು ಹೆಚ್ಚಾಗಿ ಕಡಲಿ ಬೇಳೆ–ಬೇಲ್ಲ, ಹೆಸರು–ಬೇಳೆ ಸಕ್ಕರಿ, ಪುಟಾಣಿ–ಸಕ್ಕರಿ ಸೀತನಿ–ಎಳ್ಳು ಕೊಡುತ್ತಾರೆ.[೪]

<u>ಸುಣ್ಣ, ಜಾಜ, ವಿವಿಧ ಬಣ್ಣದ ರಂಗು :–</u> ಕೊನೆಯ ದಿವಸವಾದ ಸೀಗಿ ಹುಣ್ಣಿಮೆ ದಿನದಂದು ಇಲ್ಲಿಯವರೆಗೆ ಸಗಣಿಯಿಂದ ಸೀಗಿ ವಿನ್ಯಾಸ ಬರೆದ ಜಾಗವನ್ನು ಸ್ವಚ್ಛಮಾಡಿ ಸಾರಿಸಿ ಸುಣ್ಣ ಹಚ್ಚಿ ಐದಾರು ದಿನದಿಂದ ಸೀಗಿ ಆಡಿದ ವಿನ್ಯಾಸಗಳಲ್ಲದೇ ಬೇರೆ ಚಿತ್ತಾರಗಳನ್ನು ಬರೆದು ಅಂದು ಸಂಜೆ ಸಗಣಿಯ ವಿನ್ಯಾಸವಿಲ್ಲದೆಯೇ ಹಾಗೆಯೇ ಈ ಬಣ್ಣದಿಂದ ಬಿಡಿಸಿದ (ಜಾಜ) ವಿನ್ಯಾಸಗಳಿಂದಲೇ ನಿತ್ಯದಂತೆ ಸೀಗಿ ಆಡಿ ಇಂದಿಗೆ ಕೋನೆಗೊಳಿಸುತ್ತಾರೆ.[೬]

ಸೀಗಿ–ಗೌರಿ ಹಾಡುಗಳು, ಡಾ. ಶಕುಂತಲಾ ಸಿದ್ಧಾರಾಮ ದುರಗಿ
ಸೀಗಿ ಹಾಡುಗಳು ರಾಜೇಂದ್ರ ವೀರಶೇಟ್ಟೆಪ್ಪಾ ಯರನಾಳೆ
ವಕ್ತಾರರು: ಸರೋಜನಿ ವೈಜಿನಾಥ ಶಿವಪೂಜೆ ಧನ್ನೂರಾ (ಎಚ್) ತಾ॥ ಭಾಲ್ಕಿ ಇವರಿಂದ

೩. ಬೀದರ ಜಿಲ್ಲೆ ತಾಲ್ಲೂಕು ಮತ್ತು ಗ್ರಾಮಗಳಲ್ಲಿ ಸೀಗಿ ಆಚರಣೆ

ಸೀಗಿ ಹಬ್ಬವೆಂದರೆ ಸೀಗಿಯನ್ನು ಕೂಡಿಸುವುದು ಮತ್ತು ಸೀಗಿಯನ್ನು ಆಡುವುದು, ಹೀಗೆ ಎರಡು ರೀತಿಯಲ್ಲಿ ಹೇಳುವ ರೂಢಿಯಲ್ಲಿದೆ. ಬೀದರ ಜಿಲ್ಲೆಯ ಗ್ರಾಮಗಳಲ್ಲಿ ಸೀಗಿಯನ್ನು ಆಡುವುದೆಂದೇ ಹೇಳುತ್ತಾರೆ. ಈ ಮೇಲೆ ಹೇಳಿದಂತೆ ಸೀಗಿಯನ್ನು 'ಅಶ್ವೀನ' ಮಾಸದ ದಸರಾ ಹಬ್ಬದಿಂದ / ವಿಜಯ ದಸಮಿಯಿಂದ ಕೂಡಿಸುವುದು ಅಥವಾ ಆಡುವುದು ವಾಡಿಕೆಯಲ್ಲಿದೆ. ಆದರೆ ಕೆಲವೆಡೆ ಮಹಾನವಮಿಯಿಂದಲೇ ಪ್ರಾರಂಭಿಸುತ್ತಾರೆ ಇನ್ನು ಹೆಣ್ಣು ಮಕ್ಕಳು ಆಡುವುದರಲ್ಲಿಯೂ ಸೀಗಿ ಯನ್ನು ಕೂಡಿಸುವುದರಲ್ಲಿಯೂ ಮತ್ತು ಪೂಜಿಸುವುದರಲ್ಲಿಯೂ ವೈವಿಧ್ಯತೆಯಿದೆ.

ಐದು-ಆರು ವರ್ಷದವರೆಗಿನ ಹತ್ತು ಹದಿನೈದು ವಯಸ್ಸಿನ ಹೆಣ್ಣು ಮಕ್ಕಳು ಬೀದರ ಜಿಲ್ಲೆಯ ಗ್ರಾಮಗಳಲ್ಲಿ ವಿಜಯದಸಮಿ ದಿನದಂದಿನಿಂದ (ದಸರಾ) ಪ್ರಾರಂಭಿಸುತ್ತಾರೆ. ಬೀದರ ತಾಲೂಕಿನ ಗ್ರಾಮಗಳಲ್ಲಿ ದಸರಾ ಹಬ್ಬದಂದು ಕುಟುಂಬದ ಎಲ್ಲಾ ಸದಸ್ಯರು ಹೊಸ ಬಟ್ಟೆಗಳನ್ನು ಧರಿಸಿ ಹೋಳಿಗೆಯ ಊಟ ಮಾಡಿ ಮನೆಯಲ್ಲಿ ಒಂಭತ್ತು ದಿನ (ದಸರಾದವರೆಗೂ) ವರೆಗೆ ತಾಯಿ ತುಳಜಾಭವಾನಿಯ ಭಕ್ತಿಯ ಸಂಕೇತಕ್ಕಾಗಿ ಮನೆಯನ್ನೆಲ್ಲಾ ಸುಣ್ಣ-ಬಣ್ಣ ಮಾಡಿ ಶುಭ್ರತೆ, ಮತ್ತು ಭಕ್ತಿ ಭಾವದಿಂದ ಘಟಸ್ಥಾಪನೆ ಮಾಡುವರು "ಘಟಸ್ಥಾಪನೆ" ಎಂದರೆ ಹೊಲದಲ್ಲಿನ ಫಲವತ್ತಾದ ಮಣ್ಣು ತೆಗೆದುಕೊಂಡುಬಂದು ದೇವರ ಜಗುಲಿಯ ಮೇಲೆ ಎರಡು ಚಿಕ್ಕ-ಚಿಕ್ಕ ಗುಂಪಾಗಿ ಮಾಡಿ ಒಂದು ಗುಂಪಿನ ಮೇಲೆ ಸಿಹಿ ಎಣ್ಣೆ (ಒಳ್ಳೆಣ್ಣೆ) ಯಿಂದ ತುಂಬಿದ ಹಣತೆಯನ್ನಿಟ್ಟು ದೀಪ ಬೆಳಗಿಸುವರು, ಮತ್ತೊಂದು ಕಡೆ ಎಲೆಗಳಿಂದ ಹೂಗಳಿಂದ ತುಂಬಿದ ನೀರು ಹಾಕಿ ಇಡುವರು, ಹೊಲದಿಂದ ತಂದ ಮಣ್ಣಿನ ಮೇಲೆ ಒಂಭತ್ತು ತರಹದ ಧಾನ್ಯ ಹಾಕುವರು. **(ಉದಾ:-ಗೋಧಿ, ಜೋಳ, ಕಡಲೆ, ತೋಗರಿ, ಅವರೆ, ಇತ್ಯಾದಿ ಒಂದು ಧಾನ್ಯ ಸಿಗದಿದ್ದರೆ ಮತ್ತೊಂದು ಧಾನ್ಯ ಬಳಸಬಹುದು.)** ಈ ದೀಪ ಆರದಂತೆ ಮಡಿಯಿಂದ ಎಚ್ಚರಿಕೆ ಹಾಗೂ ಭಯ ಭಕ್ತಿಯಿಂದ ನೋಡಿಕೊಳ್ಳುವ ಹೆಚ್ಚಿನ ಕಾರ್ಯ ಮನೆಯ ಮಹಿಳೆಯದು ಹೀಗೆ ಒಂಭತ್ತು ದಿನ ತುಂಬಿದಂದು ನವರಾತ್ರಿಯಂದು "ಕಡಕಣಿ"ಯ ನೈವೇದ್ಯ ಮಾಡುವರು, ಹೆಣ್ಣು ದೇವತೆಯಾದ ಭವಾನಿ (ಜಗದಂಬೆ) ಗೋಧಿ ಹಿಟ್ಟಿನಿಂದ ಅವಳು ಬಳಸುವ ಎಲ್ಲಾ ವಸ್ತುಗಳು ಮಾಡಿ ಉಡಿ ತುಂಬುವರು. ಉದಾ: ಜಡೆ, ಬಳೆ, ಕಾಲುಂಗುರ, ಮಾಂಗಲ್ಯ, ಬಳೆ ಇತ್ಯಾದಿ ಹಡಗಿ ತುಂಬುವರು ಎಂದು ಕೂಡ ಹೇಳುವರು. ಪರಡಿಯಲ್ಲಿ ತಾವು ಅಂದು ಮಾಡಿದ ಅಡುಗೆ

ಹುಳಪಲ್ಯಾ, ಸಪ್ಪನಬ್ಯಾಳಿ, ಕರಜಿಕಾಯಿ, ಕೋಡುಬಳೆ, ಕಡಕಣಿ, ಕಡಬು (ದಿವಡಿ) ಮನೆಯ ಎಲ್ಲಾ ಸದಸ್ಯರು ಮನೆ-ಮನೆಗೆ ಹೋಗಿ ಅಂಬಾಬಾಯಿ ಜೋಗಾ ಎಂದು ಬೇಡಿ ಅವರಿಂದ ಯಾವುದೇ ರೀತಿಯ ಕಾಳುಗಳು ತೆಗೆದುಕೊಂಡು ಬಂದದ್ದು ಅಂದು ಮನೆಗೆ ಬಂದ (ಭೂತೇರು) ಭೂಪೇರರ ಪರಡಿಗೆ ಪೂಜೆ ಮಾಡಿ ಉಡಿಯನ್ನಾಗಿ ಇಡುವರು. ಅವಳು ಬೇವಿನ ಎಲೆಯ ದಂಟಿನೊಂದಿಗೆ ನಮ್ಮ ಬೆನ್ನ ಮೇಲೆ ಉಘೇ ಉಘೇ ಎನ್ನುತ್ತ ಬಡಿಯುವಳು.

ಮಾರನೇಯ ವಿಜಯ ದಶಮಿಯೆಂದು ಸಂಭ್ರಮದ ಹಬ್ಬದಾಚರಣೆಯ ಊಟ ಮಾಡಿ ಹೊಸ ಬಟ್ಟೆ ಧರಿಸಿ ಊರ ಗೌಡ-ಕುಲಕರ್ಣಿ ಪ್ರತಿಷ್ಠಿತ ವ್ಯಕ್ತಿಗಳ ಮನೆಗೆ ಬಾಜೆಯೊಂದಿಗೆ ಎಲ್ಲರೂ ಹೋಗಿ ಅವರನ್ನು ಆಮಂತ್ರಿಸಿ ಕರೆದು ತಂದು ಬನ್ನಿತರುವ ದಿಕ್ಕು ಅಂದರೆ (ಸಿಲಂಗಡಿ) ಎನ್ನುವರು ಪೂಜಾರಪ್ಪನ ಸಹಾಯದೊಂದಿಗೆ ಅಂದು ಯಾವ ದಿಕ್ಕಿಗೆ ಬನ್ನಿ ತರಲು ಹೋಗುವ ನಿಶ್ಚಯವಾಗಿ ಎಲ್ಲರೂ ಆ ದಿಕ್ಕಿನೆಡೆಗೆ ಬಾಜಾ ಬಜಂತ್ರಿಯೊಂದಿಗೆ ಒಗ್ಗಟ್ಟಿನಿಂದ ಹೋಗಿ ಅಲ್ಲಿ ಕಂಡ ಬನ್ನೀ ಮರವನ್ನು ಗೌಡರಿಂದ ಪೂಜೆ ಮಾಡಿ ಬನ್ನೀಯ ಎಲೆಯನ್ನು ಕೀಳುವರು ನಂತರ ಗ್ರಾಮದ ಜನರೆಲ್ಲರೂ ಪ್ರತಿಯೊಬ್ಬರು ಬನ್ನಿ ಎಲೆ ಕೀಳಿ ತಮ್ಮ ತಮ್ಮ ಜೊತೆಗೆ ತರುವರು ಈ ಸಿಲಂಗಡಿ ಆಡಿ ಬರುವುದಕ್ಕಿಂತ ಮೊದಲೇ ಮನೆಯಲ್ಲಿದ್ದ ಹೆಣ್ಣು ಮಕ್ಕಳು ಸೀಗಿ ಆಡುವರು ಅಂದರೆ ಶುದ್ಧವಾದ ಆಕಳಿನ ಹೆಂಡಿ (ಸಗಣಿ) ಸಂಗ್ರಹಿಸಿದನ್ನು ತಮ್ಮ ಮನೆಯ ಮುಂದಿನ ಗೊಡೆಯನ್ನು ಸ್ವಚ್ಛಗೊಳಿಸಿ ಚುಕ್ಕಿ ಚಂದ್ರ Ů *ಎಂದು ಸಗಣಿಯಿಂದ ಆಕಾರ ಮಾಡಿ ಅದಕ್ಕೆ ಕುಂಕುಮ ಅರಸಿಣದಿಂದ ಪೂಜೆ ಮಾಡಿ ಅಡವಿಯ ಹೂವಾದ ಕುಕ್ಕೆನ ಹೂ, ಕಾರಳ್ಳು ಹೂ ವಿನಿಂದ ಚುಚ್ಚಿ ಸಿಂಗಾರ ಮಾಡುವರು ಮತ್ತು ಈ ಹೆಣ್ಣು ದೇವತೆಯಾದ ಸೀಗವ್ವನ ಕುರಿತು ಹೆಣ್ಣು ಮಕ್ಕಳು ಸಿಗಿಯ ಕುರಿತೇ ಹಾಡುವರು.

ಗಂಡು ಮಕ್ಕಳು ಸಿಲಂಗಡಿ ಆಡಿ ಬರುವುದರೋಳಗೆಯೇ ಇವರೆಲ್ಲರು ಹಾಡಿ ಹೀಗೆ ಒಬ್ಬರ ಮನೆಯಲ್ಲಿ ಹಾಡು ಮುಗಿದು ನೈವೇದ್ಯಗೆಂದು ಪುಟಾಣಿ ಸಕ್ಕರೆ, ಪುಟಾಣಿ ಬೆಲ್ಲ, ಹೆಸರು ಬೆಳೆ ಸಕ್ಕರೆ, ಅಳ್ಳು, ಸೀತನಿ ಸಕ್ಕರೆ ಇತ್ಯಾದಿಗಳಿಂದ ನೈವ್ಯೇದ್ಯ ತೋರಿಸಿ ಹಂಚುವರು. ಮತ್ತೇ ಎಲ್ಲಾ ಹೆಣ್ಣು ಮಕ್ಕಳು ಮುಂದಿನ ಮನೆಗೆ ಹೋಗುವುದಕ್ಕಿಂತ ಮೊದಲು ಅಂದಿನ ದಿನ ಮಾತ್ರ * ು ಬಿಡಿಸಿದ ಸಗಣಿಯ ಚಿತ್ರವನ್ನು ಅಳಿಸುವರು ಇದನ್ನುಸಿಲಂಗಡಿ ಆಡಿ ಬಂದ ಗಂಡು ಮಕ್ಕಳು ನೋಡಬಾರದೆಂಬ ನಂಬಿಕೆಯಿದೆ.

ಸೀಗಿ ಆಡುವವರು ಆಡುವ ಪರಿಕರಗಳು ಈ ಮೊದಲು ಹೇಳಿದಂತೆ ಒಬ್ಬಳು ತನ್ನ ಮನೆಯ ದರೋಜಿ/ಬಾಗಿಲು ಎಡಬದಿಗೆ ಅಥವಾ ಬಲಬದಿಗೆ ಸಗಣಿ (ಹೆಂಡಿ) ಯಿಂದ

ತೆಗೆಯಬೇಕಾಧ ವಿನ್ಯಾಸ ತೆಗೆದು ಅಕ್ಕ-ಪಕ್ಕದ ರಮಣೀಯರನ್ನು "ನಾ ಸೀಗಿ ಬಡದಿದಾ ನಂಬಲ್ಲಿ ಪೈಲೆ ಹಾಡಿರಿ ನಡೀರೆ" ಎಂದು ಹೆಳಿ ಕರೆದುತರುವಳು. ಹೆಣ್ಣು ಮಕ್ಕಳೆಲ್ಲಾ ಬಂದು ಸೇರುವಷ್ಟರಲ್ಲಿ ಮನೆಯಲ್ಲಿ ಸಿದ್ದ ಮಾಡಿದ ಹಣತಿ (ದೀಪ) ಮಾಡದಲ್ಲಿ ತಂದಿಟ್ಟು ಕುಕ್ಕೇನ ಹೂ, ಅಥವಾ ಕಾರಳ ಹೂ ಮುಂತಾದವುಗಳನ್ನು ತೆಗೆದುಕೊಂಡು ಸಗಣಿಯಿಂದ ತೆಗೆದ ವಿನ್ಯಾಸಗಳಲ್ಲಿ ಒಂದೊಂದಾಗಿ ಊರುತ್ತಾ ನಿಂತಿರುವಳು, ಉಳಿದವರು ಬಾಗಿಲ ಚೆಂಪಿಗೆ ಕೂತು ಹಾಡುತ್ತಿರುವವರು. ಹೀಗೆ ಹಾಡುತ್ತ ಕೊನೆಗ ಆರತಿ ಪದ ಅಥವಾ ಫರಾಳ ಪದ ಹಾಡುವಾಗ ಅಥವಾ ಅದಕ್ಕಿಂತ ಸ್ವಲ್ಪಮುಂಚೆ ಅದರಲ್ಲಿಯ ಒಬ್ಬಳು ತನ್ನ ಮನೆಗೆ ಹೋಗಿ ತಮ್ಮ ಮನೆಯ ಬಾಗಿಲ ಮುಂದೆ ಬೇಗ ಸೀಗಿ ಬಡಿದು ಸಿದ್ಧ ಮಾಡಿಟ್ಟು ಮತ್ತೆ ಇವರಿದ್ದ ಕಡೆ ಬಂದು ಸೇರಿಕೊಂಡು ಫರಾಳ ತಿಂದ ಮೇಲೆ ಅವಳ ಮನೆಗೆ ಎಲ್ಲರೂ ಹೋಗಿ ಇಲ್ಲಿಯಂತೆಯೇ ಹಾಡುವರು.

ಕೆಲವರ ಮನೆಗೆ ದರೋಜಿ ಬಾಗಿಲು ಇರುವುದಿಲ್ಲ ಅಂಥವರು ತಮ್ಮಲ್ಲಿ ಇದ್ದಂತಹ ಛಪ್ಪರ ಮನೆಯ ಬಾಗಿಲ ಮುಂದೆಯೋ ಅಥವಾ ಮನೆಯ ಮುಂದಿರುವ ಕಟ್ಟಿಯ ತುದಿಗೊ ಅಥವಾ ಕರಿಪೋಳಿದ್ದರೆ (ಕಲ್ಲಿನಿಂದ ಪೇಣಿಸಿದ ಕಲ್ಲಿನ ಆವರಣಗೋಡೆ) ಆ ಪೋಳಿಗೆ ಸ್ವಲ್ಪ ಸಾರಿಸಿ ಅಲ್ಲಿಯೇ ಸೀಗಿ ಬಡಿದು ಆಡುತ್ತಾರೆ. ಇನ್ನು ಕೆಲವರು ದೊಡ್ಡ ಬಂಗಲೆ (ಬಿಲ್ಡಿಂಗ್) ಇದ್ದು ಆ ಮನೆಗೆ ಆವರಣ (ಕಂಪೌಂಡ್) ಇರುತ್ತದೆ. ಅಂಥವರು ಆ ಆವರಣದ ತುದಿಗೆ ಸೀಗಿ ಬಡಿದು ಅಲ್ಲಿಯೇ ಕೂತು ಸೀಗಿ ಆಡುತ್ತಾರೆ. ಇಂಥ ಜಾಗಗಳಲ್ಲಿ ಹಣತಿಗೆ ಇಡಲು ಮಾಡ ಇಲ್ಲದಿದ್ದಾಗ ಸಗಣಿಯಿಂದಲೇ ಮೆತ್ತಿ ಹಣತಿಗೆ ಇಡುವಂತೆ ಮಾಡುತ್ತಾರೆ.

ಹಣತಿಗೆ ದೀಪ



ಸಗಣಿಯಿಂದ ಗೋಡೆಗೆ
ಮೆತ್ತಿ ಹಣತಿ ಇಡಲು ಮಾಡಿರುವುದು.

ಹೀಗೆ ವನಿತೆಯರೆಲ್ಲ ಸೇರಿ ಆಡುವ ಈ ಸೀಗಿಯಲ್ಲಿ ಉಳಿದ ಆಟ ಆಚರಣೆ, ಹಬ್ಬಗಳಲ್ಲಿರುವಂತೆ ಯಾರೊಬ್ಬರೂ ಸಿಂಗರಿಸಿಕೊಂಡು ವೈಯ್ಯಾರದಿಂದ ಬರುವುದಿಲ್ಲವೆಂಬ ಅಂಶ ಗಮನಿಸುವಂತಿದೆ ಸೀಗಿ ಆಡುವುದು ರಾತ್ರಿ ಸಮಯ ಇರುವುದರಿಂದ ತಮ್ಮ ಶೃಂಗಾರ ಕಾಣುವವರುಇರಲಾರರೆಂದೂ ಹೇಳಲಿಕ್ಕಾಗದು ಜೊತೆಗೆ ಸೀಗಿ ಆಡುವುದೇ ಸಗಣಿಯಿಂದ

ಹಾಗೂ ಧೂಳಿರುವ ಬಾಗಿಲ ಚೆಂಪಿಗೆ ಕೂಡುವುದರಿಂದ ತಮ್ಮ ಸಡಗರ ಹೊಲಸಾಗುತ್ತಿರಬಹುದೆಂಬ ಕಲ್ಪನೆಯಿರಬೇಕೆಂಬ ತರ್ಕವೂ ಸೂಕ್ತವಾಗಲಾರದು. ಏಕೆಂದರೆ ರಂಗೋಲಿಯ ಸೌಂದರ್ಯ ಮಕ್ಕಳು ತುಳಿದು ಹಾಳು ಮಾಡುತ್ತಿದ್ದರೆ, ಅದು ಇನ್ನು ಚೆಂದ, ಸಂತೋಷ ಎಂಬಂಥಹ ಕಲ್ಪನೆಗಳು ಜನಪದರಲ್ಲಿ ಅನೇಕ ಇವೆ. ಆದರೆ ಇಂದಿನ ಆಧುನಿಕ ಯುಗದಲ್ಲಿ ರಂಗೋಲಿ ತುಳಿದು (ಕೆಡಿಸಿದರೆ) ಅಳಿಸಿದಂತಾದರೆ ಅಪಶಕುನ ಎಂಬ ನಂಬಿಕೆ ಇದೆ.

ಪ್ರಾರಂಭದ ದಿನ ಚುಕ್ಕಿ–ಚಂದ್ರ ವಿನ್ಯಾಸವೇ ಬಡಿಯಬೇಕೆಂಬ ಕಲ್ಪನೆ ಭೂಮಿ ಹುಟ್ಟಿದ ಮೇಲೆ ಈ ಬ್ರಹ್ಮಾಂಡದ ಮೇಲೆ ಮೊಟ್ಟ ಮೊದಲು ಕಾಣಿಸಿಕೊಂಡವರೆಂದರೆ ಚುಕ್ಕಿ–ಚಂದ್ರ–ಸೂರ್ಯ ಎಂಬುದರಿಂದ ಮೊದಲ ದಿನದ ವಿನ್ಯಾಸ ಇವರದಾಗಿರಬೇಕು. ವಿನ್ಯಾಸದಂತೆ ಹಾಡುವ ಹಾಡುಗಳು ಅನೇಕ ಆದರೆ ಈ ಕೆಳಗಿನ ಹಾಡು ಇಂದಿನ ದಿವಸ ಹಾಡಬೇಕೆಂಬುದು ವಾಡಿಕೆ

ಕೋಲು ಹಾಕುತ್ತ ನಾನ ಖಾನನ ವನಿನ್ನೋವ
ಖಾನ ಈರೇರ ಒಳಗಿಲ್ಲ ಕೋಲೆ
ಖಾನನ ಈರೇರ ಒಳಗಿಲ್ಲದ್ಹೋದರ

ಈಳಿಯವ ಕೊಟ್ಟು ಕಳಸಿದ ಕೋಲೆ
ಈಳಿಯನ ಕುಡುಲಾಕ ಸರಿಯಾಗಿ ಬರಲಾಕ
ಕಂಡು ನನ್ನ ಹಬ್ಬ ದಸರಿ ಮಾನಂಬಿ ದಿನ

ಹೋಸ (ಹಸು) ಮಕ್ಕಳೆಲ್ಲ ಗವರ್ಯಾಡಿ ಕೋಲೆ
ಹೊಸ (ಹಸು) ಮಕ್ಕಳೆಲ್ಲ ಗವರ್ಯಾಡಿ ಬರುವಳೆಗೆ
ಹಸನಗಟ್ಟೀತ ಹಳಖ್ಯಾಂಡ ಕೋಲೆ

ಹಸನಾನೆಗಟ್ಟೀತ ಹಲಬುರ್ಗಿ ಅಗಸಿ ಮುಂದ
ಚಿನ್ನ ಗಟ್ಟೀತ ಚಿಡಗುಪ್ಪಿ ಕೋಲೆ
ಚಿನ್ನಾನೆ ಗಟ್ಟ್ಯೀತ ಚಿಡಗುಪ್ಪಿ ಅಗಸಿ ಮುಂದ
ಧನಿಯ್ಯಾ ಮಾರ್ಯಾವೇ ಧನ್ನೂರಾಗ ಕೋಲೆ

ಹೀಗೆ ಬೀದರ ಜಿಲ್ಲೆ ಅನೇಕ ಊರುಗಳ ಹೆಸರುಗಳನ್ನು ಪ್ರಾಸಕ್ಕೆ ಅನುಗುಣವಾಗಿ ಜೋಡಿಸಿ ಹಾಡುತ್ತ ಹಾಡನ್ನು ತಮಗೆ ಬೇಕಾದಷ್ಟು ಹಿಗ್ಗಿಸುತ್ತಾರೆ, ಮತ್ತು ಕುಗ್ಗಿಸುತ್ತಾರೆ. ಸೀಗಿ ಆಡುವುದು ಆರಂಭದಲ್ಲಿ ಹೇಳಿದಂತೆ ಶಿವ–(ಪಾರ್ವತಿ) ಗೌರಿಯರ ಕುರಿತು ಇರುವುದರಿಂದ ಮೊದಲನೆ ದಿವಸ ಹಾಡುವ ಈ ಮೇಲಿನ ಹಾಡಿನಲ್ಲಿ ಈರೇಶ / ವಿರೇಶ ನಿಗೆ ಊಟಕ್ಕೆ ಆಮಂತ್ರಣ ಕೊಡಲು ಹೋದಾಗ ಅವನಿರದ ಕಾರಣ ವಿಳ್ಳಕೊಟ್ಟು; ಸರಿಯಾಗಿ ಬರಲು ಹಾಗೂ ನೀನಿರಲು

ದಸರಿಯ ಮಾನಂಬಿ ದಿನ ನಿಶ್ಚಿತಗೊಳಿಸು ಎಂದು ಕೇಳಿ ಅಂದು ಹಬ್ಬದ ಸಂಭ್ರಮದಿಂದ ಹೊಸ ಬಟ್ಟೆ ತೊಟ್ಟು ಎಳೆಯ ಮಕ್ಕಳು ಸಡಗರದಿಂದ ಗವರ್ಯಾಡಿ ಬರುವಾಗ ಊರಿನ ಕಳೆ ಚಿನ್ನಗಟ್ಟಿದಂತಾಯಿತೆಂದು, ವರ್ಣಿಸುತ್ತ ಸಾಗುವ ಅರ್ಥ, ನಾದ ಮಾಧೂರ್ಯ ಮುಂತಾಗಿ ಆಹ್ಲಾದಕರವಾಗಿ ರಮಣೀಯಂತೆಯಿಂದೊಡಗೂಡಿದೆ.

ಮಾನಂಬಿಯ ಮರುದಿವಸವೇ ದಸರಿ ಹಬ್ಬ ಸೀಗಿ ಆಡುವ ಎರಡನೇಯ ದಿನವಾದ ಇಂದು ಗಂಗಿ–ಗೌರಿಯ ವಿನ್ಯಾಸ ಬರೆಯುವುದು, ಕಡ್ಡಾಯ. ಕಾರಣ ಸೂರ್ಯ–ಚಂದ್ರರ ನಂತರ ಶಿವನ ಹಾಗೂ ಅವನ ಸ್ವರೂಪಿಯರಾದ ಗಂಗಿ–ಗೌರಿ ಇವರ ಸಂತಾನವೇ ನಾವೆಲ್ಲರು ಅವರ ವಿನ್ಯಾಸದಿಂದ ಜೊತೆಗೆ ಅವರನ್ನು ಸ್ಮರಿಸುವುದರಿಂದ ನಮಗೆ ಯಾವುದೆ ಅಶುಭವಿರದೆ ಸದಾ ಅವರ ಆಶಿರ್ವಾದ ನಮ್ಮ ಮೇಲಿರಲಿ ಎಂಬ ನಂಬಿಕೆ ಈ ಗಂಗಿ–ಗೌರಿಯರ ಮುಂದೆಯೂ ಅನೇಕ ಹಾಡುಗಳು ಹಾಡುವಂತೆ.

ಒಂದರತ್ಯಾಗ ಒಂದರ ತಿಟ್ಟು
ಮ್ಯಾಲ ಮಾಣಿಕದ ಹರಳಿಟ್ಟು
ಇಗೊತ್ತಿನ ದಿನ ನಮ್ಮನಿದಾಗ
ದಸರಿ ಸೌಭಾಗ್ಯ
ಮ್ಯಾಲ ಮಾಣಿಕದ ಹರಳಿಟ್ಟು...

ಎಂದು ಮೇಲಿನ ಪದ ಹೇಳುತ್ತ ಮೂರರತ್ಯಾಗ ನಾಕಾರತ್ಯಾಗ ಎಂದು ಐದರ ತನಕ ಹೇಳುತ್ತ ಹಾಡುವುದು ಒಂದು ಸಾಮಾನ್ಯ ನಿಯಮ.

ಸೀಗೆ ಹುಣ್ಣಿವೆ ಮಾಡಿ ಸೀಗವ್ವನನ್ನು ಗಂಡನ ಮನಿಗೆ ಕಳುಹಿಸಿಕೊಡುವಾಗ ಹೀಗೆ ಹೇಳುವರು.

ಒಂದು ಪುಡಿ ಕುಟ್ಟೂತ
ಸೀತಾಗ ನೆನೆಯೂತ
ಶಿಲ ಗವರಿ ಶಿವ ಬಂದಾನ
ನಮ್ಮ ಸೀಗಮ್ಮಗ ಹುಣ್ಣಿವಿ ಮಾಡಿ
ಕಳುಹಿಸಿ ಕೊಡಿರಾ ॥

ಎರಡ ಪುಡಿ ಕುಟ್ಟೂತ
ಸೀತಾಗ ನೆನೆಯೂತ
ಶೀಲ ಗವರಿ ಶಿವ ಬಂದಾನ
ನಮ್ಮ ಸೀಗಮ್ಮಗ ಹುಣ್ಣಿವಿ ಮಾಡಿ
ಕಳುಹಿಸಿ ಕೊಡಿರಿ ॥

ಮೂರ ಪುಡಿ ಕುಟ್ಟೂತ
ಸೀತಾಗ ನೆನೆಯೂತ
ಶೀಲ ಗವರಿ ಶಿವ ಬಂದಾನ
ನಮ್ಮ ಸೀಗಮ್ಮಗ ಹುಣ್ಣೀವಿ ಮಾಡಿ

ಕಳುಹಿಸಿ ಕೊಡಿರಿ ॥
ನಾಲ್ಕ ಪುಡಿ ಕುಟ್ಟೂತ
ಸೀತಾಗ ನೆನೆಯೂತ
ಶಿಲ ಗವರಿ ಶಿವ ಬಂದಾನ
ನಮ್ಮ ಸೀಗಮ್ಮಗ ಹುಣ್ಣೀವಿ ಮಾಡಿ
ಕಳುಹಿಸಿ ಕೋಡಿರಿ॥

ಐದ ಪುಡಿ ಕಟ್ಟೂತ
ಸೀತಾಗ ನೆನೆಯೂತ
ಶೀಲ ಗವರಿ ಶಿವ ಬಂದಾನ
ನಮ್ಮ ಸೀಗಮ್ಮಗ ಹುಣ್ಣಿವಿ ಮಾಡಿ
ಕಳುಹಿಸಿ ಕೋಡಿರಿ ॥

ಉತ್ತರ ಕರ್ನಾಟಕದಲ್ಲಿ ಹೆಚ್ಚು ಪ್ರಚಲಿತವಿರುವ ಸೀಗಿ ಹುಣ್ಣಿಮೆ ಮತ್ತು ಗೌರಿ ಹುಣ್ಣಿಮೆ ಈ ಹಬ್ಬಗಳ ಆಚರಣೆಯು ಸ್ತ್ರೀ–ದೇವತೆಯನ್ನು ಕುರಿತುದ್ದಾಗಿದೆ. ಸ್ತ್ರೀಯನ್ನು ಶಕ್ತಿಯನ್ನಾಗಿ ಭಾವಿಸಿ, ಶಕ್ತಿಯ ಆರಾಧನೆಯನ್ನು ಮಾಡುವ ಸಂಪ್ರದಾಯವು ವೇದಗಳ ಕಾಲದಿಂದಲೂ ಇದೆ. ಈ ಹಿನ್ನೆಲೆಯಲ್ಲಿ ನೋಡಿದಾಗ ಸೀಗಿ–ಗೌರಿ ಇಬ್ಬರೂ ಭೂದೇವಿಯರೇ ಆಗಿದ್ದರೂ ಶಕ್ತಿದೇವತೆಯೆಂದು ಗೌರಿಯನ್ನು ಪೂಜಿಸಿದರೆ ಭೂತಾಯಿಯ ಪೂಜೆ ಎಂದು ಸೀಗಿಯನ್ನು ಪೂಜಿಸುವುದು ರೂಢಿಯಲ್ಲಿದೆ. ಮಣ್ಣಿನ ಅಂದರೆ ಭೂಮಿ ಪೂಜಕರಾದ (ರೈತರು) ಒಕ್ಕಲಿಗರು ತುಂಬಾ ಶ್ರದ್ಧೆಯಿಂದ ಸಡಗರ ಸಂಭ್ರಮದಿಂದ ಇದನ್ನು ಆಚರಿಸುತ್ತಾರೆ. ಆದ್ದರಿಂದ ಇವುಗಳನ್ನು "ಜನಪದರ ಹಬ್ಬಗಳೆಂದೇ" ಕರೆಯುವುದು ವಾಡಿಕೆಯಲ್ಲಿದೆ. ಅದರಂತೆ ಈ ಎರಡೂ ಹಬ್ಬಗಳ ವಿಧಿ–ವಿಧನಗಳಲ್ಲಿ ಆಚರಣೆಗಳಲ್ಲಿ ಪ್ರಾದೇಶಿಕ ಭಿನ್ನತೆಯಿದ್ದರೂ ಸಹ ಸೀಗಿ–ಗೌರಿಯರನ್ನು ಕುರಿತು ರಚನೆಯಾಗಿರುವ ಆರಾಧನಾ ಹಾಡುಗಳಲ್ಲಿ ಮಾತ್ರ ವ್ಯತ್ಯಾಸವಿಲ್ಲದಿರುವುದೊಂದು ವಿಶೇಷ ಸಂಗತಿಯಾಗಿದೆ. ಹಾಗೆಯೇ ಈ ಪೂಜಾ ಪರಂಪರೆಯನ್ನು ಸೀಗಿ ಹುಣ್ಣಿಮೆ ಮತ್ತು ಗೌರಿ ಹುಣ್ಣಿಮೆ ಎಂದು ಅವರವರ ಹೆಸರಿನಲ್ಲೇ ಆಚರಿಸುತ್ತಲಿರುವುದು ಮತ್ತೊಂದು ವೈಶಿಷ್ಟ್ಯವಾಗಿದೆ.

<u>ಮಣ್ಣಿನಿಂದ ತಯಾರಿಸಿದ ಬಗ್ಗೆ:–</u> ಇದು ತಳದಲ್ಲಿ ಅಗಲವಾಗಿದ್ದು, ಮೇಲಕ್ಕೆ ಬಂದಂತೆ ಕಡಿಮೆಯಾಗುತ್ತಾ ಶಿಖರಾಕೃತಿಯಲ್ಲಿರುವುದು ಕುಂಬಾರನು ಇದನ್ನು ತಯಾರಿಸಿ ಕೊಡುತ್ತಾನೆ. ಎರಡು ಸೇರು ಜೋಳ ಇಲ್ಲವೆ ಅಕ್ಕಿ ಒಯ್ದು ಕುಂಬಾರನ ಹೆಂಡತಿಗೆ ಊಡಿ ತುಂಬಿ ಅವರು ಕೊಟ್ಟ ಸೀಗೆಯನ್ನು ಆರತಿ ತಟ್ಟೆಯಲ್ಲಿಟ್ಟುಕೊಂಡು ತಂದು ಒಂದು ಮಾಡದಲ್ಲಿ ಕೂಡಿಸಿ ಕುಕ್ಕೇನ ಹೂ, ಅವರಿ ಹೂ ಗಳಿಂದ ಪೂಜೆಸಿ ರಾತ್ರಿ ಆರತಿ ಮಾಡಿ–ಹಾಡಿ ಪುಟಾಣಿ ಸಕರಿ ನೈವೇದ್ಯ

ಕೊಡುವರು ಹೀಗೆ ಐದು ದಿನಗಳವರೆಗೆ ಹಾಡಿ ಕೊನೆಯ ದಿನ ಹೋಳಿಗೆ ನೈವೇದ್ಯ ಕೊಟ್ಟು ಪೂಜಿಸಿ ಹನುಮಂತ (ಹಣಮಂದೇವರ) ಗುಡಿಯ ಮೇಲೆ ಇಟ್ಟು ಬರುವರು, ಇವು ಮಳೆಗೆ ಕರಗಿ ಮಣ್ಣಾಗಿ ಹೋಗುತ್ತದೆ. ಇದೊಂದು ರೀತಿಯ ಆಚರಣೆಯಾಗಿದೆ.

ಐದಾರು ವರ್ಷದವರಿಂದ ಹತ್ತು ಹದಿನೈದು ವಯಸ್ಸಿನ ಹೆಣ್ಣು ಮಕ್ಕಳು ಮಹಾನವಮಿ ದಿನದಂದು ಅಂಗಳದಲ್ಲಿ ಒಂದು ಗೋಡೆಯ ಮೇಲೆ ಒಂದಿಷ್ಟು ಸ್ಥಳ ಸ್ವಚ್ಛ ಮಾಡಿ ಸಾರಿಸಿ ಸೀಗೆಯನ್ನು ಮಡುತ್ತಾರೆ. ಸಗಣಿಯಿಂದ ಕೋಟೆ ಯಂತೆ, ಸುತ್ತಲೂ ಒಂದು ಬೆರಳಿನಷ್ಟು ದಪ್ಪವಾಗಿ ಮೆತ್ತುತ್ತಾರೆ. ಮಧ್ಯದಲ್ಲಿ ಸೂರ್ಯ, ಚಂದ್ರ, ಬಾಳೆಯ ಕಬ್ಬಿನ ತೋಟಗಳನ್ನು ಸಗಣಿಯಿಂದಲೇ ಮಾಡುತ್ತಾರೆ. ಅದಕ್ಕೆ ಹೂ ಸಿಕ್ಕಿಸಿ ಪೂಜೆ ಮಡುತ್ತಾರೆ. ನೈವೇದ್ಯ ಕೊಟ್ಟು ಊದುಬತ್ತಿ ಹಚ್ಚಿ ಪುಟಾಣಿ ಸಕ್ಕರೆ ಹಂಚುತ್ತಾರೆ ಒಬ್ಬರ ಮನೆಯಲ್ಲಿ ಹಾಡುವುದು ಮುಗಿದ ಮೇಲೆ ಸೀಗೆ ಮಾಡಿದ ಇನ್ನೊಬ್ಬರ ಮನೆಗೆ ಹೋಗಿ ಹೀಗೆಯೇ ಹಾಡುವರು ಈ ರೀತಿ ಐದು ದಿನಗಳವರೆಗೆ ಸೀಗಿ ಹುಣ್ಣಿಮೆ ಯವರೆಗೆ ಹಾಡಿ ಕೊನೆಯ ದಿನ ನೈವೇದ್ಯ ಕೊಟ್ಟು ಮುಗಿಸುವರು ಸಗಣಿಯನ್ನೆಲ್ಲಾ ಒಂದು ಕಡೆಯನ್ನಿಟ್ಟು ಒಣಗಿಸಿ ಅದರಿಂದ ಅಡುಗೆ ಮಾಡದೆ ಹಾಲು ಕಾಯಿಸುತ್ತಾರೆ. ಇದು ಮತ್ತೊಂದು ರೀತಿಯ ಆಚರಣೆಯಾಗಿದೆ.[೧೦]

ದಸರೆಯ ಹಬ್ಬದ ದಿನದಿಂದ ಸೀಗೆ ಹಾಡುವುದು ಪ್ರಾರಂಭವಾಗುತ್ತದೆ. ಬನ್ನಿಯನ್ನು ಮುರಿದು/ಮುಡಿದು ಬಂದ ನಂತರ ಮೊದಲ ದಿನ ಮನೆಯ ಹೊರಗಿನ ಗೋಡೆಗೆ ಹಸುವಿನ ಸಂಗಣಿಯಿಂದ ಸೂರ್ಯ ಚಂದ್ರ ಮತ್ತು ಐದು ನಕ್ಷತ್ರಗಳನ್ನು ಬಿಡಿಸುತ್ತಾರೆ. ಇದು ಗ್ರಾಮದ ಜನರೆಲ್ಲರು ಸಿಲ್ಲಂಗಡಿ ಆಡಿ ಬರುವುದರೊಳಗಾಗಿ ಹೆಣ್ಣು ಮಕ್ಕಳು ಅವುಗಳನ್ನು ಕುಕ್ಕೇನ ಹೂ ಕಾರೇಳ್ಳಿನ ಹೂವಿನಿಂದ ಅವರೇ ಹೂವಿನಿಂದ ಅಲಂಕರಿಸಿ ಪೂಜೆ ಮಾಡುತ್ತಾರೆ.

ಸೀಗಿ ರಾಜೇಂದ್ರ ಯರನಾಳೆ.

೪. ಸೀಗಿ ಹಾಡುಗಳ ವೈಶಿಷ್ಟ್ಯ

ಸೀಗಿ ಹಾಡಿನಲ್ಲಿ 'ಕೊಲೆ' 'ಕೋಲು' 'ಕೋಲನೀರೆ' ಮುಂದಾದ ನುಡಿಯ ಕೊನೆಗೆ ರಾಗ ಎಳೆಯುವುದನ್ನು ಕಾಣುತ್ತೇವೆ ಆದರೆ ಸೀಗಿ ಹಾಡು ಹಾಗೂ ಭೂಲಾಯಿ ಈ ಎರಡೂ ಆಚರಣೆಗಳಲ್ಲಿ ಕೋಲುಗಳು ಹಿಡಿಯುವುದು ಆಡುವುದು ಇಲ್ವೇ ಇಲ್ಲ ಆದರೂ ಈ 'ಕೋಲು ಕೋಲೆ' ಎಂಬ ಮಾತು (ಸೊಲ್ಲು) ಅದ್ಹೇಗೆ ಸೇರಿಕೊಂಡಿರಬೇಕೆಂಬ ಪ್ರಶ್ನೆ ಹುಟ್ಟುತ್ತದೆ. ಇದಕ್ಕೆ ಆದಿ ಅನಾದಿ ಕಾಲದಲ್ಲೆಂದಾದರೂ ಕೋಲು ಹಿಡಿಯುತ್ತಿರಬೇಕು ಹಾಗೂ ಆಡುತ್ತಿರಬೇಕು ಎಂಬ ತರ್ಕ ಸಮಂಜಸವೆಸಲಾರದು ಏಕೆಂದರೆ ಸೀಗಿ ಹಾಗೂ ಭೂಲಾಯಿ ಈ ಎರಡು ಆಚರಣೆಗಳ ಸಂಶೋಧನೆ ಅಧ್ಯಯನದಿಂದ ಹಾಡಿನ ಧಾಟಿ, ರಾಗ, ಪಲ್ಲವಿ, ಏರು-ಇಳುವಿನ ಅನುಕೂಲಕ್ಕಾಗಿ 'ಕೋಲು-ಕೋಲೆ' ಎಂಬ ಸೊಲ್ಲು ಅನೇಕ ಪ್ರಕಾರ ಗಳಲ್ಲಿ ಬಳಸಿಕೊಳ್ಳುತ್ತಾರೆಂಬ ಅಂಶ ಸ್ಪಷ್ಟವಾಗುತ್ತದೆ.

ಕೋಲೆಣ್ಣ ಕೋಲೆ ರನ್ನಾದೆ ಕೋಲು ಕೋಲೆ ಮುಂತಾದ ಕೊನೆಯ ರಾಗಗಳು ಭೂಲಾಯಿ ಹಾಡಿನಲ್ಲಿದೆ ಕೆಲವರು ಸೀಗಿಯಲ್ಲಿ ಇಂಥ ಹಾಡುಗಳು ಭುಲಾಯಿ ಹಾಡಿನಲ್ಲಿದೆ ಕೆಲವರು ಸೀಗಿಯಲ್ಲಿ ಇಂಥ ಹಾಡುಗಳ ರಾಗಗಳು ಸ್ವಲ್ಪ ಬದಲಾವಣೆ ಮಾಡಿಕೊಂಡು ಹಾಡುತ್ತಾರೆ "ಊರಿಗಿ ಹಾದಿ ಏಸು ಹಾಡಿಗಿ ಧಾಟಿ ಏಸು" ಎಂಬಂತೆ ಸೀಗಿ ಹಾಡುಗಳು ಮೂಲ ಭಾವನೆ ಒಂದೇ ಇದ್ದು ಕೆಲವು ಸಾಲುಗಳು ಶಬ್ದಗಳು ಮಾತ್ರ ಮೇಲೆ ಕೆಳಗೆ ಹಿಂದೆ-ಮುಂದೆ ಮಾಡಿಕೊಂಡು ಹಾಡುವ ಸೃಜನಶೀಲತೆ ಸೀಗಿ ಆಡುವವರ ಕಲೆಯಾಗಿದೆ ಜೊತೆಗೆ "ಇಡೀ ಜಿಲ್ಲೆಯಲ್ಲಿ ಸಣ್ಣವರು, ದೊಡ್ಡವರು ಯಾರೇ ಹಾಡಿದರು ಕೂಡ ಸೀಗಿ ಹಾಡುಗಳ ಮೂಲ ಧಾಟಿ ಒಂದೇ ರೀತಿ ಆಗಿದೆ ಇದರ ಧಾಟಿ ಹಾಗೂ ಯಾವುದೇ ಸೀಗಿ ಹಾಡಿನ ಒಂದೇ ಒಂದು ಸಾಲು ಕೇಳಿದರೂ, ಅದು ಸೀಗಿ ಹಾಡೆಂದು (ಎಂಥವರಿಗೂ) ತಕ್ಷಣ ಗೊತ್ತಾಗುತ್ತದೆ". ಜೊತೆಗೆ ಅನುಕರಣೆಗಾಗಿ ನೆನಪಿಡುವವರ ಸಲುವಾಗಿ ನೆನಪಿರುವಂಥ ಹಾಗೂ ಮನಸ್ಸಿಗೆ ಮುದ ನೀಡುವ ಆಹ್ಲಾದಕರ ರಮಣೀಯ ಧಾಟಿ ಹಾಡು ಸೀಗಿಯ ವಿಶೇಷ ವೈಶಿಷ್ಟ್ಯವಾಗಿದೆ ಹಾಗೂ ಸೀಗಿ ಹಾಡುಗಳು ಹಾಡುವಾಗ ಯಾವುದೇ ವಾದ್ಯ ಪರಿಕರಗಳಿಲ್ಲದೆ ಹಾಡುಗರ ಕಂಠಸಿರಿಯೇ ಮಂತ್ರ ಮುಗ್ಧರನ್ನಾಗಿಸುತ್ತದೆ.

ಜೊತೆಗೆ ಇದರಲ್ಲಿರುವ ಸಂಪ್ರದಾಯದಂತೆ ಆರತಿ ಪದಗಳು ಬೇರೆ ಎಲ್ಲಯೂ ಕಾಣಲಾರೆವು ಬೇರೆ ಕಡೆಗಳಲ್ಲಿ ಹಾಡುವ ಆರತಿ ಪದಗಳು ಒಂದನ್ನೊಂದು ಹೋಲಿಕೆ ಕಾಣುತ್ತೇವೆ ಆದರೆ ಸೀಗಿಯಲ್ಲಿ ಹಾಡುವ ಆರತಿ ಪದಗಳು ಶೀಗಿಗಾಗಿಯೇ ಹಾಡುವಂತೆ ವಿಶಿಷ್ಟ ಪ್ರಕಾರಗಳಲಿವೆ. ಬೇರೆ ಆರತಿ ಪದಗಳು ಕೆಲವರು ಸೀಗಿಯಲ್ಲಿ ಹಾಡುತ್ತಾರೆ ಆದರೆ ಸೀಗಿ ಆರತಿ ಪದಗಳು ಬೇರೆ ಕಡೆಗಳಲ್ಲಿ ಹಾಡಲಾರರು ಆರತಿ ಪದಗಳು ಹಾಡುವಾಗ ಉಳಿದ ಕಡೆಗಳಲ್ಲಿ ಆರತಿ ಮಾಡುತ್ತಿರುತ್ತಾರೆ. ಕರ್ಪೂರ ಬೆಳಗುತ್ತಿರುತ್ತಾರೆ. ಆದರೆ ಇಲ್ಲ ಇಂಥ ಯಾವುದೇ ರೀತಿಗಳಿಲ್ಲ ಕೇವಲ ಆರತಿ ಹಾಡಷ್ಟೇ ಹಡುತ್ತಿರುತ್ತಾರೆ. ಹಾಡಿನಲ್ಲಿ ಮಾತ್ರ "ಪಾರ್ಬತಿ ಗಾರುತಿ ಬೆಳಗುವೆನು" "ಆರತಿ ಬೆಳಗುವೆ ಗೌರಮ್ಮಗೆ" ಮುಂತಾದ ನುಡಿಗಳು ಹೇಳುತ್ತಾರೆ ಆರತಿ ಪದ ಮುಗಿದ ನಂತರ ಉಳಿದ ಸಂಪ್ರದಾಯದಲ್ಲಿ ಕಾಯಿ-ಕರ್ಪೂರ ಒಡೆಯುವುದು, ತೀರ್ಥ ಮುಂತಾಗಿ ಹಂಚುವುದು ಕೊಳ್ಳುವುದು ಇರುತ್ತದೆ.

ಸೀಗಿ ಆಚರಣೆಯಲ್ಲಿ ಪ್ರಸಾದ ತೀರ್ಥವಿರದೆ ಇದರದೇ ಆದ ವಿಶಿಷ್ಟ ಪ್ರಕಾರದ ಫರಾಳ ತೋರುವುದು ಹಂಚುವುದು ಇದೆ. ಫರಾಳ (ನೈವೇದ್ಯ) ತೋರುವಾಗ ಉಳಿದ ಆಚರಣೆಯಲ್ಲಿ ದೇವರಿಗೆ ಕೈ ಮಡುವುದು, ನೀರು ಸಿಂಪಡಿಸುವುದು ಕಾಣುತ್ತೇವೆ. ಸೀಗಿ ಆಚರಣೆಯಲ್ಲಿ ಸೀಗಮ್ಮನಿಗೆ ಫರಾಳ ಪದಗಳು ಕೂಡ ಹಾಡಿ ಹರಸುವ ಪ್ರಕಾರ ವೈಶಿಷ್ಟ್ಯಪೂರ್ಣವಾಗಿದೆ. ಸೀಗಿ ಹಾಡುಗಳನ್ನು ಬೇರೆ ಯಾವ ಸಂದರ್ಭದಲ್ಲಿಯೂ ಹಾಡದೇ ಪುನಃ ಒಂದು ವರ್ಷದ ನಂತರ ಸೀಗಿ ಆಡುವಾಗಲೇ ನೆನಪಿಟ್ಟು ಹಾಡುವ ಜನಪದ ನಾರಿಯರ ಸೀಗಿ ಆಡುವ-ಹಾಡುವ-ಆಚರಿಸುವ ಸಾಂಪ್ರದಾಯಿಕ ಕಲೆ ಸಂಪತದ್ಭರಿತವಾಗಿದೆ ಅಷ್ಟೇ ಅಲ್ಲದೆ ಕೆಲವು ಈ ಸೀಗಿಯ ತಿರುಳೆಗೊತ್ತಿರದೆ ಕರ್ನಾಟಕ, ಮಹಾರಾಷ್ಟ್ರ ಹಾಗೂ ಆಂಧ್ರ ಗಡಿ ಪ್ರದೇಶದ ಕೆಲವೇ ಕೆಲವು ಕಡೆಗಳಲ್ಲಿ ತಮ್ಮದೇ ಪ್ರಕಾರ ಸೀಗಿ ಆಚರಿಸುತ್ತಾರೆ. ಆದರೆ ಅವೆಲ್ಲಕ್ಕೂ ಅಜ-ಗಜಾಂತರವುಳ್ಳ ಬೀದರ ಜಿಲ್ಲೆಯ ಸೀಗಿ ಆಚರಣೆ ವಿಶಿಷ್ಟವಾಗಿ ಮನಸೆಳೆಯುವಂತಿದೆ.

ಸೀಗಿ ಹಾಡುಗಳ ವರ್ಗೀಕರಣ :

ಜಾನಪದ ವೈಜ್ಞಾನಿಕ ಅಧ್ಯಯನಕ್ಕಾಗಿ ಹಿಂದಿನಿಂದಲೂ ಜಾನಪದ ವಿದ್ವಾಂಸರು ಜಾನಪದ ಹಾಗೂ ಜನಪದ ಸಾಹಿತ್ಯ ಮುಂತಾದ ಕುರಿತು ವರ್ಗೀಕರಣ ಮಾಡುತ್ತಲೇ ಬಂದಿದ್ದಾರೆ.

ವರ್ಗೀಕರಣದ ಮುಖ್ಯ ಆಶಯ, ವಿಷಯ, ವಸ್ತು ಸಾಧ್ಯವಾದ ಮಟ್ಟಿಗೆ ಛಿದ್ರ ಛಿದ್ರಗೊಳಿಸಿ ಹಿಂದೊಂದು ಭಾಗ-ವಿಭಾಗಗಳು ಸೂಕ್ಷ್ಮಾತೀಸೂಕ್ಷ್ಮದಿಂದ ಅಧ್ಯಯನ ಸಂಶೋಧನ

ಮಾಡುವುದಾಗಿದೆ. ಹೀಗೆ ಮಾಡುವುದರಿಂದ ಅಧ್ಯಯನ ಕೈಗೊಂಡ ವಿಷಯ ವಸ್ತುವಿನ ಸ್ವರೂಪ ಲಕ್ಷಣ ತಿಳಿಯುವಲ್ಲಿ ಸರಳವಾಗುತ್ತದೆ ಹಾಗೂ ಗೋಚರಿಸುತ್ತದೆ. ಈ ನಿಟ್ಟಿನಲ್ಲಿ ನನ್ನ ಕ್ಷೇತ್ರ ಕಾರ್ಯದ ಪರಿಮಿತಿಗೊಳಪಟ್ಟಷ್ಟು ಸೀಗಿ ಹಾಡುಗಳು ಸಂಗ್ರಹಿಸಲಾಗಿದೆ. ಸಂಗ್ರಹಿಸಿದ ಹಾಡುಗಳಲ್ಲಿ ವಾರಾಂತರಗಳನ್ನು ಗಮನಿಸಿ ಹಾಡುಗಳ ಬಾಹ್ಯ ಹಾಗೂ ಅಂತರಿಕ ಸ್ವರೂಪಗಳ ಹಿನ್ನೆಲೆಯಲ್ಲಿ ವರ್ಗೀಕರಿಸಲು ಪ್ರಯತ್ನಿಸಲಾಗಿದೆ.

ವಾಡಿಕೆ ಹಾಡುಗಳು

ಇದರಲ್ಲಿ ಸೀಗಿ ಸಂಪ್ರದಾಯ ಕುರಿತಿರುವ, ಹಾಡುಗಳನ್ನು ಸೇರಿಸಲಾಗಿದೆ. **ಉದಾ:-** ಸೀಗಮ್ಮನಿಗೆ – ವಿರೇಶನಿಗೆ ಸೀಗಿ ಆಚರಣೆಗಾಗಿ ಆಡುತ್ತಿರುವುದು ಬೀಳ್ಕೋಡುವುದು ಮುಂತಾದವು ಹಾಗೂ ಸೀಗಿ ಆಚರಿಸುವ ಪ್ರಾರಂಭದ ದಿನ ಯಾವುದು ? ಜೋತೆಗೆ ಇಡೀ ಸೀಗಿ ಆಚರಣೆಯಲ್ಲಿ ಯಾವ ದಿವಸ ಯಾವ ಹಾಡು ಹಾಡಬೇಕು ? ಎನ್ನುವ ಸೀಗಿ ಆಚರಣೆಯ ವಾಡಿಕೆಯ ಹಾಡುಗಳನ್ನು ಸೇರಿಸಲಾಗಿದೆ.

ಸೀಗಿ ಹೂಗಳ ಹಾಡುಗಳು

ಇಲ್ಲಿ ಸೀಗಿ ಆಚರಣೆಗೆ ಬೇಕಾಗುವ ಕುಕ್ಕೆ, ಕಾರಳ ಝೊಂಡ್ಹೂವು ಮುಂತಾದವುಗಳು ತರುವುದು ತಂದಿದ್ದರೆ ಸೀಗಮ್ಮ ಗಾಬರಿಯಾಗುವುದು ಹಾಗೂ ಹೇಗಾದರೂ ಮಾಡಿ ತಂದ ಹೂಗಳಿಗೆ ಬಹಳಷ್ಟು ಪರಿ-ಪರಿ ಮಾಡುವುದು ಮುಂತಾಗಿ ಕೇವಲ ಹೂಗಳನ್ನೆ ಕುರಿತು ಇರುವ ಹಾಡುಗಳನ್ನು ಸೇರಿಸಲಾಗಿದೆ.

ಶಿವ-ಗೌರಿ ಯರ ವಾದ-ಸಂವಾದದ ಹಾಡುಗಳು

ಹೆಸರೆ ಸೂಚಿಸಿರುವಂತೆ ಎಲ್ಲ ಹಾಡುಗಳೆಲ್ಲ ವಾದ-ವಿವಾದಗಳಿಂದ ಕೂಡಿದವುಗಳಾಗಿವೆ ಶಿವನು ಗಂಗಿಗೆ ಮೆಚ್ಚಿ, ಅವಳ್ಹಿಂದೆ ಹೋಗುವುದು ಹಾಗೂ ಗಂಗಿ ಹೇಳುವ ಕರಾರುಗಳೆಲ್ಲ ಶಿವನು ಒಪ್ಪಿಕೊಳ್ಳುವುದು, ನಂತರ ಶಿವನು ಗಂಗಿಗೆ ತನ್ನ ಜೊತೆಗೆ ಮನೆಗೆ ಕರೆತಂದಾಗ ಗೌರಿ ವಿಚಾರಿಸುವುದು, ಶಿವನ ಮೇಲೆ ಸಂಶಯಗೊಂಡು ಪ್ರಶ್ನೆ ಮಾಡುವುದು, ಈ ಪ್ರಶ್ನೆಗಳಿಗೆಲ್ಲ

ಶಿವನು ಉತ್ತರಿಸುವುದು ಮುಂತಾದ ಹಾಡುಗಳು ಜನಪದರು ಸಂಭಾಷಣೆಯ ಸಂವಾದದ ರೀತಿಯಲ್ಲಿಹಾಡದಿದ್ದರು ಹಾಡಿನಲ್ಲಿಯ ಭಾವನೆಗಳಿಂದ ಈ ವಿಭಾಗಗಳಲ್ಲಿ ಸೇರಿಸಲಾಗಿದೆ.

ಹುಟ್ಟು–ಸಾವು–ನೋವು–ನಲಿವಿನ ಹಾಡುಗಳು

ಇಲ್ಲಿಯ ಹುಟ್ಟು–ಸಾವು, ನೋವು–ನಲಿವಿನ ಹಾಡುಗಳೆಲ್ಲವೂ, ಕೇವಲ ಶಿವ–ಗೌರಿಯರು ಹಾಗೂ ಅವರ ಮಕ್ಕಳಿಗೆ ಸಂಬಂಧಿಸಿದವುಗಳಾಗಿವೆ.

ಗೌರಿ ಪತಿವ್ರತೆಯಾಗಿರುವುದು, ಬಸುರಿಯಾದಾಗ ಅರಸಿಣ ಹಚ್ಚುವುದು, ತವರೂರಿಗೆ ಹೋಗುವುದು ಸವತಿಯರಾದ ಗಂಗಿ–ಗೌರಿ ಯಾರು ಜಗಳ ಆಡುವುದು, ಗಣಪಣ್ಣ ತನ್ನ ತಾಯಿ ಗೌರಿಯ ವೈರಿಯಾಗಿ ಗಂಗಿ ಬಂದಿರುವಳೆಂದು ಅವಳಿಗೆ ಕೊಲೆ ಮಾಡುವುದು ಮುಂತಾದ ಹಾಡುಗಳನ್ನು ಸೇರಿಸಲಾಗಿದೆ.

ಸಂಕೀರ್ಣ ಹಾಡುಗಳು

ಸೀಗಿ ಹಾಡುಗಳೆಲ್ಲ ಶಿವ–ಗೌರಿ ಯರ (ಶಿವೆ) ಕುರಿತುಗಳೇ ಆಗಿವೆ. ಆದರೂ ಕೆಲವು ಹಾಡುಗಳು ನೇರವಾಗಿ ಶಿವ–ಶಿವೆಯರಿಗೆ ಸಂಬಂಧವಾಗಿದೆ ಇಡೀ ಜನ ಜೀವನಕ್ಕೆ ವಿಧಾನಕ್ಕೆ ಸಂಬಂಧಿಸಿದವುಗಳಾಗಿವೆ.ಆದರೂ ಈ ಹಾಡುಗಳು ಕೇವಲ ಸೀಗಿ ಆಚರಣೆಯಲ್ಲಿ ಮಾತ್ರ ಹಾಡುವಂಥವುಗಳು. ಉದಾ:– ಸೀಗಿ ವಿನ್ಯಾಸ ಹಾಗೂ ನಂಬಿಕೆಗಳಲ್ಲಿ ಕರಬನು, ಭರಚೀಲ, ಬಾಳೆಗಿಡ ಖಬ್ಬಿನ ಮಳು ಮುಂತಾದ ಕೆಲವು ಶಿವ–ಶಿವೆಯರ ಕುರಿತು ನೇರವಾದ ಸಾಂಕೇತಿಕ ರೂಪಗಳಾಗಿರದೆ ಜನ–ಜೀವನಕ್ಕೆ ಸಂಬಂಧಿಸಿದವುಗಳಾಗಿದ್ದಂತೆ ಈ ಜನ ಜೀವನ ವಿಧಾನ ಪ್ರಾರಂಭ ಗೊಂಡದ್ದು ಗಂಗಿ–ಗೌಡಿ, ಶಿವ ಇವರಿಂದಲೇ ಎಂಬ ಕಲ್ಪನೆ ಸೀಗಿ ಆಚರಣೆಯ ವಿನ್ಯಾಸ ಹಾಗೂ ನಂಬಿಕೆಯಿಂದ ಸ್ಪಷ್ಟವಾಗುತ್ತದೆ.

ಹಂಡಾಬಂಡದ ಆಕಳು, ಕೊರವಂಜಿ ಹಾಡು, ವಗಟು, ಬಂಜೆಯ ಗೋಳು, ಸತಿ ಬೀಳುವುದು ಶಿವನು ಅಮೃತ ತುಂಬಿ ಜೀವಂತಗೊಳಿಸುವುದು ಮುಂತಾದ ಹಾಡುಗಳನ್ನು ಸೇರಿಸಲಾಗಿದೆ. ಇಲ್ಲಿಯ ಹಾಡುಗಳೆಲ್ಲ ಸಂಕೀರ್ಣವಾದವುಗಳಾಗಿ, ಮಾನವ ಹಾಗೂ ದೇವ (ಶಿವ–ಶಿವೆ) ರಿಗಿರುವ ಸೂಕ್ಷ್ಮಸಂಬಂಧ ಕುರಿತವುಗಳಾಗಿವೆ. ಇದರಿಂದ ಸೀಗಿ ಆಚರಣೆಯ ಜನಪದರಲ್ಲಿ ದೇವರು ಕೂಡ ಮನುಷ್ಯ ಅವನು ಸಹ ಹುಟ್ಟು–ಸಾವು, ನೋವು–ನಲಿವು ಅನುಭವಿಸುವವ ಆದರೆ ಅವನೊಬ್ಬ ಅವರಾತಿ ಹಗೂ ಅಸಾಮಾನ್ಯ ಶಕ್ತಿಯುಳ್ಳವ ಒಂದು ಅದಯ್ಯ ಚೇತನ (Supreme Power) ಎಂಬ ವಿಚಾರ ಸ್ಪಷ್ಟ ಕಣುತ್ತದೆ.

ಆರತಿ ಹಾಡುಗಳು ಆರತಿ ಹಡುಗಳೆಂದರೆ ಸಾಮಾನ್ಯವಾಗಿ ಆರತಿ ಮಾಡುತ್ತ ಹಾಡುವ ಹಾಡುಗಳಲ್ಲ ಇವು ಸೀಗಿ ಆಚರಣೆಗಾಗಿಯೇ ವಿಶೇಷವಾಗಿ ಗಂಗಿ-ಗೌರಿಯರ ಕುರಿತು ಹಾಡುವ ಆರತಿ ಪದಗಳಾಗಿವೆ.[೧೧]

'ಗೌರಿಗೆ ಕಂಡೆ' ಎಂಬ ಕ್ರಸಂ. 2/2:1.1ರ ಹಾಡು

೫. ಸೀಗಿ–ಗೌರಿ ಹಾಡುಗಳ ಸ್ಥೂಲವಿವೇಚನೆ

ಜಾನಪದ ಹಲವಾರು ಪ್ರಚಲಿತ ಸಾಹಿತ್ಯ ಪ್ರಕಾರಗಳಲ್ಲಿ 'ಕೋಲು ಪದಗಳು' ಅತ್ಯಂತ ಜನಪ್ರಿಯ ಸಾಹಿತ್ಯ ಪ್ರಕಾರವಾಗಿದೆ ವಿಶೇಷವಾಗಿ ಸೀಗಿ–ಗೌರಿ ಹಾಡುಗಳನ್ನು 'ಕೋಲೆನ್ನ' ಪದಗಳೆಂದೇ ಹೇಳುವುದು ರೂಢಿಯಲ್ಲಿದೆ. ಸೀಗಿ–ಗೌರಿಯರನ್ನು ಕೂಡಿಸಿದ ದಿನದಿಂದ ಕಳುಹಿಸುವ ವರೆಗೂ ಹಿರಿಯ ಹೆಣ್ಣು ಮಕ್ಕಳು ಹಾಡುತ್ತಾರೆ. ಚಿಕ್ಕವರು ಕೋಲು ಹಾಕುತ್ತಾ ತಾಳಕ್ಕೆ ತಕ್ಕಂತೆ ಕುಣಿಯುತ್ತಾರೆ.

ಈ ಎರಡೂ ಹುಣ್ಣಿಮೆಗಳಲ್ಲಿ ರಾತ್ರಿ ಶುಭ್ರವಾದ ಬೆಳದಿಂಗಳು ಇರುತ್ತದೆ. ವಯಸ್ಸಿನ ತಾರತಮ್ಯವಿಲ್ಲದೆ ಹೆಣ್ಣುಮಕ್ಕಳು ತಮ್ಮ ತಮ್ಮ ಮನೆಗೆಲ್ಲಸವನ್ನು ಮುಗಿಸಿ ಕೊಂಡು ಬಂದು ಒಂದೆಡೆ ಸೇರುತ್ತಾರೆ. ಅದು ವಿಶಾಲವಾದ ಬಾವಿಯ ಕಟ್ಟಿಯಾಗಿರಬಹುದು, ಗೌರಿಯನ್ನು ಕೂಡಿಸಿದ ಮತವಾಗಿರಬಹುದು ಇಲ್ಲವೆ ಮಧ್ಯವರ್ತಿ (ಮಧ್ಯದಲ್ಲಿನ ಮನೆ) ಮನೆಯ ಜಗಲಿ, ಅಂಗಳವಾಗಿರಬಹುದು ಸೀಗಿ–ಗೌರಿಯನ್ನು ಕುರಿತಂತೆ ಈ ಸಂಗ್ರಹದಲ್ಲಿ ಬಂದಿರುವ, ಅವರನ್ನು ತವರಿಗೆ ಕರೆದು ತರುವ ಮಕ್ಕಳ ಬಯಕೆಗಳನ್ನು ಪೂರೈಸುವುದರಲ್ಲಿ ತೋರುವ (ಕಕ್ಕುಲಾತಿ) ಅಳಿಯ, ಶಿವ ಬಲುಬೇಗನೆ ಕರೆಯಲು ಬರಲು ಸಿಡಿಮಿಡಿಗೊಂಡು ಶಪಿಸುವ, ಮನಸ್ಸಿಲ್ಲದ ಮನಸ್ಸಿನಿಂದ ಮಗಳನ್ನು ಕಳುಹಿಸಿಕೊಡುವ ತಾಯಿ–ಮಕ್ಕಳ ಅಗಲುವಿಕೆಯ ನೋವು–ನಲಿವಿನ ಮಧುರ ಹೃದಯಸ್ಪರ್ಷಿ ಸನ್ನಿವೇಶದ ಹಾಡುಗಳನ್ನು ಮನತುಂಬಿ ಹಾಡುತ್ತಾರೆ. ಅದರಲ್ಲೂ ಶಿವ ಗಂಗೆಯನ್ನು ತನ್ನ ಜಡೆ ಮುಡಿಯಲ್ಲಿಟ್ಟುಕೊಂಡು ಮನೆಗೆ ಕರೆದುತಂದನು ಸವತಿ ಮಾತ್ಸರ್ಯದ ಗಂಗೆ–ಗೌರಿಯರ ವಾದ–ಸಂವಾದದ ಹಾಡುಗಳು ಹೆಣ್ಣು ಮಕ್ಕಳ ಮನಸ್ಸನ್ನು ಕಲಕಿ ಕೆಸರಾಗಿರುತ್ತದೆ. ನೋವಿನಲ್ಲೂ ನಗುವನ್ನು ತುಳಿಕಿಸಿ ಹೊಟ್ಟೆ ಹುಣ್ಣಾಗಿಸ್ಸುತ್ತದೆ. ಹೀಗೆ ಸರಿರಾತ್ರಿಯವರೆಗೂ ಹಾಡುತ್ತ –ಹಾಡುತ್ತ ಆನಂದಿಸುತ್ತಾರೆ. ಆದ್ದರಿಂದ ಇವುಗಳಿಗೆ ಬೆಳದಿಂಗಳ ಹಾಡುಗಳೆಂದು ಕರೆಯುವುದೇ ಹೆಚ್ಚು ವಾಡಿಕೆಯಲ್ಲಿದೆ. ಯಾವಾಗಲೂ ನಾಲ್ಕುಗೋಡೆಗಳ ಮಧ್ಯದಲ್ಲಿಯೇ ಕಾಲಕಳೆಯುವ ಹೆಣ್ಣು ಮಕ್ಕಳು ಹೊಲದ ಕೆಲಸ ಮನೆಗೆಲಸಗಳಲ್ಲಿಯೇ ನಿರಂತರವಾಗಿ ತಮ್ಮನ್ನು ತಾವು ತೊಡಗಿಸಿಕೊಂಡಿರುವ ಮಹಿಳೆಯರು ಮನೆಬಿಟ್ಟು ಹೊರಗೆ ಬರುವುದೇ ಇಂತಹ ಹಬ್ಬಗಳಲ್ಲಿ ಸಾಮೂಹಿಕವಾಗಿ ಹಾಡುವುದು, ಆಡುವುದು, ವೇಷಧರಿಸಿ, ರಂಜಿಸುವುದು ಇತ್ಯಾದಿ ಇದೆಲ್ಲವು ಮನದ ಹಿಗ್ಗನ್ನು ಹೊರ ಹೊಮ್ಮಿಸುವುದಕ್ಕಾಗಿ ಹಾಡಿ–ಹಾಡಿ ಹಿಗ್ಗುವುದೂ ಹಿಗ್ಗಿ ಹಿಗ್ಗಿ ಹಾಡುವುದು ಜನಪದರ ಸ್ವಭಾವ.

ಇನ್ನು ಈ ಹುಣ್ಣಿಮೆಗಳ ಬೆಳದಿಂಗಳಲ್ಲಿ ಮಾತ್ರವೇ ಹಾಡಬೇಕೆಂಬ ನಿಯಮ, ಕಟ್ಟು ನಿಟ್ಟುಗಳೇನೂ ಇಲ್ಲ. ಕೃಷಿಕ ಮಹಿಳೆಯರು ಹೊಲದಲ್ಲಿ ಕಳೆತೆಗೆಯುವಾಗ, ಹತ್ತಿ ಬಿಡಿಸುವಾಗ, ಹತ್ತಿಯ ಹೊರೆಯನ್ನೋ ಹುಲ್ಲಿನ ಹೊರೆಯನ್ನೋ ತಲೆಯ ಮೇಲೆ ಹೊತ್ತುಕೊಂಡು ಮನೆಗೆ ಬರುವಾಗ ಪಥಪರಿಶ್ರಮದ ಪರಿಹಾರಕ್ಕಾಗಿಯೂ ಹಾಡುತ್ತಾರೆ. ಅದರಂತೆ ಮನೆ ಕೆಲಸಗಳನ್ನು ಮುಗಿಸಿ ಹೊತ್ತು ಮುಳುಗಿದ ಮೇಲೆ ಬೆಳದಿಂಗಳಿರಲು ಇಲ್ಲದಿರಲಿ ಓಣಿಯ ಕೆಲವರು ಹೆಣ್ಣು ಮಕ್ಕಳು ಮನೆಯ ಹೊರಗಿನ ಕಟ್ಟಿಯ ಮೇಲೆ ಒಂದೆಡೆ ಕೂಡಿದರೆ ಮನೋರಂಜನೆಗೆಂದು ಈ ಹಾಡುಗಳನ್ನು ಹಾಡುತ್ತಾರೆ. ಹೀಗೆ ಸಮಯ ದೊರೆತಾಗ, ಅವರಿಗೆ ಹುಮ್ಮಸ್ಸು ಲಹರಿ ಬಂದಾಗ ಮನದಣಿಯೆ ಹಾಡುತ್ತಾ ಬಂದಿರುವ ಸೀಗಿ-ಗೌರಿ ಹಾಡುಗಳನ್ನು ಬೆಳದಿಂಗಳ ಹಾಡುಗಳೆಂದು ಕರೆಯುವುದು ಹೆಚ್ಚು ಸಮಂಜಸವೆನಿಸುತ್ತದೆ; ಉಚಿತವೆನಿಸುತ್ತದೆ.

ಧಾರ್ಮಿಕ ವಿಧಿ-ವಿಧಾನಕ್ಕನುಸರಿಸಿ ಹೆಳುವ ಸೀಗಿ-ಗೌರಿ ಹಾಡುಗಳನ್ನು ರಚಿಸಿದವರು ಮಾತ್ರ ಮೌಖಿಕ ಪರಂಪರೆಯ ಹೆಣ್ಣು ಮಕ್ಕಳೇ ಆಗಿದ್ದಾರೆಂಬುದು ನಿರ್ವಿವಾದ ಇವು ಹಾಡುಹಬ್ಬಗಳೇ ಹೊರತು ಓದು ಗಬ್ಬಗಳಲ್ಲ. ಇವುಗಳನ್ನು ಹಾಡುವಾಗ ಕೇಳಿದರೆ ಅದರಲ್ಲಿಯ ಭಾವ ಭಾವಕ್ಕೆ ತಕ್ಕ ಸ್ವರಗಳ ಏರಿಳಿತಗಳಿಂದ ಇವು ಹೆಣ್ಣು ಮಕ್ಕಳ ಹಾಡುಗಳೆಂದು ಆಗಲೇ ಆ ಕ್ಷಣದಲ್ಲಿಯೇ ಗೊತ್ತಾಗುತ್ತದೆ. ಹಾಳೆಯ ಹಂಗಿಲ್ಲದೇ ಸಾಕ್ಷರರ ಸಂಪರ್ಕವಿಲ್ಲದೆ ಶತ-ಶತಮಾನಗಳಿಂದಲೂ ಜನಪದರ ನಾಲಿಗೆಯ ಮೇಲೆಯೇ ಉಳಿದುಕೊಂಡು ಬಂದಿವೆ ಈ ಹಾಡುಗಳು

ಇಲ್ಲಿ ಸೀರೆ ರಕ್ಷಣೆ ನೀಡುವಂತಹದ್ದು, ಸೆರಗಿಗೆ ಅಂದವಾದ ಚಿತ್ತಾ ಸೇರಗಿನ ಸುತ್ತ ಬಾಳೆ, ಬಾಳಿಯ ಫಲದಲ್ಲಿ ಸಂತಾನದ ಸಂಕೇತವಿದೆ. ಕಲ್ಪನೆಯಿದೆ ನಟ್ಟ ನಡುವೆ ಬಾವಿ ಅದರ ಸುತ್ತ ಶರಣರು ಇರಬೇಕು. ಹೀಗೆ ಸೆರಗಿನಲ್ಲಿ ಅದರ ಸುತ್ತ ಒಳ್ಳೆಯ ಭಾವನೆ ಹುಟ್ಟುವಂತಹ ಕೊಡುವಂತಹ ಚಿತ್ರಪಟ್ಟಿಕೆಯ ಸೀರೆಯನ್ನು ಮಗಳು ಉಡಬೇಕು, ತಾನು ಕೊಡಬೇಕು ಎಂಬ ಸದಾಶಯದ ಸಂದೇಶ ಈ ಹಾಡಿನಲ್ಲಿ ಅಡಕವಾಗಿದೆ.

ಗಂಗೆ ಶಿವನ ಜಟಿಯಲ್ಲಿ ಬಂದ ಪ್ರಸಂಗವನ್ನು ಜನಪದರು ನೂರಾರು ರೀತಿಯಲ್ಲಿ ಹಾಡಿದ್ದಾರೆ. ಶಿವನಿಗೆ ಇಬ್ಬರ್ಹೆಂಡಿರ ಕಾಟ ಗಂಗೆ-ಗೌರಿಯರ ಸವತಿ ಮಾತ್ಸರ್ಯದ ಅಬ್ಬರದ ಹಾಡುಗಳು ತುಂಬಾ ಜನಪ್ರೀಯವಾಗಿವೆ. ಉತ್ತರ ಕರ್ನಾಟಕದ ಬಹುಭಾಗಗಳಲ್ಲಿ ಈಗಲೂ ಹೆಣ್ಣು ಮಕ್ಕಳು ಮನ ಬಂದಾಗ ಹಾಡಿ ಆನಂದಿಸುತ್ತಾರೆ. ಕಾಲ-ಕಾಲಕ್ಕೆ ಈ ಹಾಡುಗಳ ಸಂಗ್ರಹ ಕಾರ್ಯವು ನಡೆದಿದ್ದು ಕೆಲವು ಪುಸ್ತಕರೂಪದಲ್ಲಿ ಮತ್ತೆ ಕೆಲವು ಬೀಡಿ ಬಿಡಿಯಾಗಿ ಲೇಖನ

ಮಾಲೆಯಲ್ಲಿ ಪ್ರಕಟವಾಗಿವೆ. ವಿಷಯದಲ್ಲಿ ಏಕತೆ ಇದ್ದರೂ ಹಾಡುವವರ ಬೌದ್ಧಿಕ ಜಾಣ್ಮೆ, ಭಾಷಾ ಪ್ರೌಢಿಮೆಗನುಗುಣವಾಗಿ ಸಂವಾದದ ನಿರೂಪಣೆಯಲ್ಲಿ ವೈವಿಧ್ಯತೆ ಕಂಡುಬರುತ್ತದೆ.

ಹೆಣ್ಣು ಮಕ್ಕಳ ಈ ಕಥನ ಕಾವ್ಯಗಳಲ್ಲಿಯ ದೇಶಿಯ ಕಸುಬು-ಶಕ್ತಿ ಶಿಷ್ಟಸಾಹಿತ್ಯಕ್ಕೆ ಮಿಗಿಲೆನಿಸುವ ಸಾಮರ್ಥ್ಯ ಪಡೆದಿದೆ. ನಿಜವಾದ ಕನ್ನಡದ ಭಾಷಾ ಸಮೃದ್ಧಿ, ಸತ್ವದ ದರ್ಶನವಾಗುವುದು ಈ ಹೆಣ್ಣು ಮಕ್ಕಳ ಹಾಡುಗಳಲ್ಲಿಯೇ ಗಂಗೆ-ಗೌರಿಯರ ಕಥನಕಾವ್ಯಗಳಲ್ಲಿ ಕಥೆಯನ್ನು ಹೇಳುವ ಶೈಲಿ ಮತ್ತು ಕಲ್ಪನೆಗಳು ರಮ್ಯ ಮನೋಹರವಾಗಿ ಮೂಡಿ ಬಂದಿವೆ. ಮುಖ್ಯವಾಗಿ ಗಂಗೆ-ಗೌರಿಯರ (ಕದನದ) ಸಂದರ್ಭದಲ್ಲಿ ವ್ಯಕ್ತವಾಗಿರುವುದನ್ನು ಸೋದಾರಣವಾಗಿ ವಿವೇಚಿಸಲಾಗಿದೆ. ಪೂರ್ವ ನೀಶ್ಚಿತದಂತೆ ಶಿವನು ಗಂಗೆಯನ್ನು ತರಲು ನಂದಿಯನ್ನು ಸಿಂಗರಿಸಿಕೊಂಡು ನದಿ ದಡಕ್ಕೆ ಹೋಗುತ್ತಾನೆ. ಎಂದು ತಿಳಿಸುವುದರೊಂದಿಗೆ ಹಾಡುಗಳು ಪ್ರಾರಂಭವಾಗುತ್ತವೆ.

ಗಂಗೀನ ತರಬೇಕಂತ ನಂದೀನ ಸಿಂಗಾರ ಮಾಡಿ
ಕೊಂಬೆಣಸ ಕೋರಳ ಹುಲಗೆಜ್ಜಿ ಕೋಲ ॥
ಕೊಂಬೆಣಸ ಕೊರಳ ಹುಲಗೆಜ್ಜಿ ಶಿವರಾಯ
ಗಂಗೀನ ತರಲು ನಡೆದಾರ ಕೋಲ॥

ಮತ್ತೊಂದು

ಜುಳು ಜುಳು ಹರಿಯುತ ಜೋಳಕ ನಲಿದಾಡುತ
ನಂದೀಗೆ ನೀರ ಕುಡಸೂತ ಕೋಲ ॥
ನಂದಿಗೆ ನೀರ ಕುಡಸೂತ ಶಿವರಾಯ
ಗಂಗಿ ನೋಡ್ಯಾನ ಕಡಿಗಣ್ಣೆಲೆ ಕೋಲ ॥
ಕಡಗಣ್ಣೇಲೆ ನೋಡ್ಯಾನ ಕುಡಿಹುಬ್ಬ ಹಾರಿಸ್ತಾನ

ಒಬ್ಬ ಯುವ ಪ್ರೇಮಿಯ ಕುಡಿನೋಟ, ಓರೆನೋಟ ಇತ್ಯಾದಿ ಪ್ರಣಯ ಚೇಷ್ಟೆಯ ಚಿತ್ರಣವು ಸೊಗಸಾಗಿ ರೋಮಾಂಚಕವಾಗಿ ಚಿತ್ರಿತವಾಗಿದೆ ಗಂಗೆಗೆ ತನಗೊಬ್ಬಳು ಮಡದಿಯಿರುವಳೆಂಬ ಸಂದೇಹ ಬರದಂತೆ ಅವಳ ಸಂಶಯವನ್ನು ನಿವಾರಿಸಲು ದೇವರು ದಿಂಡರ ಆಣೆಮಾಡಿ, ನಂಬಿಸಿ ಮನವೊಲಿಸಿ ತನ್ನ ಜಡೆಯಲ್ಲಿಟ್ಟುಕೊಂಡು ತನ್ನರಮನಿಗೆ ಕರೆದುಕೊಂಡು ಬರುತ್ತಾನೆ. ಅದಕ್ಕೆ ಮೊದಲು

ಜಡೆಯೊಳಗೆ ಹೋಗುವುದು ಗಿಳಿರಾಯ ಕಂಡಾನ
ಹೋಗಿ ಹೇಳ್ಯಾನ ಗೌರವ್ವಗ ಕೋಲ॥

ತನ್ನ ಮೇಲೆ ಶಿವ ಮತ್ತೊಬ್ಬಳನ್ನು ಕಟ್ಟಿಕೊಂಡು ಬಂದಿರುವ ಸುದ್ದಿ ತಿಳಿದು ಗೌರಿ ನೇರವಾಗಿ ತವರಿಗೆ ಹೋಗುತ್ತಾಳೆ ಅಣ್ಣನಿಗೆ ಈ ವಿಚಾರ ತಿಳಿಸುತ್ತಾಳೆ ಆಗ ಆತ ದೇಶನಾಳೋರಿಗೆ

ಏಸೊಂದು ಹೆಂಡಿರು ನೀ ಯಾಕ ಅದರ ಬಗ್ಗೆ ದುಃಖಿಸುತ್ತಿ, ಬರುವಾಕಿಯ ಚಿಂತಿ ನಿನಗ್ಯಾಕ ನಿನ್ನಷ್ಟಕ್ಕೆ ನೀನು ಆರಾಮದಿಂದಿರು, ಎಂದು ಸಾಂತ್ವನದ ನುಡಿಗಳನ್ನಾಡಿ ಕಳಿಸುತ್ತಾನೆ. ಮೊದಲೇ ಮಾನಸಿಕ ಸ್ವಾಸ್ಥ್ಯ ಕಳೆದುಕೊಂಡಿದ್ದ ಗೌರಿಗೆ ಅಣ್ಣನ ಹಿರೋಪದೇಶದಿಂದ ಮನದ ತಾಪ-ಉಮ್ಮಳ ಅಧಿಕವಾಗುತ್ತದೆ. ಆಗಿನ ಅವಳ ಮನಸ್ಥಿತಿಯನ್ನು ಕುರಿತು ಬಂದಿರುವ ನುಡಿಗಳು ಹೀಗಿವೆ.

ಕಿಡಿಕಿಡಿನಾದಳ ಕಿಡಿ ಚಂಡನಾದಾಳ
ಎಡವೀದ ಬೆರಳೊಂದು ಅರುವಿಲ್ಲ ಕೋಲ॥

ಅಷ್ಟರಲ್ಲಿಯೇ ಶಿವ ಮನೆ ಬಾಗಿಲಿಗೆ ಬಂದು ನಿಂತು ಸಭ್ಯ ಗೃಹಸ್ಥನಂತೆ ನಟಿಸುತ್ತಾ ಗೌರಿಯನ್ನು ಕರೆಯುತ್ತಾನೆ.

ದೇಶದೇಶದ ತಿರುಗಿ ಬ್ಯಾಸತ್ತ ಬಂದೀನಿ
ಉಗ್ರಾಣದ ಗವರಿ ಕದ (ಬಾಗಿಲ) ತೆಗಿಯೆ ಕೋಲ ॥

ಒಳಗೊಳಗೇ ಅಸಮಾಧಾನದಿಂದ ಕುದಿಯುತ್ತಿರುವ ಗೌರಿಯು ಸಿಟ್ಟಿನಿಂದಲೆ ಉತ್ತರಿಸುತ್ತಾಳೆ.

(ಬಾಗಿ ಬಾ ಶಿವರಾಯ ಬಾಗಿಲ ತೌಕ್ಯವ
ಬಾಯಾಗಿನ ಎರಡ್ಹಲ್ಲ ಉದರ್‍ಯಾವ ಶಿವರಾಯ
ತಲೆಯಾಗಿನ ಗಂಗಿ ಬಿದ್ದಾಳ ತಳಿಯಾಕ ಕೋಲ ॥)

ಗೌರಿಯನ್ನು ತಾನು ಗಂಗಿಯನ್ನು ತಂದಿರುವ ವಿಷಯ ಗೊತ್ತಾಗಿದೆ ಗಂಗೆಯನ್ನು ಸಮಾಧಾನದಿಂದ ಸ್ವೀಕರಿಸುವ ಮನಸ್ಥಿತಿಯಲ್ಲಿ ಅವಳಿಲ್ಲವೆಂಬುದನ್ನು ಅರ್ಥೈಯಿಸಿಕೊಳ್ಳುತ್ತಾನೆ. ಆಸಂಧಿಗ್ಧ ಪರಿಸ್ಥಿತಿಯಿಂದ ತಾನು ಬಿಡುಗಡೆಯಾಗುವ ಅವರೀರ್ವರಲ್ಲಿ ಒಡಂಬಡಿಕೆಯನ್ನುಂಟು ಮಾಡುವ ಸಮಯೋಚಿತ ನುಡಿಗಳು ಹೀಗಿವೆ

ಬಾಗಿ ನಿಂತಾಳ ಗಂಗಿ ಬಾಳಿ ಕಂಬದ್ಹಂಗ
ಬಾರ ನಿಮ್ಮಕ್ಕಗ ಶರಣೆನ್ನ ಕೋಲ॥

ಅತೀವಿನಯ ಧೂರ್ತಲಕ್ಷಣಂ ಎಂಬ ಲೋಕೋಕ್ತಿ ಇಂಥವರನ್ನು ಕುರಿತೇ ಹೇಳಿರಬೇಕು. ಒಬ್ಬಳ ತಾನು ಬಗ್ಗಿಸಿದರೆ ಮತ್ತೊಬ್ಬಳ ಮನ ತಗ್ಗಿಸಿ ಪರಸ್ಪರರಲ್ಲಿ ಹೊಂದಾಣಿಕೆ ತರಲು ನಡೆಸಿದ ಪ್ರಯತ್ನದಲ್ಲಿ ಗೆಲುವು ಸಾಧಿಸುತ್ತಾನೆ. ಆಗ ಗೌರಮ್ಮ ಮನಸ್ಸಿಲ್ಲದ ಮನಸ್ಸಿನಿಂದ ಹಿರಿಯಳಾಗಿ ಆಶೀರ್ವಾದ ಮಾಡಲೇಬೇಕಾಗುತ್ತದೆ. 'ಆಸೆವಂತಳಾಗು ಅದೃಷ್ಟ ಬಲ್ಲಿದವಳಾಗು'ಎಂದಿಷ್ಟೇ ಹೇಳಿ ಒಳಗೆ ಕರೆದುಕೊಂಡಿದ್ದರೆ ಗೌರಮ್ಮ, ಸವತಿಯರಿದ್ದ ಸತಿಯರಿಗೆ ಮಾದರಿಯಾಗುತ್ತಿದ್ದಳು, ಅಪರೂಪದಲ್ಲಿ ಅಪರೂಪವಾಗಿ ಪರಿಗಣಿತಳಾಗುತ್ತಿದ್ದಳು. ಆದರೆ ಹಾಗಾಗದೆ ಔಪಚಾರಿಕವಾಗಿ

ಹಿರಿಯಳಾಗಿ ಆಸೆವಂತಳಾಗು ಅದೃಷ್ಟವಂತಳಾಗು ಎಂದು ಹೇಳಿದ ಆಶೀರ್ವಚನದ ಮುಂದಿನ ಸಾಲೇ ಅಂಬಿಗಿತ್ತಿ ತಂದ ಕದನವ ಕೋಲ ಎಂದು ಕದನಕ್ಕೆ ನಾಂದಿ ಹಾಡುತ್ತಾಳೆ ಇಲ್ಲಿಯವರೆಗೆ ಬಾಳಿಯ ಕಂಬದ್ಹಂಗ ಬಾಯಿಮುಚ್ಚಿಕೊಂಡು ನಿಂತಿದ್ದ ಗಂಗೆಗೆ ತನ್ನ ಕುಲವನೆತ್ತಿ ಮಾತನಾಡಿದಾಗ ಸುಮ್ಮನಿರಲಾಗುವುದಿಲ್ಲ ತಕ್ಷಣ ಮಾತಿಗೆ ಮಾತು ಪೋಣಿಸುತ್ತಾಳೆ.

ಗಂಗೆ : ಅಂಬಿಗಿತ್ತಿ ಅಂತ ಅಣಕ ಆಡಲಿಬ್ಯಾಡ
ಹಿಡಿಸೇನ ಮೀನ ಮಸಳಿಯ ಕೋಲ ॥

ಗೌರಿ : ಹಿಡಿಸ ನಿಮ್ಮವ್ವಗ ಹಿಡಿಸ ನಿಮ್ಮಪ್ಪಗ
ಹಿಡಿಸ ತಂದಂಥ ತಪಸಿಗೆ ಕೋಲ॥

ಗಂಗೆ : ಬಿಟ್ಟೀನ ನಮ್ಮಪ್ಪಗ ಬಿಟ್ಟೀನ ನಮ್ಮವ್ವಗ
ಬಿಟ್ಟೀನ ನನ್ನ ಬಿಟ್ಟೀನ ನನ್ನ ಸರಿ ಸವತಿಗೆ ಕೋಲ ॥

ಸದ್ಯ ತಾವಿಬ್ಬರು ಅಕ್ಕ-ತಂಗಿಯರು ಹಾಗೆಯೇ ವರ್ತಿಸಬೇಕೆಂಬುದನ್ನು ಮರೆತು ಪ್ರತಿಸ್ಪರ್ಧಿಗಳಂತೆ ಕದನದ ಕಣಕ್ಕಿಳಿದಿದ್ದಾರೆ. ಅವರ ಮಾತಿನಲ್ಲಿರುವ ಮೊನಚು, ಅಬ್ಬರ, ದೇಶಿಭಾಷೆಯ ಶಬ್ದ ಸಂಪತ್ತು ಕುಲ-ಗೋತ್ರ, ಸ್ಥಾನ-ಮಾನ ಶ್ರೇಷ್ಠಾ ಶ್ರೇಷ್ಠತೆಯ ನೈಜ ದರ್ಶನವಾಗುತ್ತದೆ. ಸವತಿಮಾತ್ಸರ್ಯದ ದಿಗ್ದರ್ಶನವಾಗುತ್ತದೆ.

ನನಕೂಟ ಸರಿಯೇನೆ ಬೇಸ್ತರ ಮಗಳೆ
ಬೇಸ್ತರ ಮಗಳಾದ್ರೆ ಕುಂದೇನು ಕೋಲೆ
ಓಡಿ ಬಂದೆಲ್ಲ ನನ ಸವತಿ ಗಂಗೆ
ಓಡಿ ನಾ ಬಂದಿದಲ್ಲ ಶಿವನಾಗೆ ತಂದೆ
ಹತ್ತೆಂಟು ಸಮುದ್ರ ಅಕ್ಕ ನಾನು ನೆತ್ತೀಲಿಹರವತಿದ್ದೆ
ಜತ್ತನುಳ್ಳ ಪುರುಷ ಜಡೆಯೊಳಗೆ ಇಟಗೊಂಡು
ತಂದಾರು ನಾನು ಬಂದೆ'
ಸರಿ ಸರಿ ನಿಂತು ಮಾತಾಡುತೀಯ

ಅವರೀರ್ವರ ಕೊನೆಯಿಲ್ಲದ ನಿಲ್ಲದ ಜಗಳವನ್ನು ಕಣ್ಣಾರೆ ಕಂಡು ಶಿವನು

ಕೆಂಚೆರಿಬ್ಬರ ಜಗಳ ಕೇಳಲಾರೆನೆಂದು
ಮಂಚ ನೆಲದಾಡಿ ನಕ್ಕ,

ಹೀಗೆ ಬಿದ್ದು ಬಿದ್ದು ನಗುತ್ತಿರುವ ಶಿವನೆಡೆಗೆ ಗಂಗೆ ಬಂದು ತನ್ನನ್ನು ಹೀನಾಯವಾಗಿ ನಿಂದಿಸುತ್ತಿರುವಳೆಂದು ದುಃಖಿಸುತ್ತಾಳೆ. ಆಗ ಕಿಡಿಗೇಡಿ ಶೀರಿ

"ಇಷ್ಟೇಲ್ಲಾ ಅನಿಸಿಗೊಂಡು ನೀ ಹ್ಯಾಂಗ ಸುಮ್ಮನಾದಿ
ಸಿಂಪಿಗ್ಯಾನ ಸೂಳಿ ಅನಬಾರದಿತ್ತ"

ಎಂದು ಉರಿಯುವ ಬೆಂಕಿಗೆ ತುಪ್ಪಸುರಿದು ಮೋಜು ನೋಡುತ್ತಾನೆ. ಗೌರಿಯ ಚುಚ್ಚುನುಡಿಗೆ ಗಂಗೆ ಸಿಟ್ಟಿಗೆದ್ದು ಹೊರಟು ಹೋಗುತ್ತಾನೆ. ಆದರೆ ಕೊನೆಗೆ ಗೌರಿಯ ಸೂತಕ ಕಳೆಯಲು ಗಂಗೆಯೇ ಬರಬೇಕಾಗುತ್ತದೆ. ಇಂತಹ ಹೃದಯಸ್ಪರ್ಷಿ ಹಾಡುಗಳನ್ನು ಜನಪದ ಕವಯಿತ್ರಿಯರು

ಹಾಡಿ ತಮ್ಮ ಭಾವನೆಗಳನ್ನು ಪ್ರಕಟಪಡಿಸಿದ್ದಾರೆ. ಬದುಕಿನಲ್ಲಿ ಹೊಂದಾಣಿಕೆಯ ಸಂಸ್ಕೃತಿಯನ್ನು ಎತ್ತಿಹಿಡಿದಿದ್ದಾರೆ. ಲೋಕದ ಕಲ್ಯಾಣಕ್ಕಾಗಿ ಪಂಚಭೂತಗಳ ಸಮತೋಲನದ ಅವಶ್ಯಕತೆಯನ್ನು ರಿತ ಶಿವನಿಗೆ ಗಂಗೆಯನ್ನು ಹಿಡಿದಿಟ್ಟುಕೊಳ್ಳುವುದು ಅನಿವಾರ್ಯವಾಗಿತ್ತು. ಅಷ್ಟೇ ಅಲ್ಲ ಅವರೀರ್ವರ ಸಹಕಾರ, ಸಹಬಾಳ್ವೆಯಲ್ಲಿ ಪ್ರಪಂಚದ ಹಿತವಿದೆ. ಎಂಬ ಪ್ರಮುಖ ಅಂಶವನ್ನು ಹಿಡಿದಿಡಲಾಗಿದೆ.

ಶಿವ–ಗೌರಿಯ ಹಾದರದ ಹಾಡುಗಳು

ಜನಪದ ಸೀಗಿ–ಗೌರಿಯರ ಹಾಡುಗಳನ್ನು ಸಂಗ್ರಹಿಸುವ ಕಾರ್ಯಕ್ಕೆ ತೊಡಗಿಸಿಕೊಂಡಾಗ ನನಗೆ ವಿಶಿಷ್ಟವಾದ ಅನುಭವಗಳಾದವು ಪೌರಾಣಿಕ ಹಿನ್ನೆಲೆಯಲ್ಲಿ ಲೌಕಿಕ ಬದುಕನ್ನು ಸಮೀಕರಿಸಿ ಕಥೆ–ಕಟ್ಟುವ–ಕಟ್ಟಿದ ಜನಪದರ ಬೌದ್ಧಿಕ ಜಾಣ್ಮೆ ತಲೆದೂಗುವಂತಹದ್ದು ಸಾಮಾನ್ಯವಾಗಿ ಜೀವನದಲ್ಲಿ ನಡೆಯುವ ಮದುವೆ ಬಸಿರು–ಬಾಣಂತನ ಮೊದಲಾಗಿ ಹಲವಾರು ಸಂಪ್ರದಾಯದ ಹಾಡುಗಳಲ್ಲದೆ ಇಬ್ಬರು ಹೆಂಡಿರನ್ನು ಕಟ್ಟಿಕೊಂಡು ಗಂಡನ ಭಂಡತನ, ಸವತಿಯರ ಜಗಳ ಅರ್ಥಾತ್ ಇಲ್ಲಿ ಶಿವನು ಗೌರಿ ತನ್ನ ಪತ್ನಿಯಿದ್ದರೂ ಗಂಗೆಯನ್ನು ಮನೆಗೆ ಕರೆತಂದು ಹಗರಣಕ್ಕೆ ಕಾರಣವಾದ ಹಾಡುಗಳು ಮೊತ್ತವೇ ಸಂಗ್ರಹವಾಯಿತು. ಈ ಹಾಡುಗಳ ಸಂಗ್ರಹದಲ್ಲಿ ಗೌರಿಯ ಹದರದ ಹಾಡುಗಳು ವಿಶೇಷ ಗಮನ ಸೆಳೆದವು ಚಿಂತನೆಗೆ ಹಚ್ಚಿದವು.

೧. ನಾಚಿ ಭೂಮ್ಯಾಕ ಇಳದಾಳ ಶ್ರೀಗವರಿ

೨. ಕುಂತಿದ್ದ ಶ್ರೀಗವರಿ ಭೂಮ್ಯಾಗ ಎರಗ್ಯಾಳ

೩. ಹಾದರ ರುಚಿಯ ತಿಳಿತೇನ ಗವರಿ

ಈ ಮೂರು ಹಾಡುಗಳು ಆಶಯ ಒಂದೇ ಮೂರು ಬೇರೆ–ಬೇರೆ ಪಾಠಾಂತರಗಳ ನಿರೂಪಣೆಯಲ್ಲಿ ಕೊಂಚ ಬದಲಾವಣೆ ಇದ್ದು ಮೂಲ ಆಶಯದೊಂದಿಗೆ ಹೀಗೆ ಪ್ರಾರಂಭವಾಗುತ್ತವೆ:

೧. ಪಾರ್ವತಿ ಶಿವ ಕಲ್ತು ಜೋಡ ನಂದಿಯನೇರಿ
ಆರ್ಯಾಣದಾಗ ಬರತಿದ್ದರ ಕೋಲು ಶ್ರೀ ಗಂಧದ ಕೋಲು॥
ಅರ್ಯಾಣದಾಗ ಬರವೂತ ಕೋಲು ಶ್ರೀ ಗವರಿ ಕೇಳ್ಯಾಳ
ಹಾದರ ಅಂಬೂದು ಅದು ಏನ ಶಿವನ ಕೋಲು ಶ್ರೀಗಂಧದ ಕೋಲು ॥
ಹಾದರ ಅಂಬೂದು ಹಾಲಿನಕಿನ ಹಿತ
ಅದು ಏನ ನೀ ಬಲ್ಲಿ ಶ್ರೀಗವರಾ ಕೋಲು ಶ್ರೀಗಂಧದ ಕೋಲು ॥

೨. ಶಿವನ ಮನಿ ಶ್ರೀ ಗವರಿ ತೂಗಾ ಮಂಚದ ಮ್ಯಾಲ

ಪಗಡಿ ಜೂಜಾಡಿ ಗೆದೆಯುತ ಕೋಲಣ್ಣ ಕೋಲೆ ॥
ಗೆದೆಯುತ ಕೇಳ್ಯಾಳ ಶಿವಗ ಹಾದರ
ಎಂಬುದು ಅದು ಹ್ಯಾಂಗ ಕೋಲಣ್ಣ ಕೋಲೆ ॥
ಹಾದರ ಅಂಬೂದು ಹಾಲ ಮೇಲಿನ ಕೆನಿ
ಸಕ್ಕೂರಿಕ್ಕಿಂತ ರುಚಿ ಅದು ಕೋಲೆಣ್ಣ ಕೋಲೆ ॥

೩. ಶಿವನು ಶ್ರೀಗವರಿ ಕೂಡಿ ನಂದಿಯನೇರಿ
ಹಾದರ ಹೆಣ್ಣ ಎದುರಲ್ಲಿ ॥
ಹಾದರನಂಬೋದು ಅದು ಹೆಂಗ ಇರುವುದು
ತೋರಿಸಿಕೊಡರಿ ನಮಗೀಟ್ಟು ॥
ಹಾದರನಂಬೂದು ಹಾಲಕ್ಕಿನ ರುಚಿಯೆ
ಬ್ಯಾಡ ಶ್ರೀಗವರಿ ಬಂಡಾಟ॥
ಹಾಧರ ನಂಬೋದು ಹಾಲಿನ್ಯಾಗಿನ ಕೆನಿ
ಬ್ಯಾಡ ಶ್ರೀಗವರಿ ಬಂಡಾಟ ॥
ಬಂಡಾಟವಾಗಲಿ ಬೇಕು ದಂಡನೆರಿಯಲಿಬೇಕು
ರಾಜ ಬೀದಿಯಾಗ ತಲಿಯ ಹೋಡಿಯಲಿ ಬೇಕು ॥

(ಸಂಗ್ರಹ:- ಮಹಿಳಾ ಸಂಪದ: ಡಾ.ಪ್ರೀತಿ ಶುಭ ಚಂದ್ರ ಪುಟ. ೩-೪)

ಈ ಮೂರು ಹಾಡುಗಳು ಮೂಲ ಕಥೆ-ಸಂವಾದ ಶಿವ-ಗೌರಿಯರ ಮಧ್ಯೆ ನಡೆಯುವಂತಹದು ಗೌರಿ (ಹಾಡು ನಂ. ೧.೨.) "ಹಾದರ ಹೆಣ್ಣ ಎದುರಲ್ಲಿ" ಕಂಡಾಗ ಹಾದರ ಅಂದರೇನು ಅದು ಹೇಗೆ ಇರ್ತದ ಅದನ್ನ ಹೇಳು ಎಂದು ಶಿವನಿಗೆ ದುಂಬಾಲು ಬೀಳುವಳು ಅದಕ್ಕೆ ಉತ್ತರವಾಗಿ ಶಿವನು ಮಾದಕ ನಗೆ ಬೀರುತ್ತ 'ಅದು ಹಾಲಿನ ಕೆನಿ ಹ್ಯಾಂಗ (ಸ್ನಿಗ್ಧ) ಸಕ್ಕರಿಗಿಂತ ರುಚಿ ರುಚಿಯಾಗಿರ್ತದೆ' ಎಂದು ಹೇಳಿ ಅವಳ ಕಿವಿ ನಿಮಿರುವಂತೆ ಕುತೂಹಲ ಕೆರಳುವಂತೆ ಬಣ್ಣಿಸುವನು. ಹಾಗೆಯೇ ತಾನು ಪಟ್ಟಣಕ್ಕೆ ಹೋಗ್ತೀನಿ ಎಂಟುದಿನ ಆರು ವರ್ಷ, ಹತ್ತು ವರ್ಷ ಹೀಗೆ ಅವಧಿ ತಿಳಿಸಿ ನಾನು ಬರುವುದಿಲ್ಲ ಬುತ್ತಿ ಕಟ್ಟಿಕೊಂಡು ನೋಡಿಕೋ ಜಾಗ್ರತಳಾಗಿರು ಎಂದು ಅವಳ ಬಗ್ಗೆ ಕಾಳಜಿ ತೋರಿಸುತ್ತಾಳೆ.

ಮುಖ್ಯವಾಗಿ (೧) ನನ್ನ ದಸರೀಪಗಳು (೨) ಪಟ್ಟವಳಿ ಜ್ವಾಕಿ (೩) ಗದ್ದುಗಿ ಬಲುಜ್ವಾಕಿ- ಎಂದು ಅವುಗಳ ಬಗ್ಗೆ ಎಚ್ಚರಿಕೆ ಕೊಟ್ಟು ಹೋಗುತ್ತಾನೆ ಅರ್ಥಾತ್ ತನ್ನ ಹೊದಿಕೆಗಳು ಕೆಡದಂತೆ, ಹಾಳಾಗದಂತೆ, ಜೋಪಾನವಾಗಿ ನೋಡಿಕೋ, ಎಂದು ಸೂಚ್ಯವಾಗಿ ಆ ಕಡೆಗೆ ಅವಳ ಗಮನ ಸೆಳೆದು ಹೋಗುತ್ತಾನೆ.

ಮುಂದೆ ನುಸಿ ಮುಟ್ಟಿ ಬಾಳೆಲಿ, ನಿಂಬೀ ಎಲ್ಲಿ ಇತ್ಯಾದಿ ಸೀಳಿ ಇಲಿ ಮಾಡಿ 'ಶಿವನ ಹೊದಿಕೆಗೆ ಮುಟ್ಟಿ ಬಿರ್ರಿ' ಅಂತ ಕಳಿಸುವನು. ಇಲ್ಲಿ ತೂತು ತೂತು ಮಾಡಿ ಹಾಕಿದ್ದನ್ನ ಮೂರು ದಿನಾ ಆದ ಮೇಲೆ ತೆಗೆದು ನೋಡುವಳು ಹೊದಿಕೆ ಅಥವಾ ಶಿವನ ವಸ್ತ್ರಗಳನ್ನು ನೋಡಿ ಶ್ರೀ ಗವರಿ ಹೌ ಹಾರುತ್ತಾಳೆ. ಮುಂದೇನ ಮಾಡಬೇಕೆಂಬುದು ತೋಚದೆ ಹೋಗಿ "ಓಣ್ಯಾನ ಅಕ್ಕದಿರೆ ಓಣ್ಯಾನ ತಂಗಿದಿರಿ । ನೋಡ ಬಾ ನನ್ನ ಮನಿಯ ಗಹರಣ । ಎಂದು ಕರೆಯುತ್ತಾಳೆ, ಅದಕ್ಕೆ ಅವರು' ನಿಮ್ಮ ಮನಿಯಾನ ಹಗರಣ ನಾವೇನ ನಾಡೋಣ ! ಅದು ಏನು ಪಾಪ ಶಿವ ಬಲ್ಲ । ಮುಂದೆ ಗವರಿಗೆ ಏನೋ ಆಪತ್ತು ಕಾದಿದೆ ಎಂದು ನುಡಿದು ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸುತ್ತಾಎ. ಅಷ್ಟರಲ್ಲಿಯೇ ಶಿವ ಸಿಂಪಿಗ್ಯಾನ ಸೋಗು ಹಾಕ್ಕೊಂಡು ಒಕ್ಕಲಗೇರ್ಯಾಗ ಹಾರೂರಗೇರ್ಯಾಗ ಹೊಕ್ಕು ಒದರ್ತಾನ; ಕೂಸಿನ ಕುಲಾಯಿ ಕುಂಚಿಗಿ ಹೊಲಿಸುವವೆರು ಯಾರಾದರೂ ಇದ್ದಿರೇನು ಅಂತ ಧ್ವನಿ ಕೇಳಿದವರು ಅವನನ್ನು ಅಕ್ಕ ಗವರಮ್ಮನ ಮನೀಗೆ ಹೋಗು ಎಂದು ಕಳಿಸಿ ಕೊಡುತ್ತಾರೆ.

ಆಗಲೇ ಸಿಂಪಿಗ್ಯಾನ ಧ್ವನಿ ಕೇಳಿದ ಶ್ರೀ ಗವರಿ ಆ ಓಣಿಗೆ ಅತ್ತಲಿನ ನಿಚ್ಚಣಿಕೆ ಹಚ್ಚ್ಯಾಳ । ಏರಿ ಕರದಾಳ ಸಿಂಪಿಗ್ಯಾನ। ಹಡು ನಂ. ೧ ರಲ್ಲಿ ಇದ್ದಂತ ದಸರದೀಪ ಇದ್ದ ಹಾಂಗ್ಹ ಮಾಡಿದರ । ನೀ ಬೇಡಿದ ಕೂಲಿ ಕೊಡುವೇನ । ಎನ್ನುತ್ತಾಳೆ. ಹಾಡು ನಂ. ೨ ರಲ್ಲಿ ಇದ್ದ ಹೊದಕಿಗಳು ಇದ್ಹಾಂಗ ಮಾಡ್ತೀನಿ । ನಿಯೇನ ಕೊಡುತಿ ಶ್ರೀ ಗವರಿ । ಎಂದು ಶಿವನೇ ಕೇಳುತ್ತಾನೆ. ಸಾಮಾನ್ಯವಾಗಿ ಎಲ್ಲರೂ ಕೇಳುವಂತೆ, ಕೊಡುವಂತೆ ತನ್ನಲ್ಲಿದ್ದ ಮುತ್ತು ಮಾಣಿಕ್ಯ , ಬಂಗಾರ, ಆನಿ, ಕುದರಿ, ಒಂಟಿ–ಮೊದಲಾದವುಗಳನ್ನು ಕೊಡುವುದಾಗಿ ಹೇಳುತ್ತಾಳೆ. ಅವಳು ಹೇಳುವ ವಸ್ತುಗಳೆಲ್ಲಾ ತನ್ನ ಮನೆಯಲ್ಲಿ ಸಾಕಷ್ಟಿವೆ, ಬೆಲೆಯಿಲ್ಲ ಅವಕ್ಕೆಲ್ಲ ಎಂದು ನಿರಾಕರಿಸುತ್ತಾನೆ. ಈ ಮೊದಲೇ 'ನೀ ಬೇಡಿದ ಕೂಲಿ ಕೊಡವೆ' ಎಂದು ಗೌರಿ ಮಾತು ಕೊಟ್ಟಿರುತ್ತಾಳೆ. ಅದಂತೆ ಆತ ವಸ್ತ್ರಗಳನ್ನು ಸರಿ ಮಾಡಿ, ಮೊದಲಿದ್ದಂತೆ ಸರಿ ಮಾಡಿ ತನ್ನ ಕೂಲಿ ನೀನು ನನ್ನ ಜೊತೆ ಮಲಗಬೇಕು ಸುರತ ಸುಖ ನೀಡಬೇಕೆಂದು ಆಪೇಕ್ಷಿಸುತ್ತಾನೆ. ಕೊಟ್ಟ ಮಾತಿಗೆ ಗವರಿ ಅನಿವಾರ್ಯವಾಗಿ ಒಪ್ಪಬೇಕಾಗುತ್ತದೆ. ಸಂಭೋಗದ ಮಧ್ಯೆ ಸಿಂಪಿಗವೇಷಧಾರಿ ಶಿವನು ತನ್ನ ನಿಜರೂಪ ತಳೆಯುತ್ತಾನೆ. ಅವನನ್ನು ಕಂಡು ನಾಚಿ ಭೂ ಮ್ಯಾಕ ಇಳದಾಳ ಶ್ರೀ ಗವರಿ ಮತ್ತು ಕುಂತಿದ್ದ ಶ್ರೀ ಗವರಿ ಭೂಮ್ಯಾಗ ಎರಗ್ಯಾಳ ಹೀಗೆ ಅವಮಾನದಿಂದ ತಲೆತಗ್ಗಿಸಿ ಭೂಮಿಗೆರಗಿದಳೆಂದು ತಿಳಿಸುವುದರೊಂದಿಗೆ ಹಾಡುಗಳು ಮುಕ್ತಾಯವಾಗುತ್ತವೆ. ನಗೆ–ಹಗೆಯಾದುದು, ವಿನೋದ–ವಿಷಾದಕ್ಕೆ ದುರಂತಕ್ಕೆ ತಿರುಗುತ್ತದೆ. ಇದನ್ನರಿತ ಶಿವ

ಅಟ್ಟಂಬಾರ್ಯಾಣದಾಗ ಹಾದರ ಕೇಳಿದ್ದಿ

ಹಾದರ ಅಂಬೂದು ಇದ ನೋಡ ನಕೋಲು ಶ್ರೀಗಂಧದ ಕೋಲು

ಅದನ್ನು ನಿನಗೆ ತಿಳಿಸಿಕೊಡುವುದಕ್ಕಾಗಿ ತಾನು ಹೀಗೆ ವೇಷಧರಿಸಿ ಬರಬೇಕಾಯಿತೆಂದು ಅಷ್ಟೇ ತಿಳಿಸಿ ಹೇಳಿದರೂ ಆಕೆ ತಿರುಗಿ ಅವನನ್ನು ನೋಡಲಿಲ್ಲ; ತಗ್ಗಿಸಿದ ತಲೆಯನ್ನು ಮೇಲಕ್ಕೆತ್ತಲಿಲ್ಲ. ಮೇಲು ನೋಟಕ್ಕೆ ವಿನೋದದ ಛಾಯೆಯು ಈ ಕಥನಗಳನ್ನು ಆವರಿಸಿದ್ದರೂ ಬಂದು ಮಾತಂತೂ ಸ್ಪಷ್ಟ; ಪರೀಕ್ಷಿಸಿ ಬಯಸುವ ಗಂಡು ಮತ್ತು ಅಕ್ರಮಣ ಮಾಡುವ ಗಂಡು ಇವರಿಬ್ಬರ ಮೂಲಕ ಹೆಣ್ಣಿಗೆ ಮನುಷ್ಯ ಕ್ರೌರ್ಯದ ಪರಿಚಯವಾಗುತ್ತದೆ, ಕಟುದರ್ಶನವಾಗುತ್ತದೆ.

ನಾಗರಿಕ ಸಮಾಜದಲ್ಲಿನ ಸಾಮಾಜಿಕ ನಿಷೇಧವಾದ 'ಹಾದರ' ಕಲ್ಪನೆಯು ಪೂರ್ಣವಾಗಿ ಸ್ವಾಮ್ಯದ ಕಲ್ಪನೆಯನ್ನಾಧರಿಸಿದ್ದು ಎಲ್ಲರಿಗೂ ಸೇರಬಹುದಾದ ಯಾರೇ ಒಬ್ಬರಿಗೇ ಸೇರದ ಹೆಣ್ಣೊಬ್ಬಳು 'ವೇಶ್ಯ' ಯಾದಾಗ ಆಕೆಯದು 'ಹಾದರ' ವಲ್ಲ, ಅದು ಕಸುಬು ಎಂದು ಪರಿಗಣಿತವಾಗುತ್ತದೆ. ಅದೇ ತನ್ನ 'ಹಕ್ಕಿನ' ಸಾಮಾಜಿಕ ಮುದ್ರೆ ಬಿದ್ದ (ಮದುವೆಯಾದ) ಹೆಣ್ಣೊಬ್ಬಳು 'ಹಕ್ಕಿನ' ಪರಿಧೀಯಚೆ ವ್ಯವಹರಿಸಿದರೆ ಅದು 'ಹಾದರ' ಯಾವುದೇ ರೀತಿಯ ನಿಯಂತ್ರಣಕ್ಕೊಳಪಡದ ಸಹಜತೆಗೆ ತುಡಿವ ಅದಮ್ಯ ಚೇತನವನ್ನು 'ನಿಸರ್ಗ' 'ಪ್ರಕೃತಿ' 'ಮಾಯೆ' ಎಂಬ ಸ್ತ್ರೀ ಸಂಕೇತವನ್ನು ಸೃಷ್ಟಿ ಮಾಡುವುದರೊಂದಿಗೆ ಪುರುಷ ತನ್ನ ಅಸಹಾಯಕತೆಯನ್ನು ಒಪ್ಪಿಕೊಳ್ಳುತ್ತಾನೆ. ಈ ಅಸಹಾಯಕತೆಯೊಂದಿಗೆ ಪ್ರಾರಂಭವಾಗುತ್ತದೆ ಆತನ ದುಗುಡದಯಮ್ಮಾನ ಆತಂಕಗಳ ಸರಣಿ. ಆ ಮೂಲಕ ಚಾಣಾಕ್ಷತನ, ವಂಚನೆ ಕ್ರೌರ್ಯ, ದಮನ ದಹನ ಇತ್ಯಾದಿ ಪ್ರಯತ್ನಗಳು.

(ಹೀಗೆ ಅಪನಂಬಿಕೆಗಳ ಆಧಾರದ ಮೇಲೆ ಮತ್ತು ಶಿಥಲವಾಗುವ ದುರಂತವನ್ನು ಜನಪದ ಸಾಹಿತ್ಯದಲ್ಲಿ ಕಾಣಬಹುದು. ಭಾರತೀಯ ಸಂಸ್ಕೃತಿ ಈ ಪಾತಿವ್ರತ್ಯ ಪರೀಕ್ಷೆಯನ್ನು ನ್ಯಾಯೋಚಿತವೆಂದೇ ಭಾವಿಸಿದಂತಿದೆ. ಪಾತಿವ್ರತ್ಯ ಪರೀಕ್ಷೆಯು ಹೆಣ್ಣಿನ ಪಾಲಿಗೆ ಬರಿ 'ಶೀಲ'ದ ಪರೀಕ್ಷೆಯಾಗುವುದಿಲ್ಲ. ಅದು ಅವಳ ಭವಿಷ್ಯತ್ತಿನ ಪ್ರಶ್ನೆಯೂ ಆಗಿರುತ್ತದೆ. ಈ ಪರೀಕ್ಷೆಯಲ್ಲಿ ಅವಳು ಎದುರಿಸುವ ಮಾನಾಪಮಾನಗಳು, ಹರಲೆ, ತಲ್ಲಣಗಳು ಕೌಟುಂಬಿಕ ಅತಂತ್ರಗಳು, ದೈಹಿಕ, ಮಾನಸಿಕ ಅಸಹನೀಯ ಹಿಂಸೆಗಳ ಕುರಿತಂತೆ ಪುರುಷ ಪ್ರಧಾನ ಸಂಸ್ಕೃತಿ ತಳೆದ ನಿಷ್ಠುರ ನಿರ್ಧಾರ ಇದಾಗಿದೆ.)

ಇತ್ತೀಚೆಗೆ ನಾಲ್ಕು-ಐದು ದಶಕಗಳಲ್ಲಿ ನಡೆಸಿದ ಸಂಶೋಧನೆಯ ಫಲವಾಗಿ ರುಂಡರಹಿತ, ನಗ್ನ ಸ್ತ್ರೀ ವಿಗ್ರಹಗಳು ದೊರೆತಿದ್ದು ಅವುಗಳನ್ನು 'ಲಜ್ಜಾಗೌರಿ' ಯ ವಿಗ್ರಹಗಳೆಂದು

ಹೆಸರಿಸಿದ್ದಾರೆ. ಈ ನಗ್ನ ಶಿರೋಹೀನ ವಿಗ್ರಹಗಳು ಪೂಜೆಗೊಳ್ಳುತ್ತಿವೆ. ಆ ವಿಗ್ರಹದ ಶಿರೋಹಿನತೆಗೆ ಕಾರಣವಾದ ಕಥೇ ಲೇಖನಗಳು ಜಾನಪದ ಹೇಳಿಕೆಗಳು ಇವೆ. ಅವುಗಳಲ್ಲಿ.

೧. ಸಿದ್ದಲಿಮಗಯ್ಯ – ಗ್ರಾಮದೇವತೆಗಳು.

೨. ರಾಮಚಂದ್ರ ಚಿಂತಾಮಣಿ ಢೇರೆ.

೩. ಎಂ.ಎಂ. ಕಲಬುರ್ಗಿ–ಲಜ್ಜಾ ಗೌರಿ (ಲೇಖನ)

ಡಾ.ಎಂ.ಎಂ. ಕಲಬುರ್ಗಿಯವರು ತಮ್ಮ ಲೇಖನದಲ್ಲಿ ಲಜ್ಜಾಗೌರಿ ವಿಗ್ರಹದ ಬಗೆಗೆ ಕೊಟ್ಟಿರುವ ಎರಡು ಜಾನಪದ ಹೇಳಿಕೆಗಳು ಹೀಗಿವೆ:–

೧. ಒಮ್ಮೆ ಶಿವ ಮತ್ತು ಪಾರ್ವತಿ ನಗ್ನ ಜಲಕ್ರಿಡೆಯಾಡುತ್ತಿದ್ದರು, ಆಗ ಭಕ್ತನೊಬ್ಬ ತನ್ನದರ್ಶನಕ್ಕೆ ಬರಲು ಶಿವನು ಓಡಿಹೋಗಿ ದೇವಾಲಯದ ಲಿಂಗದಲ್ಲಿ ಲೀನವಾದನು, ಪಾರ್ವತಿ ಲಜ್ಜೆಯಿಂದ ನೀರಿನಲ್ಲಿ ಅಡಗಿದಳು ಪಾರ್ವತಿಯ ಈ ಲಜ್ಜೆ ಕಾರಣವಾಗಿ ಆಕೆಯನ್ನು 'ಲಚ್ಚಾಗೌರಿ' ಎಂದು ಕರೆಯುತ್ತಾರೆಂದು ದೇವೀಕೋಶ ತಿಳಿಸುತ್ತದೆ.

೨. ಶ್ರೀ ಗಣೇಶ ಶಾಸ್ತ್ರಿ ಲೀಲೆ ಅವರು ಮಹಾಕೂಟದಲ್ಲಿ ಸಂಗ್ರಹಿಸಿದ ಹೇಳಿಕೆ

ಪಾರ್ವತಿಗೆ ತನ್ನ ಕಂಬಳಿಯನ್ನು ಕೊಟ್ಟು ಲೋಕಸಂಚಾರಕ್ಕೆ ಹೋಗಿದ್ದ ಶಿವನು ತಾನೇ ಇಲಿಯಾಗಿ ಬಂದು ಅದನ್ನು ಅಲ್ಲಲ್ಲಿ ಕಡಿದ ಇದರಿಂದ ತಾನು ಗಂಡನ ಕೋಪಕ್ಕೆ ಗುರಿಯಾಗಬೇಕಾಗುವುದೆಂದು ಪಾರ್ವತಿ ನಡುಗಿದಳು ಅಷ್ಟರಲ್ಲಿ ಶಿವ ಸಿಂಪಿಗರೂಪದಲ್ಲಿ ಬರುತ್ತಾನೆ. ಕಂಬಳಿಯನ್ನು ಮೊದಲಿನಂತೆ ಹೊಲಿದು ಕೊಟ್ಟರೆ ಬೇಡಿದುದನ್ನು ಕೊಡುವುದಾಗಿ ಸಿಂಪಿಗನಿಗೆ ಪಾರ್ವತಿ ಮಾತು ಕೊಡುತ್ತಾಳೆ. ಕಂಬಳಿಯನ್ನು ಮೊದಲಿನಂತೆ ಮಾಡಿದ ಸಿಂಪಿಗೆ ಪಾರ್ವತಿಗೆ ಭೋಗ ಸುಖವನ್ನು ಕೇಳಿದ ಮಾತುಕೊಟ್ಟ ತಪ್ಪಿಗಾಗಿ ಪಾರ್ವತಿ ಅನಿವಾರ್ಯವಾಗಿ ಒಪ್ಪಿದಳು. ಸಂಭೋಗ ನಿರತ ಸಿಂಪಿಗ ತನ್ನ ಶಿವರೂಪ ತೋರಿದ ಆಗ ಪಾರ್ವತಿ ಲಜ್ಜೆಯಿಂದ ತಲೆಕೆಳಗೆ ಮಾಡಿದಳು ರುಂಡ ಕತ್ತರಿಸಿ ಬಿದ್ದಿತ್ತು ಇದೇ ಲಜ್ಜಾಗೌರಿ ಈ ಕಥೆ ಲಜ್ಜಾಗೌರಿ ವಿಗ್ರಹ ರುಂಡ ರಹಿತವಾಗಿರುವುದಕ್ಕೆ ನಗ್ನವಾಗಿರುವುದಕ್ಕೆ ಸುಂದರ ಕಾರಣವನ್ನು ಒದಗಿಸುತ್ತಿದೆ. ಶಂಕರ ದಾಸಿಮಯ್ಯನ ಪುರಾಣ ಮತ್ತು ಜನಪದ ಸಾಹಿತ್ಯಗಳಲ್ಲಿಯೂ ಕಂಡು ಬರುತ್ತದೆ.[೧೧] (ಉದಾ: ಕರ್ನಾಟಕ, ಆಂಧ್ರ, ಮಹಾರಾಷ್ಟ್ರಗಳಲ್ಲಿ ಉತ್ಖನನ ಕಾಲಕ್ಕೆ ಕೆಲವು ವಿಚಿತ್ರ ಸ್ತ್ರೀ ವಿಗ್ರಹಗಳು ಕಂಡು ಬಂದಿದೆ. ಶಿರೋಹಿನವಾಗಿದು ಕೈಯಲ್ಲಿ ಕಮಲ ಹಿಡಿದಂತಹವು ಕೇವಲ ಧಂಡವಿದ್ದು, ಯೋನಿ ಹಾಗು ಸ್ತನ ಪ್ರದೇಶಗಳನ್ನು ಸ್ಪುಟವಾಗಿ ತೋರಿಸುವಂಥದು, ಜೊತೆಗೆ ಸ್ತ್ರೀಯ ಸಂಭೋಗಾವಸ್ಥೆಯ ಭಂಗಿಯನ್ನು ಸೂಚಿಸುವಂತೆ ಕಾಲು ತೆರೆದು

ಮಡಚಿ ಮಲಗಿದಂಥ ಅಥವಾ ಕುಳಿತಂಥ ವಿಗ್ರಹಗಳಿವು. ಬಿಜಾಪುರ ಜಿಲ್ಲೆಯ ಮಹಾಕೂಟ, ಬದಾಮಿ, ಜಾಲಿಹಾಳ, ಸಿದ್ದನಕಲ್ಲು ಬೀಳಗಿ, ನಾಗರಾಳಗಳಲ್ಲಿ, ಗುಲಬರ್ಗಾದ ಮಣ್ಣೂರು, ಸನ್ನತಿಗಳಲ್ಲಿ... ಇತ್ಯಾಧಿ ಸ್ಥಳಗಳಲ್ಲಿ ಹೊರೆತಿವೆ. (ಡಾ. ಜೋತ್ಸ್ನಾ ಕಾಮತಾ; ಮಹಿಳೆ ಒಂದು ಅಧ್ಯಯನ ಪುಟ ೯) ಡಾ॥ ಜೋತ್ಸ್ನಾ ಕಾಮತಾ; ಮಹಿಳೆ ಒಂದು ಅಧ್ಯಯನ ಪುರ್ಟ.)

ಇಲ್ಲಿ ಎರಡನೆಯ ಕಥೇಯೇ ನಂಬಲರ್ಹವಾಗಿದೆ. ಆದರೆ ಈ ಕಥೆಯಲ್ಲಿ ಲೋಕಸಂಚಾಕ್ಕೆ ಹೋಗಿದ್ದ ಶಿವ ಇಲಿಯಾಗಿ ಬಂದು ಕಂಬಳಿಯನ್ನು ಕಡಿಯುವುದು ಸಿಂಪಿಗನ ವೇಷಧರಿಸಿ ಬಂದು ಅದನ್ನು ಮೊದಲಿನಂತೆ ಮಾಡಿದುದಕ್ಕೆ ಕಾರಣವೇನು ಎಂಬುದಕ್ಕೆ ವಿವರಣೆ ಅಥವಾ ಉತ್ತರ ದೊರೆಯುವುದಿಲ್ಲ ಆದರೆ ಮೇಲೆ ಕೊಟ್ಟಿರುವ ಮೂರು ಜನಪದ ಹಾಡುಗಳಲ್ಲಿ ಕಾರಣ–ಕಾರ್ಯ–ಪರಿಣಾಮ ಎಲ್ಲದರ ಬಗೆಗೆ ವಿವರಣೆ ಸಿಗುತ್ತದೆ. ಶಿವ ಗವರಿಯರ ಮಧ್ಯೆ 'ಹಾದರ'ದ ಪ್ರಸ್ತಾಪವಾಗಿಅದರ ಪರೀಕ್ಷೆ ಪರಿಣಾಮದ ಕಥನವೇ ಮುಖ್ಯ ವಿಷಯವಾಗಿದೆ.

ಹಾಡು ನಂ॥ ರಲ್ಲಿ ಬಂದಿರುವ
'ಹಾದರನಂಬೊದು ಹಾಲಕಿನ್ನ ರುಚಿಯೆ
ಬ್ಯಾಡ ಶ್ರೀ ಗವರಿ ಬಂಡಾಟ॥
ಬಂಡಾಟನಾಗಲಿ ಬೇಕು ದಂಡನೆರಿಯಲಿಬೇಕು
ರಾಜಬೀದಿಯಾಗ ತಲಿಯ ಹೊಡಿಯಲಿಬೇಕು'॥

ಎನ್ನುವ ಗೌರಿಯ ಮತು ಹಾದರ ಅತ್ಯಂತ ಕೀಳಾಗಿದ್ದು, ಹಾಗೆ ಸಿಕ್ಕಿ ಬಿದ್ದ ಹಾದರಗತ್ತಿಗೆ ತಲೆ ತೆಗೆಯುವ, ಹೊಡೆಯುವ ಅಧಿಕಾರ ಸಮಾಜಕ್ಕಿರುವುದನ್ನು ಸೂಚಿಸುತ್ತದೆ. ಹಾದರ ಕುರಿತಾಗಿರುವ ಅತ್ಯಂತ ನಿಷ್ಕೃಷ್ಟ ಕೀಳುಪ್ರಜ್ಞೆ ಪಾಪ–ತಪ್ಪಿತಸ್ಥ ಪ್ರಜ್ಞೆಯನ್ನು ಬಿತ್ತರಿಸುತ್ತದೆ. ಆದರೆ ಮುಂದೆ ನನ್ನ ಜೀವಮಾನದಲ್ಲೇ ಅದು ಆಕಸ್ಮಿಕವಾಗಿ ನಡೆದು ತಾನು ಪತಿಯ ಕೈಯಲ್ಲಿ ಸಿಕ್ಕಿಬಿದ್ದಾಗ ನಾಚಿ ನೀರಾಗಿ ಕರಗಿದ್ದುದರ ಪ್ರತೀಕವೇ ಶಿರ ರಹಿತ, ಸಂಭೋಗ ಕ್ರಿಡೆಯ ಬೆತ್ತಲೆ ವಿಗ್ರಹಗಳೆಂದು ನಿರ್ಧರಿಸಿರುವುದು ಸೂಕ್ತವಾಗಿದೆ.

ಇಲ್ಲಿ ಕೊಟ್ಟಿರುವ ಮೂರು ಜನಪದ ಹಾಡುಗಳನ್ನು ಸ್ತ್ರೀ ಆತ್ಮವಲೋಕನ ಹಿನ್ನೆಲೆಯಲ್ಲಿ ನೋಡುವ ವಿಮರ್ಶಿಸುವ ಅವಶ್ಯಕತೆಯಿದೆ ಅನಿಸುತ್ತದೆ. 'ನಾಚಿ ಭೂಮ್ಯಾಕ ಇಳದಾಳ' ಎನ್ನುವಲ್ಲಿ ಸ್ತ್ರೀಗೆ ಬೇಕಾಗಿ ಅಥವಾ ಬೇಡವಾಗಿ ಪರ–ಪುರುಷ ನನ್ನು ಕೂಡುವ ಪ್ರಸಂಗ ಬರುತ್ತದೆ. ತಾನೇಕೆ ಇಂತಹ ಪ್ರಸಂಗಕ್ಕೆ ಅಹುತಿಯಾಗುವ ಅನಿವಾರ್ಯತೆ ಉಂಟಾಯಿತು ಎಂದು ಹೇಳುವ ಸ್ಥಿತಿಯಲ್ಲಿ ಅವಳಿರುವುದಿಲ್ಲ. ಕೇಳುವ ಸ್ಥಿತಿಯಲ್ಲಿ ಗಂಡನಿರುವುದಿಲ್ಲ. ಇಂತಹ ಒತ್ತಡದ ಸಂದಿಗ್ಧ ಸನ್ನಿವೇಶದಲ್ಲಿರುವ ಹೆಣ್ಣಿಗೆ ಮತ್ತೊಂದು ಅವಕಾಶವಿಲ್ಲದಂತಾಗುವುದೇ ಅನಿವಾರ್ಯತೆ ಪಠ್ಯಗಳಂತೆ ಗೌರಿಗೆ ಇಲ್ಲಿ ಎರಡು ಆಯ್ಕೆಗಳು ಇದ್ದವು;

೧. ಶಿವನಿಗೆ ಹರಿದ ಕೌದಿಯನ್ನು (ವಸ್ತ್ರ, ಹೊದಿಕೆ) ಕೊಟ್ಟು ಇಲ್ಲಿ ತಿಂದು ಹಾಕಿದ ಸಂಗತಿ ತಿಳಿಸುವುದು

೨. ಹೊದಿಕೆ ಸರಿಪಡಿಸಿದ ಸಿಂಪಿಗನಿಗೆ ಕೊಟ್ಟ ಮಾತಿನಂತೆ ಮೈಯೊಪ್ಪಿಸುವುದು.

ಈ ಎರಡರಲ್ಲಿ ಮೊದಲಿನೆಯದಕ್ಕಿಂತ ಎರಡೆಯದಕ್ಕೆ ಒಪ್ಪಿಕೊಂಡದ್ದು ಏಕೆಂದು ಯೋಚಿಸಿದಾಗ ಮೋದಲನೆಯ ಆಯ್ಕೆ ಬಹುಶಃ ಭೀಕರವೆಂದು ಕಂಡಿರಬಹುದಾಗಿದೆ. ಶಿವನ ರೌದ್ರಾವತಾರವನ್ನು ನೆನಪಿಸಿಕೊಂಡ ಗೌರಿ (ಈ ಅಂಶ ಹಾಡುಗಳಲ್ಲಿ ಗೌಣವಾಗಿದೆ) ಸಿಂಪಿಗನಿಗೆ ತನ್ನನ್ನು ಒಪ್ಪಿಸಿಕೊಳ್ಳಲು, ಭೋಗ ನೀಡಲು ಒಪ್ಪಿಕೊಂಡಿದ್ದಾಳೆ. ಹೀಗೆ ಭೋಗಾಸಕ್ತಿಗೆ ಬಲಿಯಾಗುವ ಹೆಣ್ಣಿನ ಪ್ರತಿನಿಧಿಯಾಗಿ ಶ್ರೀ ಗವರಿ ಜನಪದರ ಬಾಯಲ್ಲಿ ಹಾದರ ಹೆಣ್ಣಾಗಿ, ಶಿಲ್ಪಗಳಲ್ಲಿ ಮೂರ್ತಿಯಾಗಿ ರೂಪುಗೊಂಡಿದ್ದಾಳೆ. ಪ್ರಜಾರ್ಹ ದೇವತೆಯಾಗಿ ಇತಿಹಾಸದ ಪುಟಗಳಲ್ಲಿ ದಾಖಲೆಯಾಗಿದ್ದಾಳೆ.

ಗಂಗಿ–ಗೌರಿಯರ ವಾದ –ಸಂವಾದ

ಗಂಗಿ: ಒಮ್ಮನ ಜೋಳ ಬೀಸೂತ ಬಾಲಿ ನೀನು
ಇಷ್ಟೊತ್ತ ಎಲ್ಲಿಗ್ಹೋಗಿದೆ ?
ಬಾಲಿ ನೀನು ಇಷ್ಟೊತ್ತ ಎಲ್ಲಿಗ್ಹೋಗಿದೆ ?

ಗೌರಿ: ಕಿಟಕೀಟಿ ಬ್ಯಾಡ ಗಂಗಾ
ಅಡಿಮ್ಯಾಲಿನ ಗೋಳಿಪಲ್ಯ ಹಾಯಲ್ಹೋಗ್ಯಾದೇ
ಕಿಟಕೀಟಿ ಬ್ಯಾಡ ಗಂಗಾ
ಅಡಿಮ್ಯಾಲಿನ ಗೋಳಿಪಲ್ಯ ಹಾಯಲ್ಹೋಗ್ಯಾದೇ

ಗಂಗಿ : ಗೋಳಿಪಲ್ಯ ಅಯಿವಲ್ಲ ಬಾಲಿ ನಿನ್ನ ಬಳಿಗಿದ್ದವರ್ಯಾರೆ?
ಬಾಲಿ ನಿನ್ನ ಬಳಿಗಿದ್ದವರ್ಯಾರೆ?

ಗೌರಿ: ಕಿಟಕೀಟಿ ಭ್ಯಾಡ ಗಂಗಾ
ಅಡಿಮ್ಯಾಲ ಬೆಳ್ಳಂಕಿ ಹಿಂಡು ಹಾರ್ಯಾವೆ
ಕಿಟಕೀಟಿ ಬ್ಯಾಡ ಗಂಗಾ
ಅಡಿಮ್ಯಾಲ ಬೆಳ್ಳಂಕಿ ಹಿಂಡು ಹಾರ್ಯಾವೆ.

ಗಂಗಿ: ಹೂವಾನಿಲ್ಲ ಕಾಯಿನಿಲ್ಲ ಬಾಲಿ ನಿನ್ನ
ತುರುಬ್ಯಾಕ ಘಮ ಘಮೇ ?
ಬಾಲಿ ನಿನ್ನ ತುರುಬ್ಯಾಕ ಘಮ ಘಮೇ

ಗೌರಿ: ಕಿಟಕೀಟಿ ಬ್ಯಾಡ ಗಂಗಾ
ಕ್ಯಾದಿಗಿ ಬನದಲಿ ಸುಳ್ದು ಬಂದಿದಾ
ಕಿಟಕೀಟಿ ಬ್ಯಾಡ ಗಂಗಾ
ಕಾದಿಗಿ ಬನಕ್ಹೋಗಿ ತಕ್ಕಿಬಿದ್ದಿದಾ

ಗಂಗಿ: ಎಲಿನಿಲ್ಲ ಅಡಕಿನಿಲ್ಲ ಬಾಲಿ ನಿನ್ನ
ತುಟಿಯಾಕ ರಂಗುಲಾಲೆ ?
ಬಾಲಿ ನಿನ್ನ ತುಟಿಯಾಕ ರಂಗುಲಾಲೆ ?

ಗೌರಿ: ಕಿಟಕೀಟಿ ಬ್ಯಾಡ ಗಂಗಾ
ನೇರೆಮನಿ ಕಂದನೆತ್ತಿ ಮುದ್ದ ನಾಡಿದ
ಕಿಟಕೀಟಿ ಬ್ಯಾಡ ಗಂಗಾ
ನೆರೆಮನಿ ಕಂದನೆತ್ತಿ ಮುದ್ದನಾಡಿದ

ಗಂಗಿ: ಫಾಳಿನಿಲ್ಲ ಧೂಳಿನಿಲ್ಲ ಬಾಲಿ ನಿನ್ನ
ನೀಲಿಯಾಕ ಡೊಂಕುಲಾವೆ?
ಬಾಲಿ ನಿನ್ನ ಸೀರಿಯಾಕ ಡೋಂಕುಲಾವೆ ?

ಗೌರಿ: ಕಿಟಕೀಟಿ ಬ್ಯಾಡ ಗಂಗಾ
ಸಿಗರೆನ ಬನದಾಗ ಸಿಕ್ಕಿ ಬಿದ್ದಿದಾ
ಕಿಟಕೀಟಿ ಬ್ಯಾಡ ಗಂಗಾ
ಮುಳ್ಳಿನ ಕಂಟಿದಾಗ ತಿರುಗಿ ಬಂದಿದಾ

ಗಂಗಿ: ಹೂವಾನಿಲ್ಲ ಕಾಯಿನಿಲ್ಲ ಬಾಲಿ ನಿನ್ನ
ತುರುಬ್ಯಾಕ ಫಮ ಫೆಮೇ?
ಬಾಲಿ ನಿನ್ನ ತುರುಬ್ಯಾಕ ಫಮ ಫಮೇ

ಗೌರಿ ಕಿಟಕೀಟಿ ಭ್ಯಾಡ ಗಂಗಾ
ಕ್ಯಾದಿಗಿ ಬನದಲ್ಲಿ ಸುಳ್ದು ಬಂದಿದಾ
ಕಿಟಕೀಟಿ ಬ್ಯಾಡ ಗಂಗಾ
ಕಾದಿಗಿ ಬನಕ್ಹೋಗಿ ತಕ್ಕಿಬಿದ್ದಿದಾ

ಗಂಗಿ: ಎಲಿನಿಲ್ಲ ಅಡಕಿನಿಲ್ಲ ಬಾಲಿ ನಿನ್ನ
ತುಡಿಯಾಕ ರಂಗುಲಾಲೆ?
ಬಾಲಿ ನಿನ್ನ ತುಟಿಯಾಕ ರಂಗುಲಾಲೆ ?

ಗೌರಿ: ಕಿಟಕೀಟಿ ಬ್ಯಾಡ ಗಂಗಾ
ನೆರೆಮನಿ ಕಂದನೆತ್ತಿ ಮುದ್ದನಾಡಿದ
ಕಿಟಕೀಟಿ ಬ್ಯಾಡ ಗಂಗಾ
ನೆರೆಮನಿ ಕಂದನೆತ್ತಿ ಮುದ್ದನಾಡಿದ

ಗಂಗಿ: ಫಾಳಿನಿಲ್ಲ ಧೂಳಿನೆತ್ತಿ ಮುದ್ದನಡಿದ
ನೀಲಿಯಾಕ ಡೊಂಕುಲವೆ ?
ಬಾಲಿ ನಿನ್ನ ಸೀರಿಯಾಕ ಡೊಂಕುಲಾವೆ?

ಗೌರಿ: ಕಿಟಕೀಟಿ ಭ್ಯಾಡ ಗಂಗಾ
ಸಿಗರೆನ ಬನದಾಗ ಸಿಕ್ಕಿ ಬಿದ್ದಿದಾ
ಕಿಟಕೀಟಿ ಭ್ಯಾಡ ಗಂಗಾ
ಮುಳ್ಳಿನ ಕಂಟಿದಾಗ ತಿರುಗಿ ಬಂದಿದಾ

ಗಂಗಿ – ಗೌರಿಯರ ಜಗಳ

ಹಳಿಯದೊಂದು ಬಿಳಿಯದೊಂದು
ನಮ್ಮ ಗೌರಿಗಿ ಬಿಳಿ ಮುತ್ತಿನ ಹಸಿಯ ಹೊಯಿದೆ
ಹಳಿಯ ದೊಂದು ಬಿಳಿಯದೊಂದು
ನಮ್ಮ ಗೌರಿಗಿ ಬಿಳಿ ಮುತ್ತಿನ ಹಸಿಯ ಹೊಯಿದೆ

ಬಿಳಿಯ ಪಾಲಕಿದಾಗ ಮರೆದು ಬಂದಾಕಿನಂತ
ಮಿತ್ರಿ ನೀ ಬಾರೆ ಧೀರೆ
ಬಿಳಿಯ ಪಾಲಕಿದಾಗ ಮೆರೆದು ಬಂದಾಕಿನಂತೆ
ಮಿತ್ರಿ ನೀ ಬಾರೆ ಧೀರೆ

ಕೆಂಪದೊಂದು ಹಸುರದೊಂದು
ನಮ್ಮ ಗೌರಿಗಿ ಹಸಿಮುತ್ತಿನ್ಹಸಿಯ ಹೊಯಿದೆ
ಕೆಂಪದೊಂದು ಹಸುರದೊಂದು
ನಮ್ಮ ಗೌರಿಗಿ ಹಸಿಮುತ್ತಿನ್ಹಸಿಯ ಹೊಯಿದೆ

ಕೆಂಪ ಪಾಲಕಿದಾಗ ಮೆರೆದು ಬಂದಾಕಿನಂತೆ
ಹರದಿ ನೀ ಬಾರೆ ಧೀರೆ
ಕೆಂಪ ಪಾಲಕಿದಾಗ ಮೆರೆದು ಬಂದಾಕಿನಂತೆ
ಹರದಿ ನೀ ಬಾರೆ ಧೀರೆ

048850

ಹಸುರದೊಂದು ಕುಸುರದೊಂದು
ನಮ್ಮ ಗೌರಿಗಿ ಖುಸಿಮುತ್ತಿನ ಹಸಿಯ ಹೊಯಿದೆ
ಹಸರುದೊಂದು ಕುಸುರದೊಂದು
ನಮ್ಮ ಗೌರಿಗಿ ಖುಷಿಮುತ್ತಿನ ಹಸಿಯ ಹೊಯಿದೆ.

ಹಸುರ ಪಾಲಕಿದಾಗ ಮೆರೆದು ಬಂದಾಕಿನಂತ
ಮಿತ್ರಿ ನೀ ಬಾರೆ ಧೀರೆ
ಹಸುರ ಪಾಲಕಿದಾಗ ಮೆರೆದು ಬಂದಾಕಿನಂತ
ಮಿತ್ರಿ ನೀ ಬಾರೆ ಧೀರೆ

ಹೂಗಾರ ಮನಿದಾಗ ಅವರಿಬ್ಬರ ಝಗಡ
ಹೂವಾ ಭಾರುಸಿದ್ಹಂಗೇ
ಹೂಗಾರ ಮನಿದಾಗ ಅವರಿಬ್ಬರ ಝಗಡ
ಹೂವಾ ಭಾರುಸಿದ್ಹಂಗೇ

ನಾರೇರಿಬ್ಬರ ಝಗಡ ಕೇಳಲ್ಲ ನಮ್ಮ ಶಿವನು
ಮಂಚನಲ್ಲಾಡಿ ನಕ್ಕ
ನಾರೇರಿಬ್ಬರ ಝಗಡ ಕೇಳಲ್ಲ ನಮ್ಮ ಶಿವನು
ಮಂಚನಲ್ಲಾಡಿ ನಕ್ಕ

ಕಂಚುಗಾರ ಮನಿದಾಗ ಅವರಿಬ್ಬರ ಝಗಡ
ಕೆಂಚ ಭಾರುಸಿದ್ಹಗೇ
ಕಂಚುಗಾರ ಮನಿದಾಗ ಅವರಿಬ್ಬರ ಝಗಡ
ಕೆಂಚ ಭಾರುಸಿದ್ಹಗೇ

ಕಂಚೇರಿಬ್ಬರ ಝಗಡ ಕೇಳಲ್ಲ ನಮ್ಮ ಶಿವನು
ಮಂಚನಲ್ಲಾಡಿ ನಕ್ಕ
ಕಂಚೇರಿಬ್ಬರ ಝಗಡ ಕೇಳಲ್ಲ ನಮ್ಮ ಶಿವನು
ಮಂಚನಲ್ಲಾಡಿ ನಕ್ಕ

ವಕ್ತಾರರು: ನಿರ್ಮಲಾ ಅರ್ಜುನಪ್ಪಾ ಉಡುಮನಳ್ಳಿ ಸಾ॥ ರಾಜಗೀರಾ ತಾ॥ ಜಿ॥ ಬೀದರ.

ಸೀಗಿ–ಗೌರಿ ಹಾಡುಗಳಲ್ಲಿ ಗಿಳಿ ಸಂಕೇತ

ಶಿಷ್ಟಕಾವ್ಯ, ಕಥೆಗಳಲ್ಲಿ ಸಂದೇಶವಾಗಕವಾಗಿ, ಅಂಚೆಯಕಾರ್ಯ ನಿರ್ವಹಣೆಯಲ್ಲಿ 'ಪಾರಿವಾಳ'ದ ಸಂಕೇತ ಬಳಕೆಯಾಗಿರುವುದನ್ನು ಕಾಣುತ್ತೇವೆ. ಅದೇ ಕಾರ್ಯಕ್ಕೆ ಜನಪದರು ಗಿಳಿಯನ್ನು ಸಾಂಕೇತಿಕವಾಗಿ ಇಟ್ಟು ಕೊಂಡಿದ್ದಾರೆ. ಗಿಣಿ/ಗಿಳಿ ಮಾತನಾಡುವ ಸಾಮಾರ್ಥ್ಯವುಗಳದ್ದು ಕಲಿಸಿದಂತೆ–ಕಲಿಯುವುದು ಹೀಗೆ ಅನುಕರಣ ಮಾಡುವುದು ಗಿಳಿಯ ಜಾಯಮಾನ, ಅದನ್ನುಬಲ್ಲ ಜನಪದ ಕವಯಿತ್ರಿಯರು ತಮ್ಮ ಭಾವನೆಗಳನ್ನು ಮಾತಿನ ಮೂಲಕ ಮತ್ತೊಬ್ಬರಿಗೆ ಮುಟ್ಟಿಸಲು ಗಿಳಿಯನ್ನು ದೂತ/ಸಖನಂತೆ ಬಳಸಿಕೊಂಡಿದ್ದಾರೆ. ಉದಾ:–

೧. 'ಗಂಗೆ ಮಾಶಿದನು ನಿಂದು ಮಾತಾಡಿದಾಗ
ಕಂಡಾವು ಎರಡು ಗಿಳಿಗಳು । ಕಂಡ್ಕೊಂಡು
ಅಕ್ಕ ಗೌರಿಗೆ ಅರುವಿದೊ' ॥

೨. ಶಿವನ ಜಡೆಯಲ್ಲಿ ಗಂಗೆ ಬಂದುದನ್ನು ನೋಡಿದ
ಗಿಳಿಯು ಗೌರಿಗೆ ಸುದ್ದಿ ತಿಲಿಸುತ್ತದೆ.
'ಜಡೆಯೊಳಗೆ ಹೋಗುವುದು ಗಿಳಿರಾಯ ಕಂಡಾನ
ಹೋಗಿ ಹೇಳ್ಯಾನ ಗೌರವ್ವಗ ಕೋಲ'॥

೩. "ನಿಮ್ಮಕ್ಕಗ ಶರಣೆನ್ನ ಗಂಗೆ" ಹಾಡಿನಲ್ಲಿ
ಏಳೇಳ ಗೌರವ್ವ ಎಷ್ಟೋತ್ತು ಮಲಗಿದಿ
ಗಿಳಿರಾಜ ಬಂದೀನಿ ಶಿವ ನಿನಮ್ಯಾಲ ಸವತಿಯ ಕೋಲ॥

೪. "ಶಿವಗ್ಯಾನಿಟ್ಟ ಗಿಳಿಯ ಸಲಹೆಂದ" ಹಾಡಿನಲ್ಲಿ
'ಗಂಗಮ್ಮ ಶಿವರಾಯ ಏನೇನ ಮಾತಾಡತಾರ
ಕೆಳಿ ಬಾ ಎನ್ನ ಗಿಳಿರಾಯ ಕೋಲೆನ್ನ ಕೋಲ ॥
ಅವರ ಮಾತಾಡ ಸುದ್ದಿ ನೀ ಏನ ಬಲ್ಲಿ
ಕಿವಿಯಮ್ಯಾಲ ಬರಲಾರದ ಮಾತ ಬರತಾವ ಕೋಲೆನ್ನ ಕೋಲೆ॥

ವಿಶೇಷವಾಗಿ ಗಂಗೆ-ಗೌರಿಯರ ಕದನದ ಹಾಡುಗಳಲ್ಲಿ 'ಗಿಳಿ'ಯ ಬಳಕೆಯಾಗಿರುವುದು ಕಂಡುಬರುತ್ತದೆ. ಮೌಖಿಕ ಪರಂಪರೆಯ ಹಾಡುಗಾರರಿಗೆ 'ಗಿಳಿ' ವರದಾನವಾಗಿ ಪರಿಣಮಿಸಿದೆ.

ಸೀಗಿ-ಗೌರಿ ಹಾಡುಗಳಲ್ಲಿ ಬಸವ ಸ್ಮರಣೆ.

ಕೃಷಿ-ಮಣ್ಣಿನ ಸುತ್ತಿನ ಸಂಸ್ಕೃತಿಯನ್ನು ಬಿಂಬಿಸುತ್ತಿರುವ ಎಲ್ಲಾ ಬಗೆಯ ಹಾಡುಗಳಲ್ಲಿ ಬಸವಣ್ಣನಿಗೆ ಆದ್ಯತೆ. ಪ್ರಾಧಾನ್ಯ ಆದರೆ ಇಲ್ಲಿ ಪೂಜೆಗೊಳ್ಳುತ್ತಿರುವವನು ಹನ್ನೆರಡನೆಯ ಶತಮಾನದ ಕ್ರಾಂತಿಕಾರಿ ಬಸವಣ್ಣನಲ್ಲ. ಉತ್ತುಮ-ಬಿತ್ತುವ ದುಡಿಮೆಯಲ್ಲಿ ಒಕ್ಕಲಿಗನ ಬಲಗೈ ಬಂಟ; ಬೆನ್ನಲುಬು. ಈತನನ್ನು ಹೋರಿ-ಎತ್ತು-ನಂದಿ-ಬಸವ-ಬಸವಣ್ಣ ಇತ್ಯಾದಿ ಹೆಸರಿನಲ್ಲಿ ಸಂಬೋಧಿಸುತ್ತಾರೆ. ಒಕ್ಕಲಿಗನ ಪಾಲಿಗೆ ಆತ ಆರಾಧ್ಯದೈವ ಜೀವಂತ ದೇವರು ಆದಕಾರಣ ಅವನನ್ನು ಹುತ್ತಿನ ಮಣ್ಣಿನಿಂದ ತಯಾರಿಸಿ ಪೂಜಿಸಿದ ಮಾತ್ರಕ್ಕೆ ಉತ್ತರ ಕರ್ನಾಟಕದಲ್ಲಿ (ಮಣ್ಣೆತ್ತಿನ ಅಮವಾಸ್ಯೆಯೆಂದು ಹೋರಿ-ಎತ್ತು ಅನ್ನಿಸಿಕೊಳ್ಳುವುದಿಲ್ಲ. ಹಾಗೆ ಹೇಳಲು ಬೇಡಿರೆಂದು ಕೇಳಿಕೊಳ್ಳುತ್ತಿರುವ ಕೃಷಿಕ ಮಹಿಳೆಯು ಆ ಬಸವನ ಸರ್ವಾಂಗದಲ್ಲಿ ಶಿವನಿದ್ದಾನೆ. ಅವನನ್ನು ನೆನೆದರೆ ಕೈಲಾಸ ಪ್ರಾಪ್ತವಾಗುವುದು. ಮುಕ್ತಿ ದೊರೆಯುವುದೆಂದು ಮನದುಂಬಿ ಭಕ್ತಿಯಿಂದ ಹಡಿದ್ದಾಳೆ.

"ಹುತ್ತಿನ ಮಣ್ಣನು ತಂದು ಎತ್ತಿ ಬಸವನ ಮಾಡಿ
ಎತ್ತೆಂಬರೇನ ಬಸವಗ ಕೋಲ ॥

ಎತ್ತು ಅಂಬುರೇನಾ ಬಸವಾ ನಮ್ಮ ಬಸವನ
ನಾಲೀಗಿ ಮ್ಯಾಲ ಐತಿ ಕೈಲಾಸ ಕೋಲ॥

ಹಾದಿ ಮಣ್ಣನು ತಂದು ಬೀದಿ ಬಸವನ ಮಾಡಿ
ಹೋರೆಂಬುರೇನು ಬಸವಗ ಕೋಲ ॥

ಹೋರಿ ಅಂಬುರೇನ ಬಸವಾ ನಮ್ಮ ಬಸವನ
ಕೊಂಬಿನ ಮ್ಯಾಲ ಐತಿ ಕೈಲಾಸ ಕೋಲ ॥

ಅದರಂತೆ ಈ ಬಸವನಿಗೆ ವಿಶೇಷ ಸಂದರ್ಭಗಳಲ್ಲಿ ಕಾಲ್ಗಟಗ, ಗೆಜ್ಜೆಗಳನ್ನು ತೊಡಿಸಿ, ಆ ಆಂದ-ಚೆಂದವನ ಕುರಿತು ಬಂದಿರುವ ಅತ್ಯಮತ ಜನಪ್ರಿಯ ಹಾಡಿದು.

ಒಂದ ಸುತ್ತಿನ ಕ್ವಾಟಿ / ಅದರೊಳು ಹೊಂದಿ ಕುಂತಾನ ಬಸವಾ
ಎರಡು ಸುತ್ತಿನ ಕ್ವಾಟಿ /ಅದರೊಳು ಸೊಡರು ತೂಗುವ ಬಸವ
ಮೂರು ಸುತ್ತಿನ ಕ್ವಾಟಿ / ಅದರೋಳು ಮೂರ್ತಗೊಂಡನ ಬಸವ

ನಾಲ್ಕು ಸುತ್ತಿನ ಕ್ವಾಟಿ / ಅದರೊಳು ನ್ಯಾಯಮೂರ್ತಿಯು ಬಸವ
ಐದು ಸುತ್ತಿನ ಕ್ವಾಟಿ / ಅದರೊಳು ಐಕ್ಯಮೂರ್ತಿಯು ಬಸವ
ಆರು ಸುತ್ತಿನ ಕ್ವಾಟಿ / ಅದರೋಳು ಅರಳಿ ನಿಂತಾನ ಬಸವ
ಏಳು ಸುತ್ತಿನ ಕ್ವಾಟಿ / ಅದರೋಳು ಜಗವನಾಳುವ ಬಸವ
ಎಂಟು ಸುತ್ತಿನ ಕ್ವಾಟಿ / ಶಿವನಿಗೆ ಕಂಟಲೆತ್ತೇನೊ ಬಸವ
ಒಂಭತ್ತು ಸುತ್ತಿನ ಕ್ವಾಟಿ / ಅದರೊಳು ತುಂಬಿ ಬಂದಾನೋ ಬಸವ
ಹತ್ತು ಸುತ್ತಿನ ಕ್ವಾಟಿ / ಅದರೋಳು ಸುತ್ತ ನೋಡಲು ಬಸವ
ಬಸವಕ್ಕ ಬಸವೆನ್ನಿರೆ/ ಬಸವನ ಪಾದಕ ಶರಣೆನ್ನಿರೆ.

ಬಸವಣ್ಣ ನಮ್ಮ ಗ್ರಾಮೀಣ ಮಹಿಳೆಯರ ಬದುಕಿನಲ್ಲಿ ಹಾಸು-ಹೊಕ್ಕಿದ್ದಾನೆ. ಬಸವನಿಗೆ ಇಲಿ ಕೋಟೆಯನ್ನು ಕಟ್ಟಿ ಹಂತ-ಹಂತಗಳಲ್ಲಿ ಬಸವನ ಮಹಾರೂಪವನ್ನು ಕಂಡಿದ್ದಾರೆ. ಅನುಭವಿಸಿದ್ದಾರೆ. ಅದರಂತೆ ಜನಪದ ಹೆಣ್ಣು ಮಕ್ಕಳು ಬಸವನ ವಿಕಾಸಶೀಲ ತತ್ವವನ್ನು ವರ್ಣಿಸಿರುವ ಹಲವಾರು ರೀತಿಗಳಲ್ಲಿ ಇದು ಒಂದಾಗಿದೆ. ಒಂದೊಂದು ಕೋಟೆ (ಕ್ವಾಟಿ) ಯಲ್ಲಿಯೂ ಚೈತನ್ಯಸ್ವರೂಪಿಯಾದ ಬಸವನ ಅರಳುತ್ತ ಹೋಗುವ ವಿಕಸನ ಶೀಲ ಭವ್ಯ ರೂಪವನ್ನು ನೋಡುತ್ತೇನೆ.

ಎರಡು ಸುತ್ತಿನ ಕೋಟೆಯಲ್ಲಿ 'ಸೊಡರು ತೂಗುವ ಬಸವ (ಜ್ಞಾನರೂಪಿಬಸವ) ನನ್ನು ತೋರಿದರೆ ನಾಲ್ಕು ಸುತ್ತಿನ ಕೋಟೆಯಲ್ಲಿ ನ್ಯಾಯಮೂರ್ತಿಯಾಗಿದ್ದಾನೆ. ಎಂಟು ಸುತ್ತಿನ ಕೋಟೆಯಲ್ಲಿ ಶಿವನಿಗೆ ಕಂಟಲೆತ್ತನಾಗಿದ್ದಾನೆ. ಶಿವನ ನಂದಿವಾಹನನಾಗಿದ್ದಾನೆ. ಹತ್ತು ಸುತ್ತಿನ ಕೋಟೆಯಲ್ಲಿ ಎತ್ತನೋಡಿದತ್ತ ಅವನೇ ಆಗಿದ್ದಾನೆ. ಜೀವಾತ್ಮ- ಪರಮಾತ್ಮರು ಏಕಾತ್ಮರಾದ ಬಯಲಿನಲ್ಲಿ ಬಯಲಾಗುವ ಚೈತನ್ಯರೂಪವನ್ನು ನೋಡುತ್ತೇವೆ. ಬಸವ ಎಲ್ಲವನ್ನು ಮೀರಿ ನಿಂತವನು ಅವನದು ಏನಿದ್ದರೂ ವಿಕಾಸಶೀಲ ತತ್ವ ಅದು ಎಲ್ಲಿಯೂ ನಿಲ್ಲುವುದಿಲ್ಲ. ಬೆಳೆಯುತ್ತಲೇ ಹೋಗುವಂತಹದ್ದು. ಒಂದು ಸುತ್ತಿನ ಕ್ವಾಟಿಯಿಂದ ಹತ್ತು-ಇಪ್ಪತ್ತು ಹೀಗೆಯೇ ಅಸಂಖ್ಯ-ಅಗಣಿತ ಕ್ವಾಟಿಗಳನ್ನು ಮೀರಿದ ಬೆಳವಣಿಗೆ ಅವನದು ಎನ್ನುವುದನ್ನು ಜನಪದರು ಹೀಗೆ ಹಾಡಿದ್ದಾರೆ. ಕೊಂಡಾಡಿದ್ದಾರೆ. ಆನಪದರು ಮೇಲೆ ಹೇಳಿದ ಬಸವನ ವಿಕಸನಶೀಲ ವ್ಯಕ್ತಿತ್ವವನ್ನು ಕುರಿತು ಹಾಡಿರುವ ಹಾಡಿಗೂ ಹನ್ನೆರಡನೇಯ ಶತಮಾನದ ವಚನಕಾರ ಬಸವಣ್ಣ ಪರಮಾತ್ಮ ಮತ್ತು ಜೀವಾತ್ಮ ನಿರಾಕಾರ ಸಕಾರ ಸಂಬಂಧಗಳನ್ನು ಸಾಂಕೇತಿಕವಾಗಿ ನಿರೂಪಿಸಿರುವ ವಚನಕ್ಕೂ ಇರುವ ಸಾಮ್ಯತೆಯನ್ನು ಕಾಣುತ್ತೇನೆ.

ಕೃಷಿಕರು ನಿಸರ್ಗ, ಜೀವ-ಜಗತ್ತಿನೊಂದಿಗೆ ಇಟ್ಟು ಕೊಂಡಿರುವ ಅಚಲ ನಂಬಿಕೆಯೇ ಈ ಭಾವನೆಗೆ ಕಾರಣವಾಗಿದೆ. ಜನಪದರಿಗೂ-ಭೂದೇವಿಗೂ-ಬಸವಣ್ಣನಿಗೂ ಅನ್ಯೋನ್ಯವಾದ

ನಂಟು-ಗಂಟು. ಹೀಗಾಗಿ ಸೀಗಿ-ಗೌರಿ ಹಾಡುಗಳಲ್ಲಿ ಬಸವಣ್ಣ ಹಾಸು ಹೊಕ್ಕಿದ್ದಾನೆ. ಕೆಲವೆಡೆ ಮೂಲ ವಿಷಯಕ್ಕೆ ಸಂಬಂಧವಿರಲಿ, ಇಲ್ಲದಿರಲಿ ಹಾಡಿನ ಮಧ್ಯದಲ್ಲೊ, ಕೊನೆಯಲ್ಲೊ ಆತನನ್ನು ಸುತ್ತಿಸಿ ಕೈಮುಗಿದು ಕೊನೆಗೊಳಿಸಿದ್ದನ್ನು ಕಾಣುತ್ತೇವೆ.

ಮಣ್ಣಿನ ಮಕ್ಕಳು ಪ್ರಕೃತಿ ಮತ್ತು ಜೀವ-ಜಗತ್ತಿನೊಂದಿಗೆ ಗಾಢ ನಂಬಿಕೆಯನ್ನಿಟ್ಟುಕೊಂಡಿರುವುದರಿಂದ ಅವರ ಪಾಲಿಗೆ ಪಂಚಭೂತಗಳೆಲ್ಲ ದೇವರೇ ಆಗಿದ್ದಾರೆ. ಪಂಚಮುಖದ ಪರಮಾತ್ಮ ಈ ಶರೀರ ಪಂಚಭೂತದಾದುಗಳೆಂಬ ವೈಜ್ಞಾನಿಕ ಸತ್ಯ ಅವರಿಗೆಂದೋ ಹೊಳೆದಿದೆ. ತಿಳಿದಿದೆ. ಧಾನ್ಯ ಸಂಪತ್ತು, ಖನಿಜ ಸಂಪತ್ತು, ಜಡ-ಚರ ಹೀಗೆ ನಿಸರ್ಗದ ಯಾವತ್ತೂ ಎಲ್ಲ ಅಮೂಲ್ಯ ಸಂಪತ್ತನ್ನು ತನ್ನೋಡಲೊಳಗಿಟ್ಟುಕೊಂಡಿರುವ ಅದನ್ನು ಹೆರುವ ಜೀವಶಕ್ತಿ ಭೂಮಿ ತಾಯಿ ಮಣ್ಣು-ಹೊನ್ನುಗಳೆರಡೂ ಜನಪದರ ಪಾಲಿಗೆ ಅಬೇಧ ವಸ್ತುಗಳು ದುಡಿಯುವ ಕೈಗಳಿಗೆ ಮಣ್ಣೇ ಹೊನ್ನಾಗುತ್ತದೆ. ಮಣ್ಣು ಒಕ್ಕಲಿಗರ ದೃಷ್ಟಿಯಲ್ಲಿ ಬದುಕಿನಲ್ಲಿ ಬರೀ ಜಡವಸ್ತುವಲ್ಲ ಚೇತನಕ್ಕೆ ಚೈತನ್ಯವನ್ನು ಕೊಡುವ, ತುಂಬುವ ಅದಮ್ಯ ವಸ್ತು ಆ ಒಂದು ಗಾಢನಂಬಿಕೆಯಿಂದಲೇ ನೆಲ, ಜಲ, ಗಾಳಿ, ಬೆಳಕು, ಬೆಂಕಿ-ಇತ್ಯಾದಿಗಳನ್ನು ಶಕ್ತಿ ದೇವತೆ- ದೇವರು ಹೀಗೆ ವಿವಿಧ ಅವತಾ ರೂಪಗಳಲ್ಲಿ ಆರಾಧಿಸುತ್ತ ಬಂದಿದ್ದಾರೆ.

ಅಯ್ಯಾ, ನೀನು ನಿರಾಕಾರವಾಗಿದ್ದಲ್ಲಿ.
ನಾನು ಜ್ಞಾನವೆಂಬ ವಾಹನವಾಗಿರ್ದೆ ಕಾಣಾ
ಅಯ್ಯಾ ನೀನು ನಾಟ್ಯಕ್ಕೆ ನಿಂದಲ್ಲಿ
ನಾನು ಚೈತನ್ಯವೆಂಬ ವಾಹನವಾಗಿದ್ಯೆ ಕಾಣಾ
ಅಯ್ಯಾ ನೀನು ಆಕಾರವಾಗಿದ್ಯಲ್ಲಿ
ನಾನು ವೃಷಭನೆಂಬ ವಾಹನವಾಗಿದ್ಯೆ ಕಾಣಾ
ಅಯ್ಯಾ ನೀನೆನ್ನ ಭವನ ಕೊಂದೆಹೆನೆಂದು
ಜಂಗಮ ಲಾಂಛನವಾಗಿ ಬಂದಡೆ
ನಾನು ಭಕ್ತನೆಂಬ ವಾಹನವಾಗಿದ್ಯೆ ಕಾಣಾ
ಕೂಡಲಸಂಗಮದೇವಾ

ಶಿಷ್ಟಸಾಹಿತ್ಯದಲ್ಲಿ ಗಂಗೆ-ಗೌರಿಯರು.

ಗಂಗೆ-ಗೌರಿಯರಿಬ್ಬರೂ ಶಿವನ ಮಡದಿಯರು ಶಿವನ ಗೌರಿಯನ್ನು ಶಾಸ್ತ್ರೋಕ್ತವಾಗಿ ಮದುವೆಯಾಗಿ ತೊಡೆಯ ಮೇಲೆ ಆಕೆಗೆ ಸ್ಥಾನ ಕೊಟ್ಟನು. ಅಲಂಕರಿಸಿಕೊಂಡನು ಜಲ

ಪ್ರಳಯದಿಂದೊದಗಿದ ಆಪತ್ತಿನಿಂದ ಲೋಕವನ್ನು ಉಳಿಸಲು ಜಲ-ಗಂಗೆಯನ್ನು ಹಿಡಿದಿಟ್ಟುಕೊಳ್ಳುವುದು ಗಂಗಾಧರ ನೆನಿಸಿದನು ಗಂಗೆ-ಗೌರಿಯರನ್ನು ಮಡದಿಯರನ್ನಾಗಿ ಸ್ವೀಕರಿಸಿದ ಪ್ರಸ್ತಾಪವು ಸಂಸ್ಕೃತ-ಕನ್ನಡ ಶಿಷ್ಟಸಾಹಿತ್ಯದಲ್ಲಿ ತುಂಬ ಅದ್ಭುತ-ರಮ್ಯವಾಗಿ ಬಂದಿಯೆಂಬುದನ್ನು ಇಲ್ಲಿ ನೋದಾರಣವಾಗಿ ವಿವರಿಸಲಾಗಿದೆ.

ಪಾರ್ವತಿಯ ತಪೋನಿಷ್ಠೆಗೆ ಪರಮೇಶ್ವರ ಆಕೆಯನ್ನು ವಿವಾಹವಾದ ಬಳಿಕ ಪ್ರೀತಿಯಿಂದ ತೊಡೆಯ ಮೇಲೆ ಆಕೆಯನ್ನು ಕುಳ್ಳಿರಿಸಿಕೊಂಡು ಅಲಂಗಿಸಿಕೊಂಡನೆಂದು, ಭಗೀರಥನ ತಪ: ಫಲವಾಗಿ ಗಂಗೆ ದೇವಲೋಕದಿಂದ ಭೂಮಿಗೆ ಧುಮುಕಲಾರಂಭಿಸಿದಾಗ ಆ ವೇಗವನ್ನು ತಾಳಲು ಭೂವಿ ಅ ಸಮರ್ಥಳೆಂಬುದನ್ನು ಗ್ರಹಿಸಿದ ಶಿವ ದೃಢವಾಗಿ ನಿಂತು ಆಕೆಯನ್ನುತನ್ನ ಜಟಕಲಾಪದೊಳಕ್ಕೆ ತಾಳಿಕೊಂಡನೆಂಬುದೂ, ಪುರಾಣ ಪ್ರಸಿದ್ಧ ವಿಷಯ ಗೌರಿ ಶಿವನ ಪತ್ನಿ; ಶಿವನ ಎಡ ತೊಡೆ ಅವಳಿಗೆ ಆಸನ ಗಂಗೆ ಪ್ರಾಸಂಗಿಕವಾಗಿ ಉಗ್ರವಾದ ತಪಸ್ಸು ಮಾಡಿ ಅವನನ್ನು ವರಿಸಿ ಮದುವೆಯಾದ ಪತ್ನಿಗೆ ತನ್ನ ಸಮ್ಮುಖದಲ್ಲೇ ಈ ರೀತಿ ಅನ್ಯ ಸ್ತ್ರೀ ಯೊಬ್ಬಳು ತನ್ನ ಪತಿಯ ತಲೆಯ ಮೇಲೆ ಕುಳಿತುಕೊಳ್ಳುವಷ್ಟು ಸ್ವಾತಂತ್ರ್ಯ ಪಡೆಯುವುದು ಸಾಧ್ಯವಾದೀತೆ- ಎಂಬ ಸ್ತ್ರೀ ಸ್ವಭಾವದ ದೌರ್ಬಲ್ಯವನ್ನು ಆಧಾರವಾಗಿಟ್ಟುಕೊಂಡು ಕೆಲವು ಕವಿಗಳು ಕುಹಕವಾಗಿ ಕೆಲವು ಕವಿಗಳು ಕುಹಕವಾಗಿ ಆಲಂಕರಿಕವಾಗಿ ರಂಜನಿಯವಾಗಿ ಅನೇಕ ಶ್ಲೋಕಗಳನ್ನು ರಚಿಸಿದ್ದಾರೆ.

ಒಬ್ಬ ಕವಿಯಂತೂ ಶಿವ ಸಂಸಾರದಲ್ಲಿಜಿಗುಪ್ಸೆಗೊಂಡು ಹಾಲಾಹಲವನ್ನು ಕುಡಿಯಲು ಇತರ ಕೌಟುಂಬಿಕ ಕಲಹಗಳ ಜೊತೆಯಲ್ಲಿ ಗೌರಿಗೆ-ಗಂಗೆಯ ಮೇಲೆ ಉಂಟಾಗಿದ್ದ ಅಸೂಯೆಯೂ ಕಾರಣವಾಯಿತೆಂದು ಹೇಳಿರುವುದು ತುಂಬಾ ರಂಜಕವಾಗಿದೆ.

...ಗೌರಿ ಜುಹ್ನುಸುತಾಮಸೂಮತಿ; ಕಲಾನಾಥಂ ಕಪಾಲಾನಲು'
ನಿರ್ವಿಣ್ಣಸ ಪಕ್ಷಾ ಕುಟುಂಬ ಕಲಹಾದೀ ಶೋಪಿ ಹಾಲಾ ಹಲಂ ॥

ಕೊಂಕು ನುಡಿಗೆ ಪ್ರಸಿದ್ಧ ಉದಾಹರಣೆಯಾದ ವಿಶಾಖದತ್ತನ ಮುದ್ರರಾಕ್ಷಸನಾಟಕದ ನಾಂದೀ ಪದ್ಯದಲ್ಲೂ ಗೌರಿಗೆ-ಗಂಗೆಯ ಮೇಲಿದ್ದ ಅಸೂಯೆ ಅಭಿವ್ಯಕ್ತವಾಗುತ್ತದೆ.

ಧನ್ಯಾ ಕೇಯಂ ಸ್ಥಿತಾ ತೇ ಶಿರಸಿ ? ಶಶಿಕಲಾ; ಕಿಂನು ನಾಮೈತವದಸ್ಯಾ ।
ನಾಮೈವಾನ್ಯಾಸ್ತದೇತತ್ತರಿಚತಮಪಿ ತೇವಿಸ್ಮತಂ ಕಸ್ಯ ಹೇತೋ॥
ನಾರೀಂ ಪ್ರಚ್ಛಾಮಿನೇಂದು; ಕಥಯತು ವಿಜಯಾ ನಪ್ರಮಾಣಂ ಯದೀಂದು ದೇವ್ಯಾನಿಹ್ನೋತುವಿಚ್ಛೋ: ಇತಿ
ಸುರಸರಿತಂ ಶಾಠ್ಯಮವ್ಯಾದ್ವಿ ಭೋರ್ವ: ॥

ಶಿವನ ತಲೆಯ ಮೇಲೆ ಸ್ನಾನ ಪಡೆದಿರುವ ಗಂಗೆಯನ್ನು ನೋಡಿ ಗೌರಿ ತನ್ನಲ್ಲುಂಟಾದ ಅಸೂಯೆಯನ್ನು ಹೊರಗೆಡಹದೆ, ಚುಚ್ಚು ನುಡಿಯಿಂದ ಶಿವನನ್ನೇ ಪ್ರಶ್ನಿಸುತ್ತಾಳೆ–ಧನ್ಯಕೇಯಂ ಸ್ಥಿತಾ ತೇ ಶಿರಸಿ ?–ನಿನ್ನ ತಲೆಯ ಮೇಲೆ ಕುಳಿತಿರುವ ಧನ್ಯೆಯಾದ ಈಕೆ ಯರು ? ಗೌರಿಯ ಅಸೂಯೆ ಅಸಹನೆಗಳನ್ನು ಮನಗಂಡ ಶಿವ, ಗಂಗೆ ತನ್ನ ಜಟೆಯಲ್ಲಿ ಇಲ್ಲವೋ ಎಂಬಂತೆ, ಗೌರಿ ಕೇಳಿದುದು ತನ್ನ ತಲೆಯ ಮೇಲಿರುವ ಚಂದ್ರಕಲೆಯನ್ನುದ್ದೇಶಿಸಿಯೇ ಎಂಬ ಭಾವ ಬರುವಂತೆ, ಉತ್ತರ ಹೇಳುತ್ತಾನೆ–ಶಶಿಕಲೆ ಎಂದು, ಗೌರಿ ಕೇಳುತ್ತಾಳೆ–ಶಶಿಕಲೆ ಎಂಬುದು ಅವಳ ಹೆಸರೇ. ಈ ವಿಚಾರ ನಿನಗೆ ಪರಿಚಿತವಾದದ್ದೇ ಆದರೂ ಹೇಗೆ ಮರೆತು ಹೋಯಿತು ? ಶಿವ ಮಾಡುತ್ತಿರುವ ಈ ಅಪಲಾಪ ಗೌರಿಗೆ ಅರ್ಥವಾಗಿ ಅವಳು ಗಡಸು ಧ್ವನಿಯಲ್ಲಿ ಹೇಳುತ್ತಾಳೆ–ನಾನು ಚಂದ್ರನನ್ನು (ಕುರಿತು) ಕೇಳುತ್ತಿಲ್ಲ; ಹೆಂಗಸನ್ನು ಕುರಿತು ಕೇಳುತ್ತಿದ್ದೇನೆ.

ಗೌರಿಯ ಈ ಮಾತಿನ ಅರ್ಥವನ್ನು ತಿರುವುಮುರವು ಮಾಡಿ ಶಿವ ಕೇಳುತ್ತಾನೆ–ಹಾಗಾದರೆ ಹೆಂಗಸಾದ (ನಿನ್ನ ಈ ಸಖಿ) ವಿಜಯೇ ಹೇಳಲ್ಲಿ ಇದು ಪ್ರಾಮಾಣಿಕವಾಗಿ ಚಂದ್ರನೇ ಅಲ್ಲವೇ ಎಂಬುದನ್ನು ಈ ಪ್ರಕಾರವಾಗಿ ಗೌರಿದೇವಿಯಿಂದ ಗಂಗೆಯನ್ನು ಮರೆಯಿಸಬಯಸಿದ ಪರಶಿವನ ಶಾಠ್ಯ ನಿಮ್ಮನ್ನು ಸಲಹಲಿ ಎಂದು ಕವಿ ಆಶಿಸುತ್ತಾನೆ.

ಇದೇ ಬಗೆಯ, ಆದರೆ ಬೇರೆ ಧಾಟಿಯೆ ಮತ್ತೊಂದು ಕುಹಕಪೂರ್ಣ ಶ್ಲೋಕದಲ್ಲಿ ಗಂಗೆಯ ಮೇಲೆ ಗೌರಿಗಿದ್ದ ಮಾತ್ಸರ್ಯ ಸ್ಪಷ್ಟವಾಗಿ ಮೂಡಿ ಬಂದಿದೆ. ಇಲ್ಲೂ ಶಿವ ತನ್ನ ತಲೆಯ ಮೇಲೆ ಗಂಗೆ ಎಂಬ ಹೆಂಗಸು ಇಲ್ಲವೇ ಇಲ್ಲ ಅಲ್ಲಿರುವುದು ಬರೀ ನೀರು ಎಂದು ಸ್ವಾರಸ್ಯವಾಗಿ ನಿರೂಪಿಸಿ ಗೌರಿಗೆ ತಿಳಿಯ ಹೇಳಿರುವ ರೀತಿ ಪ್ರತಿಭಾ ಸಂಪನ್ನವಾಗಿದೆ.

ಮೌಳೌಕಿಂನು ಮಹೇಶ ? ಮಾನಿನಿ, ಜಲಂ ಕಿಂ ವಕ್ತ್ರಂ ಅಂಬೋರುಹಂ;
ಕಿಂ ನೀಲಾಲಕವೇಣಿಕಾ ? ಮಧುಕರಾ; ಕಿಂಭ್ರೂಲತೇ ವೀಚಿಕಾ;
ಕಿಂನೇತ್ರೆ ? ಶತರಿಧಯಂ; ಕಿಮು ಕುಚೌ; ಪ್ರೇಂಖದ್ರಥಾಂಗದ್ವಯ;
ಸಾಶಂಕಾಂ ಇತಿ ವಂಚಯನ್ ಗಿರಿಸುತಾಂ ಗಂಗಾಧರಂ ಪಾತುವ॥

ಇಲ್ಲಿ ಗೌರೊ–ಗಂಗೆಯ ಹೆಸರೆತ್ತದೆಯೇ ಅವಳ ಒಂದೊಂದು ಅವಯುವವನ್ನೂ ನಿರ್ದೇಸಿಸಿ ಶಿವನನ್ನು ಪ್ರಶ್ನಿಸುವ ಧಾಟಿ ಗಂಭೀರ ವಾಗಿದೆ. ಅವಳು ಮೊದಲು ಕೇಳುತ್ತಾರೆ. ಇದೇನು ನಿನ್ನ ತಲೆಯ ಮೇಲೆ ಮಹೇಶ ? ಶಿವ ಹೇಳುತ್ತಾಳೆ ನಿರ್ಲಪ್ತನಾಗಿ–ನೀರು ಮಾನಿನಿ, ಇಲ್ಲಿಶಿವನಲ್ಲಿ ಏನನ್ನು ಮರೆಮಾಚು ಪ್ರಸಕ್ತಿಯೇ ಇಲ್ಲ ಅವನಿಗೆ ಗಂಗೆ ಬರೀ ನೀರು ಅಥವಾ ನದಿ ಗೌರಿಯ ದೃಷ್ಟಿಯಲ್ಲಿ ಗಂಗೆ ಒಬ್ಬ ರೂಪವತಿಯಾದ ಹೆಂಗಸು ಆದ್ದರಿಂದಲೇ ಅವನಿಗೆ

ಅಸಹನೆ, ಅಸೂಯೆ, ಶಿವನ ಸಲೀಸಾದ ಉತ್ತರ ಕೇಳಿ ಅವಳು ಪುನಃ ಪ್ರಶ್ನಿಸುತ್ತಾಳೆ, ಅವಳಿಗೆ ಅಸಹನೆ ಅಸೂಯೆ, ಶಿವನ ಸಲೀಸಾದ ಉತ್ತರ ಕೇಳಿ ಅವಳು ಪುನಃ ಪ್ರಶ್ನಿಸುತ್ತಾಳೆ.

–(ಈ) ಮುಖವೋ ? ಅದು ಕಮಲ. ಈ ನೀಲ ಕೇಶಗಳ ಜಡೆಯೋ ? ಅವು ದುಂಬಿಗಳ ಸಾಲು. ಈ ಎರಡು ಹುಬ್ಬುಗಳು ? ಅವುಅಲೆಗಳು ಆ ಎರಡು ಸ್ತನಗಳು ? ಅವು ತೂಗಾಡುತ್ತಿರುವ ಚಕ್ರವಾಕಗಳು ಅಶಂಕಗೊಂಡ ಗೌರಿಯನ್ನು ಈ ರೀತಿ ವಂಚಿಸುತ್ತಿರುವ ಗಂಗಾಧರ ನಿಮ್ಮನ್ನು ಸಲುಹಲಿ![೩]

ಇದೇ ಬಗೆಯ ಮತ್ತೂ ಒಂದು ಶ್ಲೋಕ ವಸ್ತುವೂ ಗೌರಿಯ ಅಸೂಯೆಯೇ ಆಗಿದೆ.
ಏಷಾ ತೇಹರ । ಕಾ ಸುಗಾತ್ರಿ ? ಕತಮಾ । ಮೂರ್ಧ್ನಿಸ್ಥಿತಾ: ಕಿಂ ಜಟಾ ?
ಹಂಸಃ ಕಿಂ ಭಜತೇ ಜಟಾಂ ? ನಹಿ, ಶಶೀ; ಚಂದ್ರೋಜಲಂ ಸೇವತೇ ?
ಮುಗ್ಧೇ ! ಭೂತಿರಿಯಂ; ಕುತ್ರೋತ್ರ ಸಲಿಲಂ ? ಭೂತಿಸ್ತ ರಂಗಾಯತೇ
ಏವಂ ಯೋ ವಿನಿಗೂಹತೇ ತ್ರಿಪಥಗಾಂ ಪಾಯಾತ್ಸಮ ಶಂಕರ: ॥

ಮೇಲಿನ ಶ್ಲೋಕಗಳು ಸಂವಾದ ರೂಪದಲ್ಲಿದ್ದರೆ ಮುಂದಿನ ಶ್ಲೋಕದಲ್ಲಿ ಗಂಗೆಯನ್ನು ತನ್ನ ತಲೆಯ ಮೇಲಿರಿಸಿಕೊಂಡಿರುವ ಶಿವನನ್ನು ಗೌರಿ ನೇರವಾಗಿಯೇ ಕೋಪದಿಂದ ತರಟೆಗೆ ತೆಗೆದುಕೊಳ್ಳುವುದನ್ನು ಕಾಣಬಹುದು.

ಸಂಪ್ರಾಪ್ತಂ ಮಕರದ್ವಜೇನ ಮಥನಂ ತ್ವತ್ತೋಮದರ್ಥೇ ಪುರಾ
ತದ್ಯುಕ್ತಂ ಬಹುಮಾರ್ಗಗಾಂ ಮಮ ಪುರೋ ನಿರ್ಲಗಜ್ಜ ವೋಡುಸ್ತವ ?
ತಾಮೇನಾಮನುಯಸ್ವ ಭಾವಕುಟಿಲಾಂ; ಹೇ ಕೃಷ್ಣಕಂಠ ! ಗ್ರಹಂ
ಮುಂಚೇತ್ಯಾಹ ರುಷಾ ಯಮದ್ರಿತನಯೂ (ಲಕ್ಷ್ಮೀಶ್ವ) ಪಾಯೋತ್ಸವ: ॥

ಹಿಂದೆ ನನಗಾಗಿ ಮನ್ಮಥನೂ ನಿನ್ನ ದೆಸೆಯಿಂದ ಕಷ್ಟಕ್ಕೀಡಾದ, ಹಾಗಿರುವಾಗ ಎತಾ ಲಜ್ಜೆಯಿಲ್ಲದವನೆ ! ನನ್ನ ಮುಂದೆಯೇ ಗಂಗೆಯನ್ನು ತಲೆಯ ಮೇಲ ಹೊತ್ತು ಕೊಂಡಿರುವೆಯಲ್ಲ. ಇದು ನಿನಗೆ ತರವೇಖು ? ಕುಟಿಲ ಪ್ರೇಮದ ಅವಳ ಅನುನಯನನ್ನೇ ಮಾಡು ನೀಲಕಂಠ । ಬಿಡು ನನ್ನ ಅಲಿಂಗನವನ್ನು–ಎಂಬುದಾಗಿ ಗೌರಿ ಕೋಪದಿಂದ ಯಾವನನ್ನುದ್ದೇಶಿಸಿ ನುಡಿದಳೋ ಆ ಶಿವ ನಿಮ್ಮನ್ನು ಸಲಹಲಿ.

ಸಂಗ್ರಹ: ವಿಶ್ವಕೋಶ ಸಂಪುಟ ಐದು ಕ.ಅ.ಸಂ.ವೈ.ವಿ. ಪುಟ ೮೭೮–೮೭೯.

ಈ ಎಲ್ಲಾ ಶ್ಲೋಕಗಳೂ ಆಶೀರ್ವಚನರೂಪವಾದ ಮಂಗಳ ಶ್ಲೋಕಗಳಾಗಿವೆ. ಗಂಗೆಯ ಮೇಲೆ ತೋರುವ ಸವತಿ ಮಾತ್ಸರ್ಯ, ಅಸಹನೆ, ಅಸೂಯೆಗಳು ಕವಿಗಳಿಂದ ಆರೋಪಿತವಾದುವೇ ವಿನಾ ವಾಸ್ತವಿಕವಲ್ಲ. ಗಂಗೆ–ಗೌರಿ ಇಬ್ಬರೂ ಸತ್ವಪ್ರಧಾನರು; ದೈವೀ ಸಂಪತ್ತಿನಿಂದ ಕೂಡಿದ ಮಹಾನುಭವೆಯರು ಜಗತ್ ವಂದಿತರೇ ಆಗಿದ್ದಾರೆ.

ಗಂಗಾಧರಲೀಲೆ

(ಗಂಗೆ ಶಿವನ ಮುಡಿಗೇರಿದ ಪ್ರಸಂಗವು ಕನ್ನಡ ಸಾಹಿತ್ಯದ ಮಹತ್ ಕೃತಿ ವಿರೂಪಾಕ್ಷ ಪಂಡಿತ ವಿರಚಿತ ಚನ್ನಬಸವ ಪುರಾಣದಲ್ಲಿಯೂ ಬಂದಿದೆ.) ಶಿವನು ಲೋಕ ಕಲ್ಯಾಣಕ್ಕಾಗಿ ಆಡಿದ ಇಪ್ಪತ್ತೈದು ಲೀಲೆಗಳಲಿ 'ಗಂಗಾಧರಲೀಲೆಯೂ' ಬಂದು ಹೆಸರೇ ಸೂಚಿಸುವಂತೆ ಗಂಗೆಯನ್ನು ಶಿವನು ತಲೆಯ ಮೇಲೆ ಧರಿಸಬೇಕಾಗಿ ಬಂದ ಸಂದರ್ಭದ ಮುಖ್ಯ ಕಥಾ ಸಾರವು ಹೀಗಿದೆ;

ಒಂದು ದಿನ ಶಿವನು ಸಂತೋಷದಿಂದ ವನದಲ್ಲಿ ಗಿಳಿಗಳ ವಿನೋದದ (ಸರಸ ಸಂಭಾಷಣೆಯನ್ನು) ನುಡಿಗಳನ್ನು ಆಲಿಸುತ್ತ, ಕೇಳಿಯನ್ನು ನೋಡುತ್ತ ಮೈ ಮರೆತು ಮಾವಿನ ಮರದ ನೆರೆಯ ಜಗುಲಿಯ ಮೇಲೆ ಆಸೀನನಾಗಿದ್ದನು. ಅತ್ತ ಪಾರ್ವತಿ ಶಿವನನ್ನು ಅರಮನೆಯಲ್ಲಿ ಎಲ್ಲಿಯೂ ಕಾಣದೇ ಚಿತ್ತ ಭ್ರಮೆಗೆ ಈಡಾದಳು. 'ನೀರಾಟದ ನೆವದಿಂದ ಯಾವಳನ್ನಾದರೂ ಕೂಡಿದನೋ ಏನೋ' ಎಂದು ಪರಿತಪಿಸಿ ಮನೆಯಿಂದ ಹೊರಬಿದ್ದಳು. ವನದಲ್ಲೆಲ್ಲಾ ಅಲೆದಾಡಿ ದಣಿದು ಶಿವನನ್ನು ಕಾಣದೆ ಕಂಗಾಲಾದಗ ಅಲ್ಲಿಯೇ ಸಮೀಪದ ಮಾವಿನ ಮರದ ಜಗುಲಿಯಲ್ಲಿ ವಿರಮಿಸುತ್ತಿದ್ದ ಶಿವನನ್ನು ಕಂಡು ಹಿಗ್ಗಿದಳು, ಪುಳಕಿತಳಾದಳು. ಒಬ್ಬನೇ ಇದ್ದಾನೆ ಸರಸವಾಡಬೇಕೆಂದು ಪಾರ್ವತಿಗನ್ನಿಸಿತು ಅವನಿಗೆ ಗೊತ್ತಾಗದಂತೆ ಮೆಲ್ಲನೆ ಹಿಂದಿನಿಂದ ಹೋಗಿ ಎರಡು ಕಣ್ಣುಗಳನ್ನು ಗಟ್ಟಿಯಾಗಿ ಮುಚ್ಚಿದಳು ಸ್ಪರ್ಷಸುಖದಿಂದ ಇಬ್ಬರೂ ಮೈಮರೆತರು ಶಿವನ ಕಣ್ಣುಗಳು ಮುಚ್ಚಿದುದರಿಂದ ಸೂರ್ಯ ಚಂದ್ರರೂ ಮುಚ್ಚಿ ಹೊದರು (ಶಿವಾಕ್ಷಿಗಳು; ಸೂರ್ಯಚಂದ್ರರು) ಸಕಲ ಲೋಕಗಳನ್ನು ಕಗ್ಗತ್ತಲೆ ಮುಸುಕಿತು. ಲೋಕ ವ್ಯವಹಾರವೆಲ್ಲಾ ನಿಂತು ಹೋಗಿ ಜನ ಕಂಗೆಟ್ಟರು. ದೇವಾನುದೇವತೆಗಳು ಯೋಚನೆಗೀಡಾದರು 'ಶಿವನೇಗತಿ' ಎಂದು ಅವನನ್ನು ಮೊರೆ ಹೊಕ್ಕರು; ಸುತ್ತಿಸಹತ್ತಿದರು.

ಅಷ್ಟರಲ್ಲಿ ಗಿರಿಜೆಯ ಪುಳಕದಿಂದ ಶಿವನ ಬೆನ್ನ ಮೇಲೆ ಜಲಕಣಗಳು ಉದುರಿದವು. ಆ ತಂಪಿನಿಂದ ಶಿವನ ಮೈ ಮರೆವು ತಿಳಿಯಾಯಿತು. ಲೋಕದ ದು:ಸ್ಥಿತಿಯ ಅರಿವು ಅವನಿಗಾಯಿತು ಕಣ್ಣ ಮುಚ್ಚಿದ ಕೈಯನ್ನು ಸರಿಸಿದರೆ ಮನೋವಲ್ಲಭೆಗೆ ಸಿಟ್ಟು ಬಂದೀತು ಎಂದು ಎಚ್ಚರಿಸಲು ಹೋಗದೆ ಶಿವನು ಹಣೆಯ ಕಣ್ಣನ್ನು ಕೊಂಚ ಮಾತ್ರ ತೆರೆದನು–ಲೋಕದ ಕತ್ತಲೆ

ಹರಿಯಲೆಂದು; ಬೆಳಗಲೆಂದು. ಅದು ಅಗ್ನಿಕಣ್ಣು, ಅದರ ಕಿರಣಗಳಿಂದ ಬೆಳಕೇನೋ ಆಯಿತು. ಬೆಳಕಿನೊಡನೆ ಕಿಚ್ಚು ಚಿಮ್ಮಿತು ಎಲ್ಲಾ ಲೋಕಗಳನ್ನು ದಹಿಸಿತೊಡಗಿತ್ತು. ಆಗ ಸುರರು, ಅಸುರರು, ನರರು ಗೋಳಿಟ್ಟರು. 'ಶಿವನೇ ಶಂಕರಾ ಕಾಯಪ್ಪಾ ತಂದೆ' ಎಂದು ಒಂದೇ ಸಮನೇ ಮೊರೆಯಿಟ್ಟರು ಆಗ ಗಿರಿಜೆ ತಿಳಿದೆದ್ದು 'ಅಯೊ ನನ್ನ ಸರಸದಿಂದ ಎಂಥಾ ತಪ್ಪಾಯಿತಲ್ಲಾ' ಎಂದು ತಟ್ಟನೆ ಕೈಗಳನ್ನು ತೆಗೆದಳು ಆಗ ಶಿವನ ನೇತ್ರಗಳಿಂದ ಆನಂದಾಶ್ರಯಗಳು ಸೂಸಿದವು ಆ ನೀರು ಗಿರಿಜೆಯ ಬೊಗಸೆಯನ್ನು ತುಂಬಿ ಹರಿಯಿತು ಬೆರಳುಗಳ ಸಂದುಗಳಿಂದ ಸೋರಿದ ನೀರು ಹತ್ತು ನದಿಗಳಾಗಿ, ಹತ್ತು-ಸಾವಿರವಾಗಿ, ಸಾವಿರ-ಲಕ್ಷವಾಗಿ ಇಮ್ಮಡಿಸಿ ಹೊರಸೂಸಿ, ದುಮ್ಮಿಕ್ಕಿ ಪ್ರವಹಿಸಿದವು. ಜಗದ್ವಾಪಿಯಾಗಿ ಹಬ್ಬಿದ ಬೆಂಕಿ ನಂದಿ ತಣ್ಣಗಾಯಿತು ಜಲ ಪ್ರಳಯವಾಯಿತು. ಗಿರಿಜೆ ಬೆಕ್ಕಸಬೇರಗಾದಳು, 'ಜಲ ಪ್ರಳಯ ಬಂತಲ್ಲಾ ಲೋಕಕ್ಕೆ ಎಂದು ಶಿವನು ತಕ್ಷಣ ತನ್ನ ಕಿರು ಜಡೆಯ ತುದಿಯನ್ನುದುಮ್ಮಿಕ್ಕುತ್ತಿರುವ ಜಲದಲ್ಲಿ ಅದ್ದಿದನು. ಆ ಕ್ಷಣವೇ ಬ್ರಹ್ಮಾಂಡದ ಒಳಗೂ ಹೊರಗೂ ತುಂಬಿದ್ದ ನೀರನ್ನು ಸರ್ರನೆ ಹೀರಿಕೊಂಡಿತ್ತು, ಎಲ್ಲಾ ನೀರು ಬಂದು ಜಡೆಯಲ್ಲಿ ಮುತ್ತಿನಂತೆ ನಿಂತಿತು ಹೀಗೆ ಶಿವನು ಜಡೆಯಲ್ಲಿ ಜಲವನ್ನು ಧರಿಸಿ ಗಂಗಾಧರ ನೆನಿಸಿದನು. ಮಹಾಪ್ರಳಯ ನೀಗಿತು ಲೋಕಗಳ ವ್ಯಾಪಾರವೆಲ್ಲ ಮತ್ತೆ ಮೊದಲಿನಂತೆ ಯಥಾವತ್ತಾಗಿ ನಡೆಯ ತೊಡಗಿದವು.

ಶಿವನು ಗಂಗಾಧರನಾಗುವುದಕ್ಕೆ ಶಿವೆಯು ವಿನೋದಕ್ಕೆ ಆತನ ಕಣ್ಣುಗಳನ್ನು ಮುಚ್ಚಿದುದೇ ಕಾರಣವಾಗುತ್ತದೆ. ಗಂಗೆಯ ಆಗಮನ ಅವಳಿಗರಿವಿಲ್ಲದಂತೆಯೇ ಆಗುತ್ತದೆ ಹೀಗಾಗಿ ಈ ಕಾವ್ಯದಲ್ಲಿ ಗಂಗೆ-ಗೌರಿಯರ ಸವತಿ-ಮಾತ್ಸರ್ಯದ ಕದನಕ್ಕೆ ಅಸ್ಪದವೇ ಇಲ್ಲವಾಗಿದೆ. ಅದರಿಂದ ಶಿವ-ಶಿವೆಯರೊಂದಿಗೆ ಗಂಗೆಯೂ ವಂದನಾರ್ಹಳಾಗಿದ್ದಾಳೆ.

ಗಂಗೆ-ಗೌರಿಯರ ಪಾತ್ರ ಚಿತ್ರಣ ಮೇಲೆ ವಿವರಿಸಿದ ಕಾವ್ಯ ಪುರಾಣಗಳಿಗಿಂತ ಹೆಚ್ಚು ಸ್ವಾರಸ್ಯಕರವಾಗಿ, ಯಶಸ್ವಿಯಾಗಿ ಜನಪದ ಸಾಹಿತ್ಯದಲ್ಲಿ ಮೂಡಿಬಂದಿರುವುದನ್ನು ಮುಂದಿನ ಭಾಗದಲ್ಲಿ ಕಾಣುತ್ತೇವೆ. ಈ ದ್ವಾರಸ್ಯಕ್ಕೆ ಯಶಸ್ವಿಗೆ ಕಾರಣ ಅಲ್ಲಿ ಅವರೂ ಜನಪದರಾಗಿಯೇ ಕಾಣಿಸಿಕೊಂಡಿರುವುದು ಚಿತ್ರತವಾಗಿರುವುದು.

ಜನಪದ ಸಾಹಿತ್ಯದಲ್ಲಿ ಗಂಗೆ-ಗೌರಿಯರು

ಗಂಗೆ-ಗೌರಿಯರ ಜನನ ಮತ್ತು ಭವಿಷ್ಯ ಕುರಿತಂತೆ ಜನಪದರಲ್ಲಿ ಬಂದಿರುವ ಕಥೆಯೊಂದು ಈ ರೀತಿಯಾಗಿದೆ. ಉಂಡುಟ್ಟು ಮಂಚದ ಮೇಲೆ ಮಲಗಿರುವ ಗಿರಿಮಾಜಿಗೆ ಕನಸಿನಲ್ಲಿ ಶಿವಕಾಣಿಸಿ ಗರ್ಭಿಣಿಯಾದ ಅವಳೊಡಲಲ್ಲಿ ಹೆಣ್ಣು ಮಕ್ಕಳು ಹುಟ್ಟಿದರೆ ತನಗೆ

ಕೊಡುವಂತೆ ಕೇಳುತ್ತಾನೆ. ಗಿರಿಮಾಜಿಗೆ ನವಮಾಸಗಳು ತುಂಬಿ ದಿನ ಹತ್ತಿರವಾಗಲು ಪತಿ ಗಿರಿರಾಯ ಸೊಲಗಿತ್ತಿ ಸಂಗಮ್ಮನನ್ನು ಹುಡುಕಿ ಕರೆತರುತ್ತಾನೆ. ಎರಡು ಹೆಣ್ಣು ಮಕ್ಕಳು ಜನಿಸುತ್ತವೆ. ಆದರೆ ಹಿರಿಯ ಹೆಣ್ಣು ಹುಟ್ಟಿದ ಗಳಿಗೆಯಲ್ಲಿ ಶಕುನ ಸರಿ ತೋರದೆ ಹುಟ್ಟಿದ ಮನೆಗೆ ಅವಳು ಕಂಟಕ ಪ್ರಾಯಳಾಗುವಳೆಂದು ಸಂಗಮ್ಮನೂ ಪುರೋಹಿತರೂ ಹೇಳಿದ ಮೇಲೆ ತೋಟ್ಟಿಲ ಸಮೇತ ಹೊಳೆಗೆ ಬಿಟ್ಟು ಬರುತ್ತಾನೆ.

ಗಿರಿಯ ಮೀನು ಹಿಡಿಯುವಾಗ ಅಂಬಿಗರ ಗಂಗನಿಗೆ ಆ ಮಗು ಸಿಗುತ್ತದೆ. ಹೀಗೆ ಗಂಗೆ ಅಂಬಿಗರ ಮನೆಯಲ್ಲಿ ಬೆಳೆದು ದೊಡ್ಡವಳಾಗುತ್ತಾಳೆ.

ಗಂಗೆ-ಗೌರಿಯರಿಬ್ಬರೂ ಗಿರಿರಾಜ-ಗಿರಿಮಾಜಿಯ ಮಕ್ಕಳು ಅವಳಿ ಮಕ್ಕಳು ಜಾತಕ ದೋಷದಿಂದಾಗಿ ಗಂಗೆ ಅಂಬಿಗರ ಮನೆಯಲ್ಲಿ ಬೆಳೆದು ದೊಡ್ಡವಳಾಗುತ್ತಾಳೆ. ಹೀಗಾಗಿ ಗಂಗೆ-ಗೌರಿಯರು ವಿಭಿನ್ನ ಸಂಸ್ಕಾರವನ್ನು ಪಡೆಯುತ್ತಾರೆ. ಪೂರ್ವನಿಯೋಜಿತ ವಿಧಿ ಲಿಖಿತದಂತೆ (ಗೌರಿಯನ್ನು ಮದುವೆಯಾಗಿದ್ದರೂ) ಶಿವ ಗಂಗೆಯನ್ನು ಒಲಿಸಿಕೊಂಡು ಹೆಂಡತಿಯಾಗಿ ಸ್ವೀಕರಿಸಿ ಮನೆಗೆ ಕರೆದುಕೊಂಡು ಬರುತ್ತಾನೆ. ಈ ಮೇಲೆ ಹೇಳಿದ ಕಿರು-ಕಥೇಯೇ ಮೌಖಿಕ ಪರಂಪರೆಯ ಕಥನ ಕಾವ್ಯಗಳಲ್ಲಿ ತುಂಬಾ ವಿವರವಾಗಿ ಮನೋಜ್ಞವಾಗಿ ಬಂದಿದೆ. ಅವರೀರ್ವರ ಚರಿತ್ರೆ-ವ್ಯಕ್ತಿತ್ವ ಲೌಕಿಕ ಮತ್ತು ಅಲೌಕಿಕದ ಹಿನ್ನೆಲೆಯಲ್ಲಿ ಬಿಂಬಿತವಾಗಿರುವುದು ಗಮನಾರ್ಹ.

ಗಂಗೆಯು ಹುಟ್ಟಿದ ಗಳಿಗೆ, ಹೆತ್ತ ಮನೆಗೆ ಶೂಭತರುವಂತಾಗಿರಲಿಲ್ಲವೆಂದು ಹೇಳುವ ನುಡಿಗಳು ಹೀಗಿವೆ.

ಬುಟ್ಟ ಬುಧವಾರ ದಿನ ಹುಟ್ಟಿತ ಈ ಕೂಸ
ಹುಟ್ಟೀದ ಮನಿಗೆ ಜಯನಿಲ್ಲ ಕೋಲೆನ್ನ ಕೋಲ ॥
ಹುಟ್ಟಿದ ಮನಿಗೆ ಜಯವಿಲ್ಲ ಕೂಸಿನ
ಬಿಟ್ಟ ಬಾ ಜಲದಾಗ ಕೋಲೆನ್ನ ಕೋಲ ॥

ಜಲಗಾರ ಗಂಗನಿಗೆ ನದಿಯಲ್ಲಿ ತೇಲುತ್ತ ಬರುತ್ತಿರುವ ತೊಟ್ಟಿಲ, ಅದರೊಳಗೆ ಕೂಸು ಕಂಡಾಗ ಪರಮಾನಂದ ವಾಗುತ್ತದೆ. ತಮಗೆ ಮಕ್ಕಳಿಲ್ಲದ ಕೊರತೆಯನ್ನು ದೇವರು ಈ ರೀತಿಯಾಗಿ ಪೂರೈಸಿದನೆಂದು ಗಂಡ-ಹೆಂಡತಿ ಧನ್ಯತಾಭಾವದಿಂದ ಪುಳಕಿತರಾಗುತ್ತಾರೆ. ವಿಧಿವತ್ತಾಗಿ ನಾಮಕರಣ ಮಾಡುತ್ತಾರೆ.

ನೀರಾಗ ಹುಟ್ಯಾಳ ನೀರಾಗ ಬೆಳದಾಳ
ನೀಲಗಂಗಾ ಎಂದು ಕರಿರೆವ್ವಾ ಕೋಲೆನ್ನ ಕೋಲೆ॥

ಅಂಬಿಗರ ದಂಪತಿಗಳ ಅಕ್ಕರೆಯ ಮಗಳಾಗಿ ಗಂಗಾ ಬೆಳೆದು ನಿಲ್ಲುತ್ತಾಳೆ ನೋಡುಗರ ಕಣ್ಮನ ಸೆಳೆಯುವಂತ. ಗಿರಿರಾಜ ಈ ಮೊದಲೇ ಗೌರಿಯನ್ನು ಶಿವನಿಗೆ ಧಾರೆ ಎರೆದು ಕೊಟ್ಟಿರುತ್ತಾನೆ ಎಂದು ಹೇಳುವ ಮದುವೆ ಸಂಭ್ರಮದ ನುಡಿಗಳನ್ನು ಒಂದು ತ್ರಿಪದಿಯಲ್ಲಿ ಹಿಡಿದಿಟ್ಟಿದ್ದಾರೆ.

(ಸಂಗ್ರಹ : ವಿಶ್ವಕೋಶ ಸಂಪುಟ ಐದು ಪುಟ ೮೭೯.)

'ಬಂಧು ಬಳಗಕೂಡಿ ಮಂದಿ ಮಕ್ಕಳ ಬರಸಿ
ಮದವಿ ಮಾಡ್ಯಾರ ಮಗಳೀಗಿ । ಸಾಕ್ಷಾತ್
ಸಿರಿಗೌರಿನ ಕೊಟ್ಟ ಶಿವನೀಗೆ'॥

ಮನೆಯಲ್ಲಿ ಮಡದಿ ಇದ್ದಾಗ್ಯೂ ಶಿವನು ನಂದಿಯನೇರಿ ನದಿಯ ದಡಕ್ಕೆ ಹೋಗುತ್ತಾನೆ. ಅಲ್ಲಿ ಗಂಗೆಯನ್ನು ನೋಡುತ್ತಾನೆ. ಅವಳೊಂದಿಗೆ ಸರಸ ಸಲ್ಲಾಪ ನಡೆಸುತ್ತಾನೆ. ವಯಸ್ಸಿಗೆ ಬಂದ ಹೆಣ್ಣು ಹೀಗೆ ಒಂಟಿಯಾಗಿರಬಾರದು; ಸೂಚ್ಯವಾಗಿ ಮದುವೆಯಾಗ ಬೇಕೆಂದು ಸಊಚಿಸುತ್ತಾನೆ. ಮಾತ್ರವಲ್ಲದೆ ತನ್ನ ಮಡದಿಯಾಗುವಂತೆ ಕೇಳಿಕೊಳ್ಳುತ್ತಾನೆ. ಅಷ್ಟೇ ಅಲ್ಲ ತನಗೆ ಯಾವ ರಂಬೆಯಿಲ್ಲ' ಹೆಂಡತಿಯಿಲ್ಲವೆಂದು ಸುಳ್ಳು ಪ್ರಮಾಣಮಾಡಿ ಜಡೆಯಲ್ಲಿಟ್ಟುಕೊಮಡು ಮನೆಗೆ ಕರೆದುಕೊಂಡೇ ಬರುತ್ತಾನೆ. ಈ ವಿಷಯವು ಗಿಳಿಯ ಮೂಲಕ ಗೌರಿಗೆ ಗೊತ್ತಾಗುತ್ತದೆ. ಗಂಡ ತನ್ನ ಮೇಲಫನ್ನ ಸವತಿಯ ತರುವ ಸಂಗತಿ ತಿಳಿದು ಕಿಡಿ ಕಿಡಿಯಾಗುತ್ತಾಳೆ. ಉದ್ದೇಗಕ್ಕೋಳಗಾಗುತ್ತಾಳೆ ಇಂಥ ಸಂಧರ್ಭದಲ್ಲಿ ತನ್ನ ಅಣ್ಣನಿಂದ ಏನಾದರೂ ಸಾಂತ್ವನ ಸಿಗಬಹುದೆಂಬ ಭರಗವಸೆಯೆಂದ ತವರಿಗೆ ಬರುತ್ತಾಳೆ. ತನ್ನ ಅಸಮಾಧಾನಕ್ಕೆ ಕಾರಣವಾದ ವಿಷಯವನ್ನು ಅಣ್ಣನಿಗೆ ನೇರವಾಗಿ ತಿಳಿಸದೆ ಕನಸಿನ ರೂಪದಲ್ಲಿ ಹೀಗೆ ವ್ಯಕ್ತಪಡಿಸುತ್ತಾಳೆ.

ಕೆರಿ ಮ್ಯಾಲ ಕೆರಿ ಹುಟ್ಟಿ ಕೆರಿ ಮ್ಯಾಲ ಮರಹುಟ್ಟಿ
ಮರದ ಮ್ಯಾಲೊಬ್ಬ ಬಲಿಹಾಕಿ ಕೋಲ ॥
ತಂಗಿಯ ಕನಸಿನ ಶಕುನದ ಅರ್ಥವನ್ನು ಅಣ್ಣ ಬಿಡಿಸಿ ತಿಳಿಸಿ ಹೇಳುತ್ತಾನೆ.
ಕೇರಿಯಂದರ ಶಿವರಾಯ ಮರ ಅಂದರ ಜಡೆಗೋಳ
ಬಲಿ ಅಂದರ ಬಳಗ ಶ್ರೀ ಗಂಗಾ ಕೋಲ॥

ತಂಗಿ ಹೀಗೆ ಅನಿರೀಕ್ಷಿತವಾಗಿ ತವರಿಗೆ ಬಂದ ಕಾರಣ, ಅವಳ ಮನದ ಉಮ್ಮಳ, ನೋವನ್ನು ಗುರುತಿಸುತ್ತಾನೆ. ಆಗ ಅವಳ ಸಮಾಧಾನಕ್ಕಾಗಿ ಲೋಕಾರೂಢಿಯ ನಾಲ್ಕು ಮಾತುಗಳನ್ನು ಹೇಳುತ್ತಾನೆ. ನೀನು ದುಃಖಿಸಬೇಡ ಇದೇನು ಅಂಥ ದೊಡ್ಡ ಸಂಗತಿಯಲ್ಲ ಹೊಸ ವಿಷಯವೇನಲ್ಲ.

ದೇಶ ಅಳೋವರಿಗಿ ಏಸೊಂದು ಹೆಂಡರು
ನಿನ್ನಗ್ಯಾಕ ತಂಗಿ ಪರದುಃಖ ಕೋಲ॥

ಅಣ್ಣ ತನ್ನ ಸಹಾಯಕ್ಕೆ ಬರುತ್ತಾನೆ, ತನ್ನ ಪರವಾಗಿ ನಿಲ್ಲುತ್ತಾನೆ. ಗಂಡನಿಗೆ ಬುದ್ಧಿವಾದ ಹೇಳುತ್ತಾನೆ. ಎಂಬ ಭರವಸೆಯನ್ನಿಟ್ಟುಕೊಂಡು ಬಂದವಳಿಗೆ ತನ್ನಣ್ಣನೂ ಗಂಡನಂತೆ ಒಬ್ಬ ಪುರುಷನೇ ಆಗಿರುವನೆಂಬ ಕಟುಸತ್ಯದ ಅರಿವಾಗುತ್ತದೆ. ಒಂದು ಕ್ಷಣವೂ ಅಲ್ಲಿರದೇ ತನ್ನ ಗಂಡನ ಮನೆಗೆ ಹೊರಟು ಬರುತ್ತಾಳೆ.

ಬಹುಪತ್ನಿತ್ವ ಒಪ್ಪಿತವಿದ್ದ ಸಮಾಜದಲ್ಲಿ ಪುರಾಣ ಪುರುಷರು, ರಾಜ ಮಹಾರಾಜರು, ಅಧಿಕ ಸಂಖ್ಯೆಯಲ್ಲಿ ಪತ್ನಿಯನ್ನು ಹೊಂದಿದ ಬಗ್ಗೆ ದಾಖಲೆಗಳಿವೆ. ರಾಜ್ಯ ವಿಸ್ತರಣೆಗಾಗಿ, ಆಸ್ತಿಗಾಗಿ ಸಂತಾನಕ್ಕಾಗಿ ಹೀಗೆ ಹಲವಾರು ಕಾರಣಗಳ ಹಿನ್ನೆಲೆಯಲ್ಲಿ ಪುರುಷರು ಪೋಷಿತ ಮತ್ತು ಅಪೋಷಿತ ನೆಲೆಯಲ್ಲಿ ಹಲವಾರು ಹೆಂಡಂದಿರನ್ನು ಮತ್ತು ಸೊಳೆಯರನ್ನು ಹೊಂದಿರುವುದು ಗೌರವದ–ಪ್ರತಿಷ್ಠೆಯ–ಕುರುಹು ಆಗಿತ್ತು ಅದನ್ನು ಹೆಂಡತಿಯಾದವಳು ಸಹಿಸುವುದು ಅವಳೊಂದಿಗೆ ಅನುಸರಿಸಿಕೊಂಡು ಹೋಗುವುದು ಅನಿವಾರ್ಯವಾಗಿತ್ತು. ವೈಯಕ್ತಿಕವಾಗಿ, ಕೌಟುಂಬಿಕವಾಗಿ ಘನತೆ ಗೌರವದ ಪ್ರತೀಕವಾಗಿತ್ತು. ಹೀಗೆ ತನ್ನ ಪಾಲಿಗೆ ಬಂದ ಬದುಕಿಗೇ ಅನಿವಾರ್ಯವಾಗಿ ಬದ್ಧಳಾಗಿರುವ ಗೃಹಿಣಿಯ ದ್ವಂದ್ವದ ಚಿತ್ರಣವು ಸ್ವಾಭಾವಿಕವಾಗಿ ಬಂದಿದೆ.

ಗಂಗೆ–ಗೌರಿಯರು ಶಿವನ ಹೆಂಡತಿಯರೇ ಎಂದು ಹೇಳುವುದು ಲೋಕರೂಢಿ, ಆದರೆ ಗೌರಿಗೆ ಸಿಗುವಷ್ಟು ಸಾಮಾಜಿಕ ಸ್ಥಾನ–ಮಾನ ಗಂಗೆಗೆ ಸಿಗುವುದಿಲ್ಲ ಅದಕ್ಕೆ ಕಾರಣ ಗೌರಿ ಸಾಮಾಜಿಕ ವ್ಯವಸ್ಥೆಗೆ ಒಳಪಟ್ಟು ಮದುವೆಯಾದವಳು ಆದರೆ ಗಂಗೆ ಶಿವನ ಬೆನ್ನುಹತ್ತಿ ಬಂದವಳು, ಸಾಮಾಜಿಕ ಮುದ್ರೆ (ಮದುವೆ) ಇಲ್ಲದವಳೆಂದು ಹೇಳುವ (ಜನಪದ ಕವಯಿತ್ರಿಯ ಸಾಮಾಜಿಕ ಪ್ರಜ್ಞೆ ಗಮನಾರ್ಹವಾದದು) ನುಡಿಗಳು ಇಂತಿವೆ.

ಅರಸಿನ ಹಚ್ಚಿಲ್ಲಲೆ ಸರಸಿ ನೀ ಕುಂತಿಲ್ಲಲೆ
ಅರಸೆಂಬ ಗುರುತ ನಿನಗಿಲ್ಲೆಲೆ ಸುವ್ವಿ॥
ಕಾಟ ಕಬಲಗಿತ್ತಿ ಎನ್ನ ಸರಿಯೇನ ?

ಜನಪದ ಕವಯಿತ್ರಿಯು ಸಾಮಾಜಿಕ ಮೌಲ್ಯಗಳಲ್ಲಿ ಒಂದಾದ 'ಮದುವೆ' ಪ್ರಮುಖ ಮೌಲ್ಯವೆಂದು ಒತ್ತಿ ಹೇಳಿರುವುದು ಗಮನಾರ್ಹವಾದುದು.

ಸಾಮಾಜಿಕ ಮುದ್ರೆ ಇದ್ದ ಹೆಂಡತಿಗೆ ಸಮಾಜದಲ್ಲಿ ದೊರೆ ಯುವ ಸ್ಥನ–ಮಾನ, ನ್ಯಾಯೋಚಿತವಾದ ಹಕ್ಕು ಸಾಮೂಹಿಕ ಸಾಮಾಜಿಕ ಮುದ್ರೆ ಇಲ್ಲದ ಹೆಣ್ಣಿಗೆ ಇರುವುದಿಲ್ಲ ವೈಯಕ್ತಿಕ ಮತ್ತು ಸಾಮಾಜಿಕ ಹಕ್ಕುಗಳಿಂದ ವಂಚಿತಳಾಗುತ್ತಾಳೆ. ಅದರಂತೆ ಸಾಮಾಜಿಕ ಮೌಲ್ಯಗಳನ್ನು ಬದಿಗೊತ್ತಿ, ಧಿಕ್ಕರಿಸಿ, ಸಮಾಜದಲ್ಲಿ ಸಮಾಧಾನದಿಂದ ಬದುಕುವುದು ಕಷ್ಟ.

ಸಮಾಜ ಅಂಥವರನ್ನು ನೆಮ್ಮದಿಯಿಂದ ಜೀವಿಸಲು ಬಿಡುವುದಿಲ್ಲ. ಇದೇ ಮೊದಲಾದ ಹಲವಾರು ವಿಷಯಗಳು ಸೂಕ್ಷ್ಮ ಭಾವನೆಗಳು ವ್ಯಕ್ತವಾಗುತ್ತವೆ.

ಮದುವೆ ವಿಷಯದಲ್ಲಿ ಸಾಮಾಜಿಕ ನಿಯತ್ತು ಹೆಣ್ಣಿಗೆ ಮಾತ್ರ ಇದ್ದರೆ ಸಾಲದು, ಅದು ಪುರುಷನಿಗೂ ಇರಬೇಕು. 'ಒಬ್ಬ ಹೆಂಡತಿ ಇದ್ದಾಗಲೂ ಕಾರಣವಿಲ್ಲದೆ ಮತ್ತೊಬ್ಬಳನ್ನು ಬಯಸುವುದು, ತರುವುದು ಒಳ್ಳೆಯದಲ್ಲಿ ಕಂಡ-ಕಂಡ ಹೆಣ್ಣಿಗೆಲ್ಲಾ ಬಾಯಿ ಬಿಡಬಾರದು ಜನ-ಮನ ಮೆಚ್ಚುವಂತೆ ಇರಬೇಕು ಪ್ರಪಂಚದಲ್ಲಿ ಎಂದು ನಾರದ ಮತ್ತು ಶಿವನ ಸಂಭಾಷಣೆಯಲ್ಲಿ ಮನೋಜ್ಞವಾಗಿ ನಿರೂಪಿತವಾಗಿದೆ;

ಶಿವ : ನಾರಂದ ಮುನಿ ಕೇಳು ಕಾಡಾಡಿಸುವಳು
ಜೋಡಿಲ್ಲದ ಇರುತಾಳ ದಾರ ಮಗಳು ಇವಳು
ಮಾಡಿನೊಳಗಿನ ಮೂಡ ಚಂದ್ರಕಳೆಯವಳು
ಗೋಡಬಾರದಿವಳ ಪಾಪಿ ದೃಷ್ಟಿಯವಳು ॥

ನಾರಾಂದ: ಬ್ಯಾಡಯ್ಯ ಪರ ಹೆಣ್ಣ ಮಾಡಿಕೊಂಬುವದು
ಮಾಡಿಕೊಂಡರ ಮುಂದ ಕದನ ಹೂಡುವದು
ಜೋಡಿ ಹೆಂಡರ ಕೈಲೆ ತಿವಿಸಿಕೊಂಬುವದು
ಪಾಡಲ್ಲ ಪಳ್ಳಿ ಪಟ್ಟಣದೊಳಗ ಮುಳ್ಳುವುದು ॥

ಆನಹರ್ಷ ಬಿಡಬೇಡ ಕಂಡ ಸ್ತ್ರೀಯರಿಗೆ
ಮನ ಮೆಚ್ಚಿ ಇರಬೇಕ್ರಿ ಮೂರು ಜಗದೊಳಗೆ
ಮನ ಮುನಿಸು ಬೇಡಯ್ಯ ನಮ್ಮ-ನಿಮ್ಮಗೆ

ಎಂದು ಶಿವನಿಗೆ ವಿನಯದಿಂದ ತಿಳಿಹೇಳುತ್ತಾನೆ. ಸಲುಗೆಯ ಗೆಳೆಯನಂತೆ ಇಲ್ಲ ಬಂದಿರುವ ಉಚಿತಾನುಚಿತ ನೀತಿ ಜ್ಞಾನದ ವಿಷಯ ಪ್ರತಿಪಾದನೆಯು, "ಮಿತ್ರಸಂಮಿತ ಬೋಧನೆ ಜನಪದ ಕವಯಿತ್ರಿಯ ಲೋಕಜ್ಞಾನ ಮತ್ತು ಪ್ರತಿಭೆಗೆ ನಿದರ್ಶನವಾಗಿದೆ. ನಾರಂದನ ಮಾತಿಗೆ ಪ್ರತಿಯಾಗಿ ಶಿವನು ತಾನು ಎಂಥವನು, ಗಂಗೆಯನ್ನು ತರುವ ಔಚಿತ್ಯ ಉದ್ದೇಶ ಕುರಿತಂತೆ ಹೀಗೆ ಹೆಳುತ್ತಾನೆ;[೧೪]

"ಮನ ಮುನಿಸು ಅದು ಏಕೆ ಎನ್ನುವನು
ಸನ್ಯಾಸಿ ಶಿವನು ನಾನು ಅಲ್ಲೇನು ?
ಚಿಲ್ಲಾಳಕ ಗಂಗೀನ ಗೌರೀನ ಎಡಕೆ ತಂದೀಮನಿ
ನೆಲ ನೀರು ಬೇಕೆಂದು ದೇಶ ದೇಶ ತಿರುಗೀನಿ
ನಾಡನಾಡೆಲ್ಲ ಹುಡಕೂತ ಹೋಟೀನಿ
ಜಗಜಗನೆ ಬಾ ರಮಣಿ ತನುವ ತೋರೆನಗೆ
ಜಲಜಾಕ್ಷಿ ಬಾ ಮದನೆ ಮನವ ಕೊಡೆನಗೆ"

ಲೋಕದ ಮಾನವರಂತೆ ತನ್ನ ನಡವಳಿಕೆ-ವರ್ತನೆ ತೋರಿದರೂ ತಾನು ಮಾತ್ರ ಸಂಸಾರಿಯಲ್ಲ; ಸನ್ಯಾಸಿ ತನ್ನ ಇರುವು ನೀರೋಳಗಿರ್ದ ಕಮಲದೆಲೆಯಂತೆ ಲೋಕವ್ಯವಹಾರಕ್ಕೆ ಅವರಿಬ್ಬರೂ ಬೇಕೆಂದು ದೇಶ-ದೇಶ ಸುತ್ತಾಡಿದ್ದೇನೆ. ಕಷ್ಟಪಟ್ಟಿದ್ದೇನೆ. ಒಬ್ಬಳು ನೆಲದಾಯಿನಿ ಮತ್ತೊಬ್ಬಳು

ಜಲದಾಯಿನಿ. ಅವರಿಬ್ಬರು ಪರಸ್ಪರ ಸಹಕಾರ ಮನೋಭಾವನೆಯಿಂದ ಇದ್ದರೆ ಮಾತ್ರ ಜೀವರಾಶಿ ಬದುಕುವುದು. ಅದಕ್ಕಾಗಿ ಗಂಗೀನ ತಂದು ಜಡೆಯೊಳಗಿಟ್ಟ' 'ಗವರೀನ ತಂದೆ ತೊಡೆಯಮ್ಯಾಗ ಇಟ್ಟ' ಒಬ್ಬಳು ಬೌದ್ಧಿಕ ಸಂಕೇತ. ಮತ್ತೊಬ್ಬಳು ಭೋಗದ ಸಮೃದ್ಧಿಯ ಸಂಕೇತ. ಗಂಗೆ–ಗೌರಿ ಇಬ್ಬರೂ ಲೋಕ ಚಾಲನೆಗೆ ಅಗತ್ಯ ಅನಿವಾರ್ಯರು.

'ನನಗೆ ಇಬ್ಬರು ಹೆಂಡಿರು ಸರಿಸಮನೆಂದ
ಕುಭಾವನೆ ಇದ್ದರ ಸುಟ್ಟ ಹೋಗಲಿಯೆಂದ'॥

ಎಂದು ತನಗೆ ತಾನೇ ಶಾಪಹಾಕಿಕೊಳ್ಳುತ್ತಾನೆ. ಒಟ್ಟಾರೆ ಗಂಗೆ–ಗೌರಿಯರ ಕಥನಕಾವ್ಯಗಳಲ್ಲಿ ವ್ಯಕ್ತಿವಾಗಿ–ಅವ್ಯಕ್ತವಾಗಿ ಬಿಂಬಿತವಾಗಿರುವ ಗಮನಾರ್ಹ ಅಂಶಗಳೆಂದರೆ; ಪಂಚಭೂತಾತ್ಮನಾದ ಶಿವನ ಸಾಕಾರನಿರಾಕಾರತತ್ವ ಪಂಚಭೂತಗಳಲ್ಲಿ ಸಮತೋಲನದ ಅವಶ್ಯಕತೆ ಮತ್ತು ಯಾವುದೇ ಉತತ್ತಿ ಸಂಘರ್ಷದಿಂದಲೇ ಆಗುತ್ತದೆ. ಇವೇ ಮೊದಲಾದವು ಅದನ್ನರಿತ ಜನಪದರು ನಿಸರ್ಗದ ಜೊತೆಗಿನ ಬದುಕನ್ನು ಯಥಾವತ್ತಾಗಿ ಸ್ವೀಕರಿಸಿ ನಡೆದರು ಅದು ಪರಂಪರೆಯಾಗಿ ಮುಂದುವರೆಯಿತು.[೧೫]

ಉತ್ತರ ಕರ್ನಾಟಕದ ಜನಪದ ಸಾಹಿತ್ಯ, ಲೇ: ಎಂ.ಎಂ. ಕಲಬುರ್ಗಿ,
ಸೀಗಿ–ಗೌರಿ ಹಾಡುಗಳು. ಡಾ. ಶಕುಂತಲಾ ಸಿದ್ಧರಾಮ ದುರಗಿ

೭. ಸಮಾರೋಪ

ಜನಪದ ಸಂಸ್ಕೃತಿಯು ತನ್ನದೇ ಆದ ಅನನ್ಯತೆ ಪಡೆದು ಕೊಂಡಿದೆ. ಇಲ್ಲಿ ಕಂಡು ಬರುವ ಆಚರಣೆಗಳು, ನಂಬಿಕೆ, ಹಬ್ಬ ಹರಿದಿನಗಳು ವೈಶಿಷ್ಟ್ಯದಿಂದ ಕೂಡಿವೆ. ಮಣ್ಣಿನ ಸಂಸ್ಕೃತಿಯನ್ನು ಜನಪದದಲ್ಲಿ ಕಾಣಬಹುದಾಗಿದೆ. ಹಲವಾರು ವೈವಿದ್ಯಮಯವಾದ ಜನಪದ ಆಚರಣೆಗಳಲ್ಲಿ ಸೀಗಿ-ಗೌರಿ ಕುರಿತು ಈ ನನ್ನ ಸಂಶೋಧನ ಸ್ವಯಂ ಪ್ರಭಂದಲ್ಲಿ ಹಲವಾರು ವಿಷಯಗಳು ಕಂಡು ಕೊಳ್ಳಲು ಸಾಧ್ಯವಾಗಿದೆ.

ಈಗಾಗ ಆಧುನಿಕತೆಯ ಭರದಲ್ಲಿ ಹಲವು ಆಚರಣೆಗಳು ಕಣ್ಮರೆಯಾಗುತ್ತಿವೆ. ಆ ಹಿನ್ನಲೆಯಲ್ಲಿ ನನ್ನ ಈ ಅಧ್ಯಯನ ಸೀಗಿ-ಗೌರಿ ಆಚರಣೆಯನ್ನು ಉಳಿಸಿಕೊಳ್ಳುವ ಅಳಿಲು ಪ್ರಯತ್ನವೆಂದು ಅಂದು ಕೊಂಡಿದ್ದೇನೆ. ಹೈದ್ರಾಬಾದ ಕರ್ನಾಟಕದ ಪ್ರದೇಶದಲ್ಲಿ ಕಂಡು ಬರುವ ಈ ಆಚರಣೆ ಹಳ್ಳಿಗರ-ಕೃಷಿಕರ ಆಚರಣೆಯಾಗಿದೆ. ಸಂಸ್ಕೃತಿಯೊಂದರ ಉಗಮಕ್ಕೆ ಮೂಲರಾದ ಮಹಿಳೆಯರು ಸೀಗಿ-ಗೌರಿ ಆಚರಣೆಯಲ್ಲಿ ಪ್ರಧಾನ ಪಾತ್ರ ವಹಿಸುತ್ತಾರೆ. ಶಕ್ತಿದೇವತೆಯಾದ ಗೌರಿಯ ಜೀವನ ವೃತಾಂತವನ್ನು ಪ್ರತಿಬಿಂಬಿಸುವಂತೆ ಈ ಗೌರಿಯ ಕುರಿತು ಹಾಡುಗಳು ರೂಪು ಪಡೆದಿವೆ. ಕ್ಷೇತ್ರಕಾರ್ಯದ ಮೂಲಕ ಸಾಕಷ್ಟು ಹಾಡುಗಳನ್ನು ಸಂಗ್ರಹಿಸುವುದರ ಮೂಲಕ ಸೀಗಿ-ಗೌರಿಯನ್ನು ನನ್ನದೇ ಆದ ದೃಷ್ಠಿಕೋನದಲ್ಲಿ ವಿಶ್ಲೇಷಿಸಲು ಪ್ರಯತ್ನಿಸಿದ್ದೇನೆ.

ಈ ನನ್ನ ಅಧ್ಯಯನ ಜನಪದ ಅಧ್ಯಯನದ ನೆಲೆಗಳಲ್ಲಿ ಒಂದು ಎಂದು ಅಂದುಕೊಂಡಿದ್ದೇನೆ. ಸೀಗಿ ಗೌರಿ ಹಾಡುಗಳಲ್ಲಿ ಕಂಡುಬರುವ ವಿವಿಧ ಸನ್ನಿವೇಶಗಳ ಕುರಿತು ಈ ಅಧ್ಯಯನದಲ್ಲಿ ವಿವೇಚಿಸಲಾಗಿದೆ. ಯಾವುದೇ ಮನರಂಜನೆಯ ಮಾಧ್ಯಮಗಳು ಇಲ್ಲದೆ ಇರುವ ಪ್ರಾಚೀನ ಕಾಲದಲ್ಲಿ ಹೆಣ್ಣು ಮಕ್ಕಳು ತಮ್ಮ ಮನರಂಜನೆಯನ್ನು ತಮ್ಮ ಮನೆಯ ಅಂಗಳದಲ್ಲಿಯೇ ಹಾಡಿ ಕುಣಿದು ಕುಪ್ಪಳಿಸಿ ಮನರಂಜನೆ ಪಡೆಯುತ್ತಿದ್ದರು ಹೆಣ್ಣು ಮಕ್ಕಳ ಸಡಗರ-ಆನಂದ-ಹಾಡು-ಪಾಡು ಈ ಸೀಗಿ ಮತ್ತು ಗೌರಿ ಹಬ್ಬದ ಆಚರಣೆಗಳಲ್ಲಿ ಕಾಣಲು ಸಾಧ್ಯ ಸೀಗಿ ಮತ್ತು ಗೌರಿ ಹಬ್ಬದ ಸಂದರ್ಭದಲ್ಲಿ ಜನರು ಬಳಸುವ ವಿವಿಧ ಪರಿಕರಗಳು-ವಸ್ತುಗಳನ್ನು ಗಮನಿಸಿ ಆ ಮೂಲಕ ಹೇಗೆ ಕೃಷಿಕ ಮಹಿಳೆಯರು ತಮ್ಮ ಬದುಕನ್ನು ಕಟ್ಟಿಕೊಂಡಿದ್ದಾಖುಎ ಎಂದು ಕಂಡು ಕೋಳ್ಳಲಾಯಿತು ಸೀಗಿ ಮತ್ತು ಗೌರಿಯ ಮಹತ್ವವನ್ನು ಅರಿಯಲಾಯಿತು ಪೌರಾಣಿಕವಾಗಿ ಕಂಡು ಬರುವ ಗೌರಿಯ ವೃತಾಂತವನ್ನು ಈ ~~ನನ್ನ~~ ಅಧ್ಯಯನದಲ್ಲಿ ಗಮನಿಸಲಾಗಿದೆ.

ಯಾವುದೇ ಒಂದು ಆಚರಣೆ ಸುಮ್ಮನೆ ಹುಟ್ಟಿ ಬೆಳೆದಿರುವುದಿಲ್ಲ ಅದಕ್ಕೆ ತನ್ನದೇ ಆದ ಒಂದು ಘಟನೆ ಅಡಕವಾಗಿರುತ್ತದೆ. ಆ ಘಟನೆಯ ಸುತ್ತ ಕಾಲದಿಂದ ಕಾಲಕ್ಕೆ ಹಲವಾರು ಘಟನೆಗಳು ಕೂಡಿಕೊಂಡು ಒಂದು ವಿಭಿನ್ನ ಹಾಗೂ ವಿಶಿಷ್ಟ ಆಚರಣೆಗಳು ರೂಪು ಪಡೆದಿರುತ್ತವೆ. ಸೀಗಿ ಮತ್ತು ಗೌರಿ ಹಬ್ಬದಾಚರಣೆಯ ಸಂಬಂಧದಲ್ಲಿ ಬಳಸುವ ಎಲ್ಲ ಪರಿಕರಗಳು ಪ್ರಕೃತಿದತ್ತವಾಗಿದ್ದು ವಿವಿಧ ಆಕರ ಪರಿಕರಗಳು ಸಹ ಪ್ರಕೃತಿ ಸಹಜವಾಗಿವೆ. ಇಲ್ಲಿ ಬಳಸುವ ಸೇಗಣಿ ಹೂವು, ಫಲ ಆಹಾರ ಮುಂತಾದವುಗಳ ಬಳಸುವಿಕೆ ನಮ್ಮನ್ನು ಪ್ರಾಚಿನ ಕಾಲದ ಸಂಸ್ಕೃತಿಯನ್ನು ತೆರೆದು ತೋರಿಸುತ್ತದೆ. ಅದೇಲ್ಲವನ್ನು ನನ್ನ ಈ ಅಧ್ಯಯನದಲ್ಲಿ ಗಮನಿಸಿದ್ದೇನೆ. ಸೀಗಿ ಮತ್ತು ಗೌರಿ ಹಬ್ಬದ ಆಚರಣೆಯ ವೈಜ್ಞಾನಿಕ ನೆಲೆ ಯಾವುದು ಎಂಬುದನ್ನು ಕಂಡು ಕೊಳ್ಳಬೇಕಾಗಿದೆ.

ಭಾರತೀಯ ನೇಲದಲ್ಲಿ ಸ್ತ್ರೀ ದೇವತೆಗೆ ಅದರದೆ ಯಾದ ಒಂದು ಹಿನ್ನಲೆ ಇದೆ ಸ್ತ್ರೀ ದೇವತೆಯ ಪ್ರತೀಕವಾಗಿಯೇ ಈ ಗೌರಿ ಹಬ್ಬವನ್ನು ಆಚರಣೆಗೆ ಬಂದಿದೆ.ಇಲ್ಲಿಯ ಘಟನಾವಳಿಯನ್ನು ನೋಡಿದಾಗ ಒಂದು ಕುಟುಂಬಲ್ಲಿ ನಡೆಯುವ ಪ್ರೀತಿ–ದ್ವೇಷ–ಹೊಟ್ಟಿಕಿಚ್ಚು ಎಲ್ಲವೂ ಗೌರಿ ಹಾಡುಗಳಲ್ಲಿ ಮಾಡಿ ಬಂದಿವೆ. ಅದನ್ನು ಸಹ ನನ್ನ ಅಧ್ಯಯನದಲ್ಲಿ ಕಂಡುಕೊಳ್ಳಲು ಪ್ರಯತ್ನಿಸಿದ್ದೇನೆ. ಸೀಗಿ ಮತ್ತು ಗೌರಿ ಎಂಬ ಇಬ್ಬರ ವ್ಯಕ್ತಿ ಚಿತ್ರಣಗಳು ಈ ಹಾಡುಗಳಲ್ಲಿ ಕಾಣಬಹುದಾಗಿದೆ.

ಶಕ್ತಿ ದೇವತೆಯನ್ನು ಪೂಜಿಸುವ ದಸಹರಾ ಹಬ್ಬದ ಸಂಧರ್ಭದಲ್ಲಿ ಬರುವ ಸೀಗಿ–ಗೌರಿ ಹಬ್ಬದಂದೆ ಬರುವುದರಿಂದ ಇದು ಸಹಚವಾಗಿಯೇ ಶಕ್ತಿ ದೇವತೆಯ ಆರಾಧನೆಯಾಗಿದೆ ಎಂಬುದನ್ನು ಈ ನನ್ನ ಅಧ್ಯಯನದಲ್ಲಿ ಕಂಡುಕೊಂಡಿದ್ದೇನೆ. ಸೀಗಿ ಗೌರಿ ಕುರಿತ ಹಾಡುಗಳು ಸ್ವರ–ಬದ್ದವಾಗಿ ಹಾಡಲಾಗುತ್ತದೆ. ಹೆಂಗೆಳೆಯರೆಲ್ಲರೂ ಸೇರಿ ಮನೆಮನೆಗೆ ಹೋಗಿ ಹಾಡುವ ಪರಿಪಾಠ ಸೌಹಾರ್ದತೆಯ ಸಂಕೇತವೆಂದೆ ಹೇಳಬಹುದು ಏಳು ದಿವಸದ ಆಚರಣೆ ಏಳು ವಿಶಿಷ್ಟ ಅರ್ಥವನ್ನು ಕೊಡುತ್ತವೆ. ಮಾನವನ ಬದುಕಿನ ಮರ್ಮವನ್ನು ಬೆಳವಣಿಗೆಯನ್ನು ಸೂಚಿಸುತ್ತವೆ. ಮನಷ್ಯನ ಬದುಕು ಸಂಕೀರ್ಣವಾಗಿದೆ ಆ ಸಂಕೀರ್ಣತೆಯನ್ನು ಸಾಹಸವನ್ನು ಈ ಗೌರಿ ಹುಣ್ಣಿಮೆಯ ದಿನದ ಆಚರಣೆಯಲ್ಲಿ ಕಾಣಬಹುದಾಗಿದೆ. ಈ ಅಂಶವನ್ನು ನನ್ನ ಅಧ್ಯಯನದಲ್ಲಿ ವಿವೇಚಿಸಿದ್ದೇನೆ.

ಬದುಕು ಬದಲಾದಂತೆ ಆಚರಣೆಗಳು ಬದಲಾಗುತ್ತ ಹೋಗುತ್ತದೆ. ಸೀಗಿ ಮತ್ತು ಗೌರಿ ಹಬ್ಬದ ಹಲವಾರು ಆಚರಣೆಗಳು ನಿಂತು ಹೋಗಿವೆ. ಅವುಗಳನ್ನು ಆಚರಿಸುವ ಬಿಡುವಾಗಲಿ ವ್ಯವಧಾನವಾಗಲಿ ಇಂದಿನ ಯಂತ್ರದ ಮಾನವರಿಗಿಲ್ಲ ಹಲವುಬಗೆಯ ಆಚರಣೆಗಳು ಇಂದು

ಮೂಲೆ ಗುಂಪಾಗಿದೆ. ಅವುಗಳಲ್ಲಿ ಸೀಗಿ-ಗೌರಿ ಹಾಡುಗಳು ಮತ್ತು ಆಚರಣೆ ಕೂಡ ಮೂಲೆ ಗುಂಪಾಗುತ್ತಿವೆ. ನಗರದ ಜನರು ಆಚರಣೆಗಳಿಂದ ದೂರ ಸರಿಯುತ್ತಿದ್ದಾರೆ. ಹಳ್ಳೀಯಲ್ಲಿ ಆಚರಿಸುವಂತವರರು ಸೆಗಣಿ ಬದಲಾಗಿ ಸೀಮೆಂಟನ್ನು ಬಳಸುತ್ತಿದ್ದಾರೆ. ಇವೆಲ್ಲವುಗಳನ್ನು ಈ ನನ್ನ ಅಧ್ಯಯನದಲ್ಲಿ ಗಮನಿಸಿದ್ದೇನೆ.

ಗೌರಿ ಹಾಡುಗಳಲ್ಲಿ ಶಿವ ಮತ್ತು ಗೌರಿಯ ಸಂವಾದದ ಹಾಡುಗಳು ಗಮನ ಸೆಳೆಯುವಂಥವಾಗಿವೆ. ಅವುಗಳ ಕುರಿತು ಚರ್ಚೆಯನ್ನು ಇಲ್ಲಿ ಮಾಡಲಾಗಿದೆ. ಕೇಳುಗರನ್ನು ತನ್ನೆಡೆಗೆ ಸೆಳೆಯುವ ಮಾಂತ್ರಿಕ ಶಕ್ತಿ ಆ ಹಾಡುಗಳಿಗಿವೆ ಗೌರಿಯ ಜೀವನವನ್ನು ಪ್ರಸಾರಗೊಳಿಸುವ ದೃಷ್ಟಿಯಿಂದಲೇ ಹಚ್ಚಿಕೊಂಡಂತಿವೆ ಈ ಹಾಡುಗಳು ಕಣ್ಮರೆ ಯಾಗುತ್ತಿರುವ ಇಂಥ ಆಚರಣೆಯ ಹಾಡುಗಳನ್ನು ಮುಂದಿನ ಪೀಳಿಗೆಯವರು ತೆಗೆದು ಕೊಂಡು ಹೋಗುವುದು ಮುಖ್ಯವಾಗಿವೆ ಹಾಗಾಗಿ ಇಂಥ ಅಧ್ಯಯನಗಳು ಇಂದು ವಿಶೇಷವಾಗಿವೆ ಎನ್ನಬಹುದು. ಕಥನ ಗೀತೆಗಳಂತೆ ಕೆಲವು ಹಾಡುಗಳು ಕಥೆಯನ್ನು ಸಾರುತ್ತದೆ. ಅವು ಇಂದಿಗೂ ಜನರನ್ನು ರಂಜಿಸುತ್ತವೆ. ಅವುಗಳ ಅಧ್ಯಯನ ಬಹು ಮುಖ್ಯವಾಗಿದೆ.

ಪ್ರಾದೇಶಿಕವಾಗಿ ಸಿಗುವಂತಹ ಸೀಗಿ-ಗೌರಿ ಹಾಡುಗಳು ತನ್ನ ಮಹತ್ವವನ್ನು ಸಾಂಸ್ಕೃತಿಕ ಸೌರವನ್ನು ತನ್ನ ಗರ್ಭದಲ್ಲಿ ಇಟ್ಟುಕೊಂಡಿವೆ. ಅವುಗಳು ಅಳಿದು ಹೋಗದೆ ಅವುಗಳ ಮಹತ್ವ ಅರಿತು ಅಧ್ಯಯನ ಕೈಗೊಳ್ಳುವುದು ಮುಖ್ಯವಾಗಿದೆ. ಸ್ಥೂಲವಾದ ಈ ನನ್ನ ಅಧ್ಯಯನ ಜನಪದೀಯ ಹಿನ್ನಲೆಯಲ್ಲಿ ನಡೆದಿದೆ. ಇದನ್ನು ಇನ್ನು ಬೇರೆ ಬೇರೆ ನೆಲೆಗಳಲ್ಲಿ ನೋಡಿ ಅಧ್ಯಯನ ಮಾಡುವುದು ಕೂಡ ಇಂದು ಮುಖ್ಯವಾಗಿದೆ.

ಒಟ್ಟಾರೆಯಾಗಿ ಈ ನನ್ನ ಅಧ್ಯಯನ ಸೀಗಿ-ಗೌರಿ ಹಾಡುಗಳ ಕುರಿತು ಒಂದು ಕಿರುನೋಟ ಮಾತ್ರ ಬೀರಿದೆ ಇದರ ಅಧ್ಯಯನ ಇನ್ನೂ ಆಳವಾಗಿ ನಡೆಯಬೇಕಾಗಿದೆ ಈ ಕಿರು ಸಂಪ್ರಬಂಧ ಕೇವಲ ಒಂದು ಪಕ್ಷಿನೋಟ ಮಾತ್ರವೆಂದೇ ನಾನು ಬಗೆದಿದ್ದೇನೆ.

ಅನುಬಂಧ

ಸೀಗಿ–ಗೌರಿ ಹಾಡುಗಳು

1. ಒಂದ ಸುತ್ತಿನ ಕ್ವಾಟಿ
ಅದರೋಳಗಾ ಕುಂತಾನ ಬಸವಾ
ಬಸವಗ ಬಸವೆನ್ನಿರಿ ಬಸವನ ಪಾದಕೆ ಶರಣೆನ್ನಿರಿ
ಹೋಗೆ ಹೊನ ಬಿಸಿಲೇ ಬಾರೇ ಬನ ಬಿಸಿಲೆ ?
ಅಲ್ಲಟ–ಪಲ್ಲಟ ಮಠಕ್ಹೋಗಿ
ಹೂಗಾರ ತೋಟಕ್ಹೋಗಿ
ಹೂವಾ ಕಡಿಯಾಕ

2. ಎರಡ ಸುತ್ತಿನ ಕ್ವಾಟೀ
ಅದರಾಗಾ ಕುಂತಾನ ಬಸವಾ
ಬಸವಗ ಬಸವೆನ್ನಿರಿ ಬಸವನ ಪಾದಕೆ ಶರಣೆನ್ನಿರಿ
ಹೋಗೆ ಹೋನ ಬಿಸಿಲೇ ಬಾರೆ ಒನ ಬಿಸಿಲೇ
ಅಲ್ಲಟ–ಪಲ್ಲಟ ಮಠಕ್ಹೋಗಿ
ಹೂಗಾರ ತೋಟಕ್ಹೋಗಿ
ಹೂವಾ ಕಡಿಯಾಕ

3. ಮೂರಾ ಸುತ್ತಿನ ಕ್ವಾಟೀ
ಅದರಾಗಾ ಕುಂತಾನ ಬಸವಾ
ಬಸವಗ ಬಸವೆನ್ನಿರಿ ಬಸವನ ಪಾದಕೆ ಶರಣೆನ್ನಿರಿ
ಹೋಗೆ ಹೊನ ಬಿಸಿಲೇ ಬಾರೆ ಒನ ಬಿಸಿಲೇ
ಅಲ್ಲಟ ಪಲ್ಲಟ ಮಠಕ್ಹೋಗಿ
ಹೂಗಾರ ತೊಟಕ್ಹೋಗಿ
ಹೂವಾ ಕಡಿಯಾಕ

4. ನಾಕ ಸುತ್ತಿನ ಕ್ವಾಟೀ
ಅದರಾಗಾ ಕುಂತಾನಾ ಬಸವಾ
ಬಸವಗ ಪಾದರೆ ನ್ನಿಂ ಹೋಗೆ ಹೋನ ಬಿಸಿಲೆ ಬಾರೇ ಒನ
ಬಿಸಿಲೇ
ಅಲ್ಲಟ ಪಲ್ಲಟ ಮಕ್ಹೋಗಿ
ಹೂಗಾರ ತೋಟಕ್ಹೋಗಿ
ಹೂವಾ ಕಡಿಯಾಕೆ

5. ಐದು ಸುತ್ತಿನ ಕ್ವಾಟೀ
ಅದರಾಗಾ ಕುಂತಾನಾ ಬಸವಾ
ಬಸವಗ ಬಸವೆನ್ನಿರಿ ಬಸವನ ಪಾದಕೆ ಶರಣೆನ್ನಿರಿ
ಹೋಗೆ ಹೊನಬಿಸಿಲೆ ಬಾರೆ ಒನ ಬಿಸಿಲೆ
ಅಲ್ಲಟ ಪಲಟ ಮಠಕ್ಹೋಗಿ
ಹೂಗಾರ ತೋಟಕ್ಹೋಗಿ
ಹೂ ಕಡಿಯಾಕೆ.

ವಕ್ತಾರರು: ಇಂದಿರಾಬಾಯಿ ದೆವೇಂದ್ರಪ್ಪಾ ನೌಬಾದೆ ಸಾ॥ ಹಲಬರ್ಗಾ ತಾ॥ ಭಾಲ್ಕಿ

ಸೀಗವ್ವನನ್ನು ಗಂಡನ ಮನಿಗೆ ಕಳುಹಿಸಿಕೊಡುವಾಗ ಹೇಳುವ ಹಾಡು

ನಮ್ಮ ಸೀಗಮ್ಮಗ ಹುಣ್ಣಿಮೆ ಮಾಡಿ
ಕಳುಹಿ ಕೊಡಿರಿ
ಒಂದು ಪುಡಿ ಕಟ್ಟೂತ
ಸೀತಾಗ ನೆನೆಯೂತ
ಶೀಲ ಗವರಿ ಶಿವ ಬಂದಾನ
ನಮ ಸೀಗಮ್ಮನ ಹುಣ್ಣೀಮೆ ಮಾಡಿ
ಕಳುಹಿ ಕೋಡಿರಿ ॥

ಎರಡ ಪುಡಿ ಕಟ್ಟೂತ
ಸೀತಾ ನೆನೆಯೂತ
ಶೀಲ ಗವರಿ ಶಿವ ಬಂದಾನ
ನಮ್ಮ ಸೀಗಮ್ಮಗ ಹುಣ್ಣಿಮೆ ಮಾಡಿ
ಕಳುಹಿ ಕೊಡಿರಿ ॥

ಮೂರ ಪುಡಿ ಕಟ್ಟೂತ
ಸೀತಾಗ ನೆನೆಯೂತ
ಶೀಲ ಗವರಿ ಶಿವ ಬಂದಾನ
ನಮ ಸೀಗಮ್ಮಗ ಹುಣ್ಣೀಮೆ ಮಾಡಿ
ಕಳುಹಿ ಕೋಡಿರಿ ॥

ನಾಕ ಪುಟಿ ಕಟ್ಟೂತ
ಸೀತಾಗ ನೆನೆಯೂತ
ಶೀಲ ಗವರಿ ಶಿವ ಬಂದಾನ
ನಮ್ಮ ಸೀಗಮ್ಮನ ಹುಣ್ಣಿಮೆ ಮಾಡಿ
ಕಳುಹಿ ಕೋಡಿರಿ ॥

ಐದ ಪುಡಿ ಕಟ್ಟೂತ
ಸೀತಾಗ ನೆನೆಯೂತ
ಶೀಲಗವರಿ ಶಿವ ಬಂದಾನ
ನಮ ಸೀಗಮ್ಮಗ ಹುಣ್ಣಿಮೆ ಮಡಿ
ಕಳುಹಿ ಕೊಡಿರಿ ॥

ವಕ್ತಾರರು: ಜ್ಯೋತಿ ವೈಜಿನಾಥ ಶಿವಪೂಜೆ ಸಾ॥ ಧನ್ನೂರಾ (ಎಚ್) ತಾ॥ ಭಾಲ್ಕಿ ಜಿ॥ ಬೀದರ.

ರಾಜರ ಮನೆಯ ಮುಂದೆ

ನಮ್ಮ ರಾಜರ ಮನಿಮುಂದ ಖಾರಿಕ ಗಿಡ ಹುಟ್ಟಿ
ಖಾರಿಕಗೊಲ್ಲೆ ಕಡಿಲಕ ಹೋದರ ಮುಳ್ಳೆ ಮುರಿತಲ್ಲೆ
ಮುಳ್ಳು ಮುರಿಲಾಕ ರಾಜೇರು ಬರುಲಾಕ
ಮುಳ್ಳು ಮುರಿಲಾಕ ರಾಜೇರು ಬರುಲಾಕ
ಕಳಸಲಿಂಬೆ ಕಳವೆ ಹೂವ ನಮ್ಮ ರಾಜೇರ ಗವರಿಗೆ
ಕಳಸಲಿಂಬೆ ಕಳವೆ ಹೂವ ನಮ್ಮ ರಾಜೇರ ಗವರಿಗೆ

ನಮ್ಮ ರಾಜರ ಮನಿಮುಂದ ಬಾದಮ ಗಿಡ ಹುಟ್ಟಿ
ಬಾದಮಗೊಲ್ಲೆ ಕಡಿಲಕ ಹೋದರ ಮುಳ್ಳೆ ಮುರಿತಲ್ಲೆ
ಮುಳ್ಳು ಮುರಿಲಾಕ ರಾಜೇರು ಬರುಲಾಕ
ಮುಳ್ಳು ಮುರಿಲಾಕ ರಾಜೇರು ಬರುಲಾಕ
ಕಳಸಲಿಂಬೆ ಕಳವೆ ಹೂವ ನಮ್ಮ ರಾಜೇರ ಗವರಿಗೆ
ಕಳಸಲಿಂಬೆ ಕಳವೆ ಹೂವ ನಮ್ಮ ರಾಜೇರ ಗವರಿಗೆ

ನಮ್ಮ ರಾಜರ ಮನಿಮುಂದ ಇಲಾಂಚೆ ಗಿಡಹುಟ್ಟಿ
ಇಲಾಂಚೆಗೊಲ್ಲೆ ಕಡಿಲಕ ಹೋದರ ಮುಳ್ಳೆ ಮುರಿತಲ್ಲೆ
ಮುಳ್ಳು ಮುರಿಲಾಕ ರಾಜೇರು ಬರುಲಾಕ
ಮುಳ್ಳು ಮುರಿಲಾಕ ರಾಜೇರು ಬರುಲಾಕ
ಕಳಸಲಿಂಬೆ ಕಳವೆ ಹೂವ ನಮ್ಮ ರಾಜೇರ ಗವರಿಗೆ
ಕಳಸಲಿಂಬೆ ಕಳವೆ ಹೂವ ನಮ್ಮ ರಾಜೇರ ಗವರಿಗೆ

ನಮ್ಮ ರಾಜರ ಮನಿಮುಂದ ಲಿಂಬೆ ಗಿಡಹುಟ್ಟಿ
ಲಿಂಬೆಗೊಲ್ಲೆ ಕಡಿಲಕ ಹೋದರ ಮುಳ್ಳೆ ಮುರಿತಲ್ಲೆ
ಮುಳ್ಳು ಮುರಿಲಾಕ ರಾಜೇರು ಬರುಲಾಕ
ಮುಳ್ಳು ಮುರಿಲಾಕ ರಾಜೇರು ಬರುಲಾಕ
ಕಳಸಲಿಂಬೆ ಕಳವೆ ಹೂವ ನಮ್ಮ ರಾಜೇರ ಗವರಿಗೆ
ಕಳಸಲಿಂಬೆ ಕಳವೆ ಹೂವ ನಮ್ಮ ರಾಜೇರ ಗವರಿಗೆ

ನಮ್ಮ ರಾಜರ ಮನಿಮುಂದ ಬಾಳೆಯ ಗಿಡ ಹುಟ್ಟಿ
ಬಾಳೆಯಗೊಲ್ಲೆ ಕಡಿಲಕ ಹೋದರ ಮುಳ್ಳೆ ಮುರಿತಲ್ಲೆ
ಮುಳ್ಳು ಮುರಿಲಾಕ ರಾಜೇರು ಬರುಲಾಕ
ಮುಳ್ಳು ಮುರಿಲಾಕ ರಾಜೇರು ಬರುಲಾಕ
ಕಳಸಲಿಂಬೆ ಕಳವೆ ಹೂವ ನಮ್ಮ ರಾಜೇರ ಗವರಿಗೆ
ಕಳಸಲಿಂಬೆ ಕಳವೆ ಹೂವ ನಮ್ಮ ರಾಜೇರ ಗವರಿಗೆ

ಹೊನ್ನಖೋಡಿನ ಎಮ್ಮೆ

ಕೆಂಪ ಮಡ್ಡಿಯ ಮ್ಯಾಲ ಕೆಂಪೆತ್ತು ಕಾಯುವ
ಕೆಂಪ ಚಲ್ಲೋಣಿ ಅವರಂಗ ಕೋಲೆ
ಕೆಂಪಾನೆ ಚಲ್ಲೋಣಿ ಅವರಂಗ ಸಂಗಡ
ಸರಿ ಸರಿ ಬಳಿಯೇ ಒಡಕೊಂಡಿ ಕೋಲೆ

ನಿನ್ನ ಇಡಸಿದ ಬಳಿ ಹೊನ್ನ-ಹೂವಿನ ಬಳಿ
ಏನೇನು ಮಾಡಿ ಒಡಕೊಂಡಿ ಕೋಲೆ
ಅಣ್ಣನ ತೋಟಕ ಹೊಕಲ್ಯಾಡಿ ಹೋದರ
ಹೊನ್ನ ಖೋಡ್ಯಾಮ್ಮಿ ಹೊಡದಿತ್ತಕೋಲೆ

ಆ ಎಮ್ಮಿ ಹೊಡಿಯಲಿ ಆ ಎಮ್ಮಿ ಬಡಿಯಲಿ
ಆ ಎಮ್ಮಿ ಖೊಡ ಕೊಯಸಲಿ ಕೋಲೆ
ನನ್ನ್ಯಾಕ ಹೋಡಿತಿ ನನ್ನ್ಯಾಕ ಬಡಿತಿರಿ
ನನ್ನ ಖೋಡ್ಯಾಕ ಕೊಯಸ್ತಿರಿ ? ಕೋಲೆ

ಹೊರಿ ಹುಲ್ಲು ತಿನ್ನುತ ಕೊಡ ನೀರು ಕುಡಿಯುತ್ತ
ಗಿಡದ ನೆರಳಿಗೆ ಒರಗುತ್ತ ಕೋಲೆ
ಕರಿಯ ಮಡ್ಡಿಯ ಮ್ಯಾಲ ಕರಿಯೆತ್ತು ಕಾಯುವ
ಕರಿಯ ಚಲ್ಲೋಣಿ ಅವರಂಗ ಕೋಲೆ

ಕರಿಯ ಚಲ್ಲೋಣಿ ಅವರಂಗ ಸಂಗಡ
ಸರಿ ಸರಿ ಬಳಿಯೇ ಒಡಕೊಂಡಿ ಕೋಲೆ
ನಿನ್ನ ಇಡಸೀದ ಬಳಿ ಹೊನ್ನ-ಹೂವಿನ ಬಳಿ-
ಏನೇನು ಮಾಡಿ ಒಡಕೊಂಡಿ ಕೋಲೆ ?

ಅಣ್ಣನ ತೋಟಕ್ಕೆ ಹೊಕಲ್ಯಾಡಿ ಹೋದರ
ಹೋನ್ನ ಖೋಡ್ಯಾಮ್ಮಿ ಹೊಡದಿತ್ತ ಕೋಲೆ
ಆ ಎಮ್ಮಿ ಹೊಡಿಯಲಿ ಆ ಎಮ್ಮಿ ಬಡಿಯಲಿ
ಆ ಎಮ್ಮಿ ಖೋಡ ಕೊಯಸಲಿ ಕೋಲೆ

ನನ್ನ್ಯಾಕ ಹೋಡಿತಿರಿ ನನ್ನ್ಯಾಕ ಬಡಿತಿರಿ
ನನ್ನ ಖೋಡ್ಯಾಕ ಕೊಯಸ್ತಿರಿ ? ಕೋಲೆ
ಹೊರಿ ಹುಲ್ಲು ತಿನ್ನುತ ಕೊಡ ನೀರು ಕುಡಿಯುತ
ಗಿಡದ ನೆರಳಿಗಿ ಒರಗುತ್ತ ಕೋಲೆ

ಬಿಳಿಯ ಮಡ್ಡಿಯ ಮ್ಯಾಲ ಬಿಳಿಯೆತ್ತು ಕಾಯುವ
ಬಿಳಿಯ ಚಲ್ಲೋಣಿ ಅವರಂಗ ಕೋಲೆ
ಬಿಳಿಯ ಚಲ್ಲೋಣಿ ಅವರಂಗ ಸಂಗಡ
ಸರಿ ಸರಿ ಬಳಿಯೇ ಒಡಕೊಂಡಿ ಕೋಲೆ

ನಿನ್ನ ಇಡಸೀದ ಬಳಿ ಹೊನ್ನ-ಹೂವಿನ ಬಳಿ-
ಏನೇನು ಮಾಡಿ ಒಡಕೊಂಡಿ ಕೋಲೆ ?
ಅಣ್ಣನ ತೋಟಕ ಹೊಕಲ್ಯಾಡಿ ಹೋದರ
ಹೊನ್ನ ಖೋಡ್ಯಾಮ್ಮಿ ಹೊಡದಿತ್ತ ಕೋಲೆ

ಆ ಎಮ್ಮಿ ಹೊಡಿಯಲಿ ಆ ಎಮ್ಮಿ ಬಡಿಯಲಿ
ಆ ಎಮ್ಮಿ ಖೋಡ ಕೊಯಸಲಿ ಕೋಲೆ
ನನ್ನ್ಯಾಕ ಹೋಡಿತಿರಿ ನನ್ನ್ಯಾಕ ಬಡಿತಿರಿ
ನನ್ನ ಖೋಡ್ಯಾಕ ಕೊಯಸ್ತಿರಿ ? ಕೋಲೆ

ಹೊರಿ ಹುಲ್ಲು ತಿನ್ನುತ ಕೊಡ ನೀರು ಕುಡಿಯುತ
ಗಿಡದ ನೆರಳಿಗ ಒರಗುತ ಕೋಲೆ

ಗೀಜಗ್ಯ

ಗೀಜಗ್ಯನ ಹುಲ್ಲ ತಂದು ನೂರೆಂಟು ಮನಿಕಟ್ಟಿ
ನೂರೆಂಟು ಮನಿಗಿ ಬಾಗಲೆಲ್ಯಾವೂ ಭಾಳ ಗೀಜಗ್ಯ

ಬ್ಯಾಟಿಕಾರನ ಮಗಳ ಬೆನ್ಹತ್ತಿ ಹೋಗುವಾಗ
ಅರಸೀಣ ಮಳುಗ್ಯಾಡಗಿದನೊ ಭಾಳ ಗೀಜಗ್ಯ

ಮಲ್ಲಿಗ್ಹೂವಾ ತಂದು ಚೆಲುವಾಗಿ ಮನಿಕಟ್ಟಿ
ಮಲ್ಲಿಗಿ ಹೂವಿನ ಬಾಗಲೆಲ್ಯಾದೊ ಭಾಳ ಗೀಜಗ್ಯ

ಬ್ಯಾಟಿಕಾರನ ಮಗಳ ಬೆನ್ಹತ್ತಿ ಹೋಗುವಾಗ
ಕುಕುಮ ಮಳುಗ್ಯಾಗಡಗಿದನೊ ಭಾಳ ಗೀಜಗ್ಯ

ಚೆಂಡೆನ ಹೂವ ತಂದು ದುಂಡಾಗಿ ಮನಿಕಟ್ಟಿ
ಚೆಂಡೆನ ಹೂವಿನ ಬಾಗಿಲೆಲ್ಯಾದೊ ಭಾಳ ಗೀಜಗ್ಯ

ಬ್ಯಾಟಿಕಾರನ ಮಗಳ ಬೆನ್ಹತ್ತಿ ಹೋಗುವಾಗ
ಘಂದದ ಮಳುಗ್ಯಾಗಡಗಿದನೊ ಭಾಳ ಗೀಜಗ್ಯ

ಮಲ್ಲಿಗಿ ಹೂವ ತಂದು ಚೆಲುವಾಗಿ ಮನಿಕಟ್ಟಿ
ಮಲ್ಲಿಗ್ಹೂವಿನ ಬಾಗಲೆಲ್ಯಾದೊ ಭಾಳ ಗೀಜಗ್ಯ

ಮಲ್ಲಿಗಿ ಹೂವಿನ ಮನಿಯಲ್ಲಿ ಹುಡುಕಳಗೆ
ಹೂವಿನ ಒಳಗೆ ಅಡಗಿದನೋ ಭಾಳ ಗೀಜಗ್ಯ

ಹೂವು ಸಿಗಲಿಲ್ಲ

ಝಿಂಡೆನ್ಹೂವುಕಾ ಗಲ್ಲಿ ಗಲ್ಲಿ ತಿರುಗಿದಾ
ಝಿಂಡೆನ್ಹೂವುಕಾ ಗಲ್ಲಿ ಗಲ್ಲಿ ತಿರುಗಿದಾ
ಝಿಂಡೆನ್ಹೂವುಕಾ ಸಿಗಣಿಲ್ಲೆ ಗವರಿ ಗಾಬರಾಗ್ಯಾಳೆ
ಝಿಂಡೆನ್ಹೂವುಕಾ ಸಿಗಣಿಲ್ಲೆ ಗವರಿ ಗಾಬರಾಗ್ಯಾಳೆ

ಕಾರಳ್ಹೂವುಕಾ ಗಲ್ಲಿ ಗಲ್ಲಿ ತಿರುಗಿದಾ
ಕಾರಳ್ಹೂವುಕಾ ಗಲ್ಲಿ ಗಲ್ಲಿ ತಿರುಗಿದಾ
ಕಾರಳ್ಹೂವಾ ಸಿಗಣಿಲ್ಲೆ ಗವರಿ ಗಾಬರಾಗ್ಯಾಳೆ
ಕಾರಳ್ಹೂವಾ ಸಿಗಣಿಲ್ಲೆ ಗವರಿ ಗಾಬರಾಗ್ಯಾಳೆ

ಕುಕ್ಕೆನ್ಹೂವುಕಾ ಗಲ್ಲಿ ಗಗಲ್ಲಿ ತಿರುಗಿದಾ
ಕುಕ್ಕೆನ್ಹೂವುಕಾ ಗಲ್ಲಿ ಗಗಲ್ಲಿ ತಿರುಗಿದಾ
ಕುಕ್ಕೆನ್ಹೂವುಕಾ ಸಿಗಣಿಲ್ಲೆ ಗವರಿ ಗಾಬರಾಗ್ಯಾಳೆ
ಕುಕ್ಕೆನ್ಹೂವುಕಾ ಸಿಗಣಿಲ್ಲೆ ಗವರಿ ಗಾಬರಾಗ್ಯಾಳೆ

ಕಣಗಿಲ್ಹೂವುಕಾ ಗಲ್ಲಿ ಗಲ್ಲಿ ತಿರುಗಿದಾ
ಕಣಗಿಲ್ಹೂವುಕಾ ಗಲ್ಲಿ ಗಲ್ಲಿ ತಿರುಗಿದಾ
ಕಣಗಿಲ್ಹೂವುಕಾ ಸಿಗಣಿಲ್ಲೆ ಗವರಿ ಗಾಬರಾಗ್ಯಾಳೆ
ಕಣಗಿಲ್ಹೂವುಕಾ ಸಿಗಣಿಲ್ಲೆ ಗವರಿ ಗಾಬರಾಗ್ಯಾಳೆ

ಹೂವು ತಂದಿರುವೆ

ಕುಕ್ಕೆನ್ಹೂವಾ ಕಡ ತಂದಿದಾ
ಗೌರಿ ನಿಮಗ ಕುಕ್ಕುರ್ಸ್ತಕರ ತಂದಿದಾ
ಬಂದಳೆಂದು ಬರೆಲಂದಿದಾ
ಗೌರಿ ನಿನುಗ ಪಿಂಜರಂಥಾ ಗಿಳಿ ತಂದಿದಾ

ಕಾರಳ್ಹೂವಾ ಕಡ ತಂದಿದಾ
ಗೌರಿ ನಿನುಗ ಕಾರುಸ್ತ ಕರ ತಂದಿದಾ
ಬಂದಳೆಂದು ಬರೆಲಂದಿದಾ
ಗೌರಿ ನಿನುಗ ಪಿಂಜರಂಥಾ ಗಿಳಿ ತಂದಿದಾ

ಹೀರೆ ಹೂವಾ ಕಡ ತಂದಿದಾ
ಗೌರಿ ನಿನುಗ ಹೀರುಸ್ತ ಕರತಂದಿದಾ
ಬಂದಳೆಂದು ಬರೆಲಂದಿದಾ
ಗೌರಿ ನಿನುಗ ಪಿಂಜರಂಥಾ ಗಿಳಿ ತಂದಿದಾ

ಸ್ವಾರೆ ಹೂವಾ ಕಡ ತಂದಿದಾ
ಗೌರಿ ನಿನುಗ ಹೀರುಸ್ತ ಕರ ತಂದಿದಾ
ಬಂದಳೆಂದು ಬರೆಲಂದಿದಾ
ಗೌರಿ ನಿನುಗ ಪಿಂಜರಂಥಾ ಗಿಳಿ ತಂದಿದಾ

ಝೇಂಡೆನ್ಹೂವಾ ಕಡ ತಂದಿದಾ
ಗೌರಿ ನಿನುಗ ಝಾಡುಸ್ತ ಕರ ತಂದಿದಾ
ಬಂದಳೆಂದು ಬರೆಲಂದಿದಾ
ಗೌರಿ ನಿನುಗ ಪಿಂಜರಂಥಾ ಗಿಳಿ ತಂದಿದಾ

ವಕ್ತಾರರು: ಇಂದಿರಾಬಾಯಿ ದೆವೇಂದ್ರಪ್ಪಾ ನೌಬಾದೆ ಸಾ॥ ಹಲಬರ್ಗಾ ತಾ॥ ಭಾಲ್ಕಿ

ಹೂವಿಗೆ ಬಹಳ ಪರಿಮಾಡಿ

ಕುಕ್ಕೆನ್ಹೂವುಕಾ ಭಾಳ ಭಾಳ ಪರಿಮಾಡಿ
ಯಾಕೊ ರಂಗಯ್ಯ ನಿನ್ನ ಕಾಕ ಬಂದಿಗಳೊ
ಯಾಕೊ ರಂಗಯ್ಯ ನಿನ್ನ ಕಾಕ ಬದಿಗಳೊ
ಸಾಕ ನಡಿ ನಡಿ ಸರಿಯ ಸವತೆ ಮನಿಕಡಿ
ಸಾಕ ನಡಿ ನಡಿ ಸರಿಯ ಸವಿತೆ ಮನಿಕಡಿ
ಹರಿಯ ಹಾಯಲ್ಯೊ ದೊಡ್ಡ ಮಡಗ ಡುಮಲ್ಯೊ
ಹರಿಯ ಹಾಯಲ್ಯೊ ದೊಡ್ಡ ಮಡಗ ಡುಮಕಲ್ಯೊ

ಕಾರಳ್ಹೂವುಕಾ ಭಾಳ ಭಾಳ ಪರಿಮಾಡಿ
ಕಾರಳ್ಹೈಕಾ ಭಾಳ ಭಾಳ ಪರಿಮಾಡಿ
ಯಾಕೊ ರಂಗಯ್ಯ ನಿನ್ನ ಕಾಕ ಬಂದಿಗಳೊ
ಯಾಕೊ ರಂಗಯ್ಯ ನಿನ್ನ ಕಾಕ ಬದಿಗಳೊ
ಸಾಕ ನಡಿ ನಡಿ ಸರಿಯ ಸವತೆ ಮನಿಕಡಿ
ಸಾಕ ನಡಿ ನಡಿ ಸರಿಯ ಸವಿತೆ ಮನಿಕಡಿ
ಹರಿಯ ಹಾಯಲ್ಯೊ ದೊಡ್ಡ ಮಡಗ ಡುಮಲ್ಯೊ
ಹರಿಯ ಹಾಯಲ್ಯೊ ದೊಡ್ಡ ಮಡಗ ಡುಮಕಲ್ಯೊ

ಗವರಮ್ಮ (ಶಿಗಮ್ಮ) ನಿಗೆ ಬೀಳ್ಕೊಡುಗೆ

ಒಂದ ಸೇರಕ್ಕಿ ತರುಲೇ
ಗವರವ ಒಂದೇ ಮಂಡಾಲ ಬರಿಲೇ
ಹಾಲಗುಂಜಿ–ನೀಲಗುಂಜಿ ಹೂವಾ ತರುಲೇ
(ಹಾಲಚುಕ್ಕಿ–ನೀಲಚುಕ್ಕಿ ಹೂವಾ ತರುಲೇ)
ಗವರವ ನಿಂಗ ಹುಣ್ಣಿ ಮಾಡಿ ಖಳಕೊಡಲೇ

ಎಡ್ಡ ಸೇರಕ್ಕಿ ತರುಲೇ
ಗವರವ ಒಂದೇ ಮಂಡಾಲ ಬರಿಲೇ
ಹಾಲಗುಂಜಿ–ನೀಲಗುಂಜಿ ಹೂವಾ ತರುಲೇ
(ಹಾಲಚುಕ್ಕಿ–ನೀಲಚುಕ್ಕಿ ಹೂವಾ ತರುಲೇ)
ಗವರವ ನಿಂಗ ಹುಣ್ಣಿ ಮಾಡಿ ಖಳಕೊಡಲೇ)

ಮೂರ ಸೇರಕ್ಕಿ ತರುಲೇ
ಗವರವ ಒಂದೇ ಮಂಡಾಲ ಬರಿಲೇ
ಹಾಲಗುಂಜಿ–ನೀಲಗುಂಜಿ ಹೂವಾ ತರುಲೇ
ನಾಕ ಸೇರಕ್ಕಿ ತರುಲೇ
ಗವರವ ಒಂದೇ ಮಂಡಾಲ ಬರಿಲೇ
ಹಾಲಗುಂಜಿ–ನೀಲಗುಂಜಿ ಹೂವಾ ತರುಲೇ
(ಹಾಲಚುಕ್ಕಿ–ನೀಲಚುಕ್ಕಿ ಹೂವಾ ತರುಲೇ
ಗವರವ ನಿಂಗ ಹುನ್ನಿ ಮಾಡಿ ಖಳಕೊಡಲೇ

ಐದ ಸೇರಕ್ಕಿ ತರುಲೇ
ಗವರವ ಒಂದೇ ಮಂಡಲಾ ಬರಿಲೇ
ಹಾಲಗುಂಜಿ–ನೀಲಗುಂಜಿ ಹೂವಾ ತರುಲೇ
(ಹಾಲಚುಕ್ಕಿ–ನೀಲಚುಕ್ಕಿ ಹೂವಾ ತರುಲೇ
ಗವರವ ನಿಂಗ ಹುಣ್ಣಿ ಮಾಡಿ ಖಳಕೂಡಲೆ
(ಈ ಕೆಳಗೆ 3 ಸಾಲುಗಳು (ವಾರಾಂತರ) ಗಮನಕ್ಕಾಗಿ ಕೊಡಲಾಗಿದೆ.)

ವಕ್ತಾರರು: ಪಾರ್ವತಿಬಾಯಿ ಶರಣಪ್ಪಾ ಹೊನ್ನಾಳೆ ಸಾ॥ ಲಾಡಗೇರಿ ಬೀದರ.

ಕಂಡಿದೆ ಗೌರಮ್ಮ (ಶೀಗಮ್ಮ) ನಿಗೆ

ಒಂದ ಸೌಟ ಎಣ್ಣಿ ತಂದಿರೆ ಗೌರಮ್ಮಗೊಂದೆ ಮಂಡಲ ಬರದಿರೆ
ಗೌವರಮ್ಮಗೊಂದೆ ಮಂಡಲಾ ಬರದಿರೆ
ಫಲಂಗ್ಹೂಡೆದ ಫಲಂಗ್ಹೂಡೆದ
ರಾಯೇರಾಗ (ಡ) ರದಬೀದ್ಯಾಗ ಪಟ್ಟಣುದಾಗ ಸೇಟ್ಟಣುದಾಗ
ಹಾಂಹಾ ಕಂಡಿದ ಗವರಮ್ಮನೆ । ಹಾಂಹಾ ಕಂಡಿದ ಶೀಗಮ್ಮನೆ

ಎಡ ಸೌಟ ಎಣ್ಣಿ ತಂದಿರೆ ಎಡ್ಡ ಮಂಡಾಲ ಬರದಿರೆ
ಗವರಮ್ಮ ಗೆಡ್ಡೆ ಮಂಡಾಲ ಬರದಿರೆ
ಫಲಂಗ್ಹೂಡೆದ ಫಲಂಗ್ಹೂಡೆದ
ರಾಯೇರಾಗ ರದಬೀದ್ಯಾಗ ಪಟ್ಟಣುದಾಗ ಸೇಟ್ಟಣುದಾಗ
ಹಾಂಹಾ ಕಂಡಿದ ಗವರಮ್ಮನೆ । ಹಾಂಹಾ ಕಂಡಿದ ಶೀಗಮ್ಮನೆ

ಮೂರ ಸೌಟ ಎಣ್ಣೆ ತಂದಿರೆ ಮೂರೆ ಮಂಡಾಲ ಬರದಿರೆ
ಗವರಮ್ಮಗ್ಮೂರೆ ಮಂಡಲಾ ಬರದಿರೆ
ಫಲಂಗ್ಹೂಡೆದ ಫಲಂಗ್ಹೂಡೆದ
ರಾಯೇರಾಗ ರದಬೀದ್ಯಾಗ ಪಟ್ಟಣುದಾಗ ಸೇಟ್ಟಣುದಾಗ
ಹಾಂಹಾ ಕಂಡಿದ ಗವರಮ್ಮನೆ । ಹಾಂಹಾ ಕಂಡಿದ ಶೀಗಮ್ಮನೆ

ನಾಕ ಸೌಟ ಎಣ್ಣೆ ತಂದಿರೆ ನಾಕ ಮಂಡಾಲ ಬರದಿರೆ
ಗವರಮ್ಮಗ ನಾಕೆ ಮಂಡಲಾ ಬರದಿರೆ
ಫಲಂಗ್ಹೂಡೆದ ಫಲಂಗ್ಹೂಡೆದ
ರಾಯೇರಾಗ ರದಬೀದ್ಯಾಗ ಪಟ್ಟಣುದಾಗ ಸೇಟ್ಟಣುದಾಗ
ಹಾಂಹಾ ಕಂಡಿದ ಗವರಮ್ಮನೆ । ಹಾಂಹಾ ಕಂಡಿದ ಶೀಗಮ್ಮನೆ

ಐದು ಸೌಟ ಎಣ್ಣೆ ತಂದಿರೆ ಐದೆ ಮಂಡಾಲ ಬರದಿರೆ
ಗವರಮ್ಮಗ ಐದೆ ಮಂಡಾಲ ಬರದಿರೆ
ಗವರಮ್ಮಗ ಐದೆ ಮಂಡಾಲ ಬರದಿರೆ
ಫಲಂಗ್ಹೂಡೆದ ಫಲಂಗ್ಹೂಡೆದ
ರಾಯೇರಾಗ ರದಬೀದ್ಯಾಗ ಪಟ್ಟಣುದಾಗ ಸೇಟ್ಟಣುದಾಗ
ಹಾಂಹಾ ಕಂಡಿದ ಗವರಮ್ಮನೆ । ಹಾಂಹಾ ಕಂಡಿದ ಶೀಗಮ್ಮನೆ

ವಕ್ತಾರರು: ಮಲ್ಲಮ್ಮಾ ಕಲ್ಲಪ್ಪಾ ಸಾ॥ ಧನ್ನೂರಾ (ಎಚ್) ತಾ॥ ಭಾಲ್ಕಿ ಜಿ॥ ಬೀದರ.)

ಗೌರಮ್ಮನ ಪೂಜೆಗೆ

ಒಂದಸೇರಕ್ಕಿಗೇ ನಮಗೌರನ ಪೂಜಿಗೇ
ಆಕಿನ ತೋಡಿ ಮ್ಯಾಲ ಬೆಳ್ಳಿ ಛತ್ತರಿ
ಭಂಗಾರ್ಹೇರಿಕೊಂಡು ಅಣ್ಣ ಮಾಲಿಂಗ
ದಂಡಿಗ್ಹೋದರ ಪಂಚ ಫಾತರಿ
ಸಂಕರಾತರಿ ಓ ಎಂಬ ಕೋಗಿಲೆ

ಯಡ್ಡ ಸೇರಕ್ಕಿಗೇ ನಮಗೌರನ ಪೂಜಿಗೇ
ಆಕಿನ ತೋಡಿ ಮ್ಯಾಲ ಬೆಳ್ಳಿ ಛತ್ತರಿ
ಭಂಗಾರ್ಹೇರಿಕೊಂಡು ಅಣ್ಣ ಮಾಲಿಂಗ
ದಂಡಿಗ್ಹೋದರ ಪಂಚ ಫಾತರಿ
ಸಂಕರಾತರಿ ಓ ಎಂಬ ಕೋಗಿಲೆ

ಮೂರಸೇರಕ್ಕಿಗೇ ನಮಗೌರವ ಪೂಜಿಗೇ
ಆಕಿನ ತೋಡಿ ಮ್ಯಾಲ ಬೆಳ್ಳಿ ಛತ್ತರಿ
ಭಂಗಾರ್ಹೇರಿಕೊಂಡು ಅಣ್ಣ ಮಾಲಿಂಗ
ದಂಡಿಗ್ಹೋದರ ಪಂಚ ಫಾತರಿ
ಸಂಕರಾತರಿ ಓ ಎಂಬ ಕೋಗಿಲೆ
ನಾಕಸೇರಕ್ಕಿಗೇ ನಮಗೌರವ ಪೂಜಿಗೇ
ಆಕಿನ ತೋಡಿ ಮ್ಯಾಲ ಬೆಳ್ಳಿ ಛತ್ತರಿ
ಭಂಗಾರ್ಹೇರಿಕೊಂಡು ಅಣ್ಣ ಮಾಲಿಂಗ
ದಂಡಿಗ್ಹೋದರ ಪಂಚ ಫಾತರಿ
ಸಂಕರಾತರಿ ಓ ಎಂಬ ಕೋಗಿಲೆ

ಐದಸೇರಕ್ಕಿಗೇ ನಮಗೌರವ ಪೂಜಿಗೆ
ಆಕಿನ ತೋಡಿ ಮ್ಯಾಲ ಬೆಳ್ಳಿ ಛತ್ತರಿ
ಭಂಗಾರ್ಹೇರಿಕೊಂಡು ಅಣ್ಣ ಮಾಲಿಂಗ
ದಂಡಿಗ್ಹೋದರ ಪಂಚ ಘಾತರಿ
ಸಂಕರಾತರಿ ಓ ಎಂಬ ಕೋಗಿಲೆ

(ವಕ್ತಾರರು: ಶೀಲಾ ರಾಜಶೇಖರ ಬೀದರ.)

ಒಂದೆಲೆಯ ಕೇದಗೆ

ಒಂದ್ಯಾಲೆಂಬ ಹಸರ ಕ್ಯಾದಗೇ
ಅದರ ಮ್ಯಾಲೊಂದಲಕಿಲಮಲಕಿಲ ಮಂಚವ ಹಾಕಿಲೆ (ದೆ)
ಓಯೆಂಬ ರಾತ್ರಿ ಒಬ್ಬಳೆ ಶಿವನೇ
ಓಯೆಂಬ ರಾತ್ರಿ ಒಬ್ಬಳೆ ಶಿವನೇ
ಸೋತ ಗಂಗಿ ಶಿವನ ಮ್ಯಾಲೊಂದ ಎಲ್ಲಿಯೊ ಬಾಡಿವೆ
ಸೋತ ಗಂಗಿ ಶಿವನ ಮ್ಯಾಲೊಂದ ಎಲಿಯೊ ಬಾಡಿವೆ

ಎಡ್ಯಾಲೆಂಬ ಹಸರ ಕ್ಯಾದಗೇ
ಅದರ ಮ್ಯಾಲೊಂದಲಕಿಲಮಲಕಿಲ ಮಂಚವ ಹಾಕಿಲೆ (ದೆ)
ಓಯೆಂಬ ರಾತ್ರಿ ಒಬ್ಬಳೆ ಶಿವನೇ
ಓಯೆಂಬ ರಾತ್ರಿ ಒಬ್ಬಳೆ ಶಿವನೇ
ಸೋತ ಗಂಗಿ ಶಿವನ ಮ್ಯಾಲೊಂದ ಎಲ್ಲಿಯೊ ಬಾಡಿವೆ
ಸೋತ ಗಂಗಿ ಶಿವನ ಮ್ಯಾಲೊಂದ ಎಲಿಯೊ ಬಾಡಿವೆ
ಮೂರ್ಯಾಲೆಂಬ ಹಸರ ಕ್ಯಾದಗೇ
ಅದರ ಮ್ಯಾಲೊಂದಲಕಿಲಮಲಕಿಲ ಮಂಚವ ಹಾಕಿಲೆ (ದೆ)
ಓಯೆಂಬ ರಾತ್ರಿ ಒಬ್ಬಳೆ ಶಿವನೇ
ಓಯೆಂಬ ರಾತ್ರಿ ಒಬ್ಬಳೆ ಶಿವನೇ
ಸೋತ ಗಂಗಿ ಶಿವನ ಮ್ಯಾಲೊಂದ ಎಲ್ಲಿಯೊ ಬಾಡಿವೆ
ಸೋತ ಗಂಗಿ ಶಿವನ ಮ್ಯಾಲೊಂದ ಎಲಿಯೊ ಬಾಡಿವೆ

ನಾಕ್ಯಾಲೆಂಬ ಹಸರು ಕ್ಯಾದಗೇ
ಅದರ ಮ್ಯಾಲೊಂದಲಕಿಲಮಲಕಿಲ ಮಂಚವ ಹಾಕಿಲೆ (ದೆ)
ಓಯೆಂಬ ರಾತ್ರಿ ಒಬ್ಬಳೆ ಶಿವನೇ
ಓಯೆಂಬ ರಾತ್ರಿ ಒಬ್ಬಳೆ ಶಿವನೇ
ಸೋತ ಗಂಗಿ ಶಿವನ ಮ್ಯಾಲೊಂದ ಎಲ್ಲಿಯೊ ಬಾಡಿವೆ
ಸೋತ ಗಂಗಿ ಶಿವನ ಮ್ಯಾಲೊಂದ ಎಲಿಯೊ ಬಾಡಿವೆ

ಐದ್ಯಾಲೆಂಬ ಹಸರ ಕ್ಯಾದಗೇ
ಅದರ ಮ್ಯಾಲೊಂದಲಕಿಲಮಲಕಿಲ ಮಂಚವ ಹಾಕಿಲೆ (ದೆ)
ಓಯೆಂಬ ರಾತ್ರಿ ಒಬ್ಬಳೆ ಶಿವನೇ
ಓಯೆಂಬ ರಾತ್ರಿ ಒಬ್ಬಳೆ ಶಿವನೇ
ಸೋತ ಗಂಗಿ ಶಿವನ ಮ್ಯಾಲೊಂದ ಎಲ್ಲಿಯೊ ಬಾಡಿವೆ
ಸೋತ ಗಂಗಿ ಶಿವನ ಮ್ಯಾಲೊಂದ ಎಲಿಯೊ ಬಾಡಿವೆ

ಸೀತಾಳ ಕುಡು ಏಳೆ

ಒಂದ ಸೇರಕ್ಕಿ ಥಳುಸಲೆ ಕೇರಲೆ ಬೀದರ ಮರುದಲೆ
ಕಂಚಿ ಕಳಿಸಲೆ ಕಂಚಿನೊಳಿಯಲೆ
ಬುತ್ತಿ ಕಟ್ಟಲೆ ಪಟ್ಟಣ ಸೇರಲೆ
ಆನಿ ಏರಿ ಶಿವ ಬಂದರ ನಡಿ ಗವರಮ್ಮ । ಗಂಡನ ಮನಿಗೆ
ನಂದಿ ಏರಿ ಶಿವ ಬಂದರ ನಡಿ ಗವರಮ್ಮ । ಗಂಡನ ಮನಿಗೆ

ಎರಡ ಸೇರಕ್ಕಿ ಥಳುಸಲೆ ಕೇರಲೆ ಬೀದರ ಮರುದಲೆ
ಕಂಚಿ ಕಳಿಸಲೆ ಕಂಚಿನೊಳಿಯಲೆ
ಬುತ್ತಿ ಕಟ್ಟಲೆ ಪಟ್ಟಣ ಸೇರಲೆ
ಆನಿ ಏರಿ ಶಿವ ಬಂದರ ನಡಿ ಗವರಮ್ಮ । ಗಂಡನ ಮನಿಗೆ
ನಂದಿ ಏರಿ ಶಿವ ಬಂದರ ನಡಿ ಗವರಮ್ಮ । ಗಂಡನ ಮನಿಗೆ

ಮೂರ ಸೇರಕ್ಕಿ ಥಳುಸಲೆ ಕೇರಲೆ ಬೀದರ ಮರುದಲೆ
ಕಂಚಿ ಕಳಿಸಲೆ ಕಂಚಿನೊಳಿಯಲೆ
ಬುತ್ತಿ ಕಟ್ಟಲೆ ಪಟ್ಟಣ ಸೇರಲೆ
ಆನಿ ಏರಿ ಶಿವ ಬಂದರ ನಡಿ ಗವರಮ್ಮ । ಗಂಡನ ಮನಿಗೆ
ನಂದಿ ಏರಿ ಶಿವ ಬಂದರ ನಡಿ ಗವರಮ್ಮ । ಗಂಡನ ಮನಿಗೆ

ನಾಕ ಸೇರಕ್ಕಿ ಥಳುಸಲೆ ಕೇರಲೆ ಬೀದರ ಮರುದಲೆ
ಕಂಚಿ ಕಳಿಸಲೆ ಕಂಚಿನೊಳಿಯಲೆ
ಬುತ್ತಿ ಕಟ್ಟಲೆ ಪಟ್ಟಣ ಸೇರಲೆ
ಆನಿ ಏರಿ ಶಿವ ಬಂದರ ನಡಿ ಗವರಮ್ಮ । ಗಂಡನ ಮನಿಗೆ
ನಂದಿ ಏರಿ ಶಿವ ಬಂದರ ನಡಿ ಗವರಮ್ಮ । ಗಂಡನ ಮನಿಗೆ

ಐದ ಸೇರಕ್ಕಿ ಥಳುಸಲೆ ಕೇರಲೆ ಬೀದರ ಮರುದಲೆ
ಕಂಚಿ ಕಳಿಸಲೆ ಕಂಚಿನೊಳಿಯಲೆ
ಬುತ್ತಿ ಕಟ್ಟಲೆ ಪಟ್ಟಣ ಸೇರಲೆ
ಆನಿ ಏರಿ ಶಿವ ಬಂದರ ನಡಿ ಗವರಮ್ಮ । ಗಂಡನ ಮನಿಗೆ
ನಂದಿ ಏರಿ ಶಿವ ಬಂದರ ನಡಿ ಗವರಮ್ಮ । ಗಂಡನ ಮನಿಗೆ

ಗಂಡನ ಮನೆಗೆ ನಡೆದಳು

ಒಂದ್ಸೇರಕ್ಕಿ ತಾ ನಮ್ಮ ಕೇರಿಗೆ
ಒಂದ್ಸೇರಕ್ಕಿ ತಾ ನಮ್ಮ ಕೇರಿಗೆ
ನಾವು ಕುಟ್ಟಲಿ ಚಂದನ ಒಣಕಿಲ್ಲಿ
ನಾವು ಕೇರಲ್ಲಿ ಗಿಲಿ ಗಿಲಿ ಮರದಲ್ಲಿ
ನಾವು ಬೀಸಲ್ಲಿ ತ್ವಾರಣ ಕಲ್ಲಿಲ್ಲಿ
ನಾವು ರೋಟ್ಟಿ ಕಟ್ಟಲ್ಲಿ ಪಾತಳ ಸೀರೆಲ್ಲಿ
ನಾವು ಹಾದಿ ನಡಿಯಲ್ಲಿ ಸಮದುರ ಹೊಳಿಯಲ್ಲಿ
ಧಿರ ಧಿರ ಪಯಿನಾ ಧಿರಂಗ ಪಯಿನಾ
ನಡುದಳ ಗಂಡನ ಮನಿಗೆ

ಎಡ್ಸೇರಕ್ಕಿ ತಾ ನಮ್ಮ ಕೇರಿಗೆ
ಎಡ್ಸೇರಕ್ಕಿ ತಾ ನಮ್ಮ ಕೇರಿಗೆ
ನಾವು ಕುಟ್ಟಲಿ ಚಂದನ ಒಣಕಿಲ್ಲಿ

ನಾವು ಕೇರಲ್ಲಿ ಗಿಲಿ ಗಿಲಿ ಮರದಲ್ಲಿ
ನಾವು ಬೀಸಲ್ಲಿ ತ್ವಾರಣ ಕಲ್ಲಿಲ್ಲಿ
ನಾವು ರೋಟ್ಟಿ ಕಟ್ಟಲ್ಲಿ ಪಾತಳ ಸೀರೆಲ್ಲಿ
ನಾವು ಹಾದಿ ನಡಿಯಲ್ಲಿ ಸಮದುರ ಹೊಳಿಯಲ್ಲಿ
ಧಿರ ಧಿರ ಪಯಿನಾ ಧಿರಂಗ ಪಯಿನಾ
ನಡುದಳ ಗಂಡನ ಮನಿಗೆ

(ಇದೇ ರೀತಿ "ಐದ್ಸೇರಕ್ಕಿ ತಾ ನಮ್ಮ ಕೇರಿಗೆ' ತನಕ ಹೇಳುತ್ತಾರೆ.)

ವರಾಪೇಕ್ಷೇ

ಒಂದ ಖಂಬದ ಪಡಸಲಿ ಒಳಗ ತಾಯಿ ಭೌವನಿ
ಅಕಿನ ಶಾಯ ಮಾಡಲೇ ಶಾರದೊಡ್ಡಿ (ಗೊಡ್ಡಿ) ಬೇಡಲೇ
ಅಕಿನ ಶಾಯ ಮಾಡಲೇ ಶಾರ ದೊಡ್ಡಿ (ಗೊಡ್ಡಿ) ಬೇಡಲೇ

ಯಡ್ಡ ಖಂಬದ ಪಡಸಲಿ ಒಳಗ ತಾಯಿ ಭೌವನಿ
ಅಕಿನ ಶಾಯ ಮಾಡಲೇ ಶಾರದೊಡ್ಡಿ (ಗೊಡ್ಡಿ) ಬೇಡಲೇ
ಅಕಿನ ಶಾಯ ಮಾಡಲೇ ಶಾರ ದೊಡ್ಡಿ (ಗೊಡ್ಡಿ) ಬೇಡಲೇ

ಮೂರ ಖಂಬದ ಪಡಸಲಿ ಒಳಗ ತಾಯಿ ಭೌವನಿ
ಅಕಿನ ಶಾಯ ಮಾಡಲೇ ಶಾರದೊಡ್ಡಿ (ಗೊಡ್ಡಿ) ಬೇಡಲೇ
ಅಕಿನ ಶಾಯ ಮಾಡಲೇ ಶಾರ ದೊಡ್ಡಿ (ಗೊಡ್ಡಿ) ಬೇಡಲೇ

ನಾಕ ಖಂಬದ ಪಡಸಲಿ ಒಳಗ ತಾಯಿ ಭೌವನಿ
ಅಕಿನ ಶಾಯ ಮಾಡಲೇ ಶಾರದೊಡ್ಡಿ (ಗೊಡ್ಡಿ) ಬೇಡಲೇ
ಅಕಿನ ಶಾಯ ಮಾಡಲೇ ಶಾರ ದೊಡ್ಡಿ (ಗೊಡ್ಡಿ) ಬೇಡಲೇ

ಐದ ಖಂಬದ ಪಡಸಲಿ ಒಳಗ ತಾಯಿ ಭೌವನಿ
ಅಕಿನ ಶಾಯ ಮಾಡಲೇ ಶಾರದೊಡ್ಡಿ (ಗೊಡ್ಡಿ) ಬೇಡಲೇ
ಅಕಿನ ಶಾಯ ಮಾಡಲೇ ಶಾರ ದೊಡ್ಡಿ (ಗೊಡ್ಡಿ) ಬೇಡಲೇ

ಐದೈದು ನುಡಿಯ ಹಾಡುಗಳು

ಒಂದೇ ನುಡಿ ಐದು ಸಂಖ್ಯೆಗಳಲ್ಲಿ

ಗೌರಿಗೆ ಕಂಡೆ
ಒಂದ ಸೌಟೆಣ್ಣಿ ತಂದು ಒಂದ ಬತ್ತಿ ಮಾಡಿ
ಕರಣರ ಕ್ವಾಟ್ಯಾಗ ಮಂಗಳಾರ ಪ್ಯಾಟ್ಯಾಗ
ರಾಯೇರಾಡಾರದ ಬೀದ್ಯಾಗ
ಚೇಟ್ಟೇರಾಡಾ ಪಟ್ಟಣುದಾಗ
ಗೌರಿ ನೀ ಕಂಡೆನೇ ಹೂವಿನ ಬನದಾಗ
ಗೌರಿ ನೀ ಕಂಡೆನೇ ಹೂವಿನ ಬನದಾಗ

ಎಡ್ಡ ಸೌಟಣ್ಣಿ ತಂದು ಎಡ್ಡ ಬತ್ತಿ ಮಾಡಿ
ಕರಣರ ಕ್ವಾಟ್ಯಾಗ ಮಂಗಳಾರ ಪ್ಯಾಟ್ಯಾಗ
ರಾಯೇರಾಡಾರದ ಬೀದ್ಯಾಗ
ಚೇಟ್ಟೇರಾಡಾ ಪಟ್ಟಣುದಾಗ
ಗೌರಿ ನೀ ಕಂಡೆನೇ ಹೂವಿನ ಬನದಾಗ
ಗೌರಿ ನೀ ಕಂಡೆನೇ ಹೂವಿನ ಬನದಾಗ

ಮೂರ ಸೌಟಣ್ಣಿ ತಂದು ಮೂರ ಬತ್ತಿ ಮಡಿ
ಕರಣರ ಕ್ವಾಟ್ಯಾಗ ಮಂಗಳಾರ ಪ್ಯಾಟ್ಯಾಗ
ರಾಯೇರಾಡಾರದ ಬೀದ್ಯಾಗ
ಚೇಟ್ಟೇರಾಡಾ ಪಟ್ಟಣುದಾಗ
ಗೌರಿ ನೀ ಕಂಡೆನೇ ಹೂವಿನ ಬನದಾಗ
ಗೌರಿ ನೀ ಕಂಡೆನೇ ಹೂವಿನ ಬನದಾಗ

ನಾಕ ಸೌಟಣ್ಣಿ ತಂದು ನಾಕ ಬತ್ತಿ ಮಾಡಿ
ಕರಣರ ಕ್ವಾಟ್ಯಾಗ ಮಂಗಳಾರ ಪ್ಯಾಟ್ಯಾಗ
ರಾಯೇರಾಡಾರದ ಬೀದ್ಯಾಗ
ಚೇಟ್ಟೇರಾಡಾ ಪಟ್ಟಣುದಾಗ
ಗೌರಿ ನೀ ಕಂಡೆನೇ ಹೂವಿನ ಬನದಾಗ
ಗೌರಿ ನೀ ಕಂಡೆನೇ ಹೂವಿನ ಬನದಾಗ

ಐದು ಸೌಟಣ್ಣಿ ತಂದು ಐದು ಬತ್ತಿ ಮಾಡಿ
ಕರಣರ ಕ್ವಾಟ್ಯಾಗ ಮಂಗಳಾರ ಪ್ಯಾಟ್ಯಾಗ
ರಾಯೇರಾಡಾರದ ಬೀದ್ಯಾಗ
ಚೇಟ್ಟೇರಾಡಾ ಪಟ್ಟಣುದಾಗ
ಗೌರಿ ನೀ ಕಂಡೆನೇ ಹೂವಿನ ಬನದಾಗ
ಗೌರಿ ನೀ ಕಂಡೆನೇ ಹೂವಿನ ಬನದಾಗ

ಫರಾಳ ತೋರುವ ಹಾಡುಗಳು

ಫರಾಳ ಹಾಡು –1

ಗೌರವ್ವ ಗೌರವ್ವ ಹೂವಾ ಮುಡಿಯವ್ವ
ಅವರಿ ಹಂತಾ ಅಣ್ಣಿರಲಿ ತೊಗರಿ ಹಂತಾ ತಮ್ಮಿರಲಿ
ಮನ್ನೇರಂಥಾ ಮಾವಿರಲಿ ಸೆಟ್ಟೆರಂಥಾ ಭಾವಿರಲಿ
ತಾಯಿನೆ ಸುಕುಲಿರಲಿ ಗೌರವ್ವ ತಂದಿನೆ ಸುಕುಲಿರಲಿ
ಮತ್ತೈದು ಹೂವಾನೇರುಸ್ತ ಮಕ್ಕಳು ಸುಕುಲಿರಲಿ
ಸುತ್ತೈದು ಹೂವಾನೇರುಸ್ತಾ ಗೌರವ್ವ ಮುತ್ತೈತನ ಸುಕುಲಿರಲಿ.

ಫರಾಳ ಹಾಡು –2

ಕಾಚಕಲ್ಲಪ ಚಿಕಣಿ ಮಲ್ಲಪ್ಪ
ಸೋತೆನೆ ತಾಯಿ ಸೋತಿಲೆ ತಾಯಿ
ಗೆದ್ದೆನೆ ತಾಯಿ ಗೆದಿಯಲಿ ಬೇಕೆ
ಕೂಡಲಿ ಬೇಕೆ ಕುದ್ದರಿ ಬೇಕೆ
ಅತಿಮನಿ ಸೋಸಿ ನಡಿಯಲಿ ಬೇಕೆ
ಹೆಣ್ಣೊಂದು ಗಂಡೊಂದು ಹಡಿಯಲಿ ಬೇಕೆ

ಫರಾಳ ಹಾಡು –3

ಯಾರ ಗವರವ್ವ ನೀಲಗಾರ ಗವರವ್ವ
ನಮ್ಮ ಗವರವ್ವ ಮುಟ್ಟಾಗ್ಯಾಳಂದು
ಹಾಲಿಲಿ ತೋಳುದಾರೆ ಹಾಲಾಲಾಗ್ಯಾಳೆ
ತುಪ್ಪು ದಿಲಿ ತೋಳುದಾರೆ ತುಪ್ಪ ತುಪ್ಪಾ ಗ್ಯಾಳೆ
ಕಾಚಕಲ್ಲಪ್ಪ ಚಿನಣಿ ಮಲ್ಲಪ್ಪ
ಭಾವ ಮೈದುನ ಕೂಡಿ ದಂಡಾಡ್ಯಾರೆನೆ
ಸೋತೆನೆತಾಯಿ ಸೋತು ಬೆಳಗಾಗಿ
ಗೆದ್ದೆನೆ ತಾಯಿ ಗೆಲ್ಲಂತುರ ಬೆಳಗಾಗಿ
ಹೆಣ್ಣೊಂದ್ಹಡಿ ಗಂಡೊಂದ್ಹಡಿ ಅತ್ತಿ ಮಾವುನ್ಹೆ ಸೂರ್ಹೇಳು.

ಬೀದರ ಜಿಲ್ಲೆಯ ಸೀಗಿ ಸಂಪ್ರದಾಯ (ಆಚರಣೆ ಕರ್ನಾಟಕದ ಉಳಿದ ಕಡೆಗಳಿಗಿಂತ ಭೀನ್ನವಾಗಿದೆ ಎಂದು ತಿಳಿಯಲು ಪ್ರಸ್ತುತ ಪ್ರಸ್ತಾಪನೆ (ಗ್ರಂಥ) ಕಂಡಂತೆ "ಜಾನಪದ ಸಾಹಿತ್ಯ ದರ್ಶನ ಭಾಗ–10 (ಪ್ರ) ಕ.ಅ. ಪೀಠ ಕ.ವಿ. ಧಾರವಾಡ (1987) ಪುಟ 144" ರಲ್ಲಿಯ "ಶ್ರೀಮತಿ ಶಶಿಕಲಾ ವಸ್ತ್ರದ" ಅವರ ಸೀಗಿ ಹುಣ್ಣಿಮೆ ಮತ್ತು ಗೌರಿ ಹುಣ್ಣಿಮೆ ಎಂಬ ಲೇಖನ ನೋಡಿರಿ

ಮನೆಯ ಹೊರಗೋಡೆಯ ಮೇಲೆ ಚಾಜದಿಂದ
ಐದುದಿನ ಕೈಯಿಂದ ತೆಗೆದ ಸೀಗಮ್ಮನ ಚಿತ್ರ

ಪೂಜೆಗೊಳ್ಳುತ್ತಿರುವ ಜೋಡು ಸೀಗಮ್ಮನ ಕಟ್ಟಿಗೆಯ ಮೂರ್ತಿಗಳು.

ಕಟ್ಟಿಗೆಯ ವಿಶಿಷ್ಟ ಕೆತ್ತನೆಯ ಜೋಡು ಸೀಗಮ್ಮರು.

ಹೂ-ಹಾರದಿಂದ ಅಲಂಕೃತಗೊಂಡಿರುವ ಕಟ್ಟಿಗೆಯ ಬಸಿರು ಗೌರಮ್ಮನ ಮೂರ್ತಿ
ನೈವೇದ್ಯಕ್ಕಾಗಿ ಇಟ್ಟಿರುವ ಸಕ್ಕರಿ ಆರತಿಯ ತಾಟುಗಳು.

ಶಿವಮ್ಮಾ ಅವರಿಂದ ಹಾಡುಗಳ ಸಂಗ್ರಹ ಚಿತ್ರ –೧ ರಲ್ಲಿ ಸಂಶೋಧನ ವಿದ್ಯಾರ್ಥಿನಿ

ಹಲಬರ್ಗಾ ಗ್ರಾಮದ ಮಹಿಳೆಯರಿಂದ ಸೀಗಿ ಗೌರಿ ಹಬ್ಬಗಳ ಮಾಹಿತಿ ಸಂಗ್ರಹ ಚಿತ್ರ–೨ ರಲ್ಲಿ

೩. ವಕ್ತಾರರ ಪಟ್ಟಿ

೧.	ಹೆಸರು	:	ಪಾರ್ವತಿಬಾಯಿ ಶರಣಪ್ಪಾ ಹೊನ್ನಾಳೆ
	ಊರು	:	ಲಾಡಗೇರಿ
	ವಯಸ್ಸು	:	ಎಪ್ಪತ್ತೈದು
	ಜಾತಿ	:	ಲಿಂಗಾಯತ
	ಶಿಕ್ಷಣ	:	ಅಶಿಕ್ಷಿತೆ
	ವೃತ್ತಿ	:	ಗೃಹಿಣಿ
೨.	ಹೆಸರು	:	ಮಲ್ಲಮ್ಮಾ ಕಲ್ಲಪ್ಪಾ ಶಿವಪೂಜೆ
	ಊರು	:	ಧನ್ನೂರ (ಎಚ್)
	ವಯಸ್ಸು	:	ಎಪ್ಪತ್ತು
	ಜಾತಿ	:	ಲಿಂಗಾಯತ
	ಶಿಕ್ಷಣ	:	ಅಶಿಕ್ಷಿತೆ
	ವೃತ್ತಿ	:	ಗೃಹಿಣಿ
೩.	ಹೆಸರು	:	ಸರೋಜನಿ ವೈಜಿನಾಥ ಶಿವಪೂಜೆ
	ಊರು	:	ಧನ್ನೂರ (ಎಚ್)
	ವಯಸ್ಸು	:	ಆರವತ್ತೈದು
	ಜಾತಿ	:	ಲಿಂಗಾಯತ
	ಶಿಕ್ಷಣ	:	ಅಶಿಕ್ಷಿತೆ
	ವೃತ್ತಿ	:	ಗೃಹಿಣಿ
೪.	ಹೆಸರು	:	ಇಂದಿರಾಬಾಯಿ ದೆವೇಂದ್ರಪ್ಪಾ ನೌಬಾದೆ
	ಊರು	:	ಹಲಬರ್ಗಾ
	ವಯಸ್ಸು	:	ಆರವತ್ತೈದು
	ಜಾತಿ	:	ಲಿಂಗಾಯತ
	ಶಿಕ್ಷಣ	:	೯ನೇ ತರಗತಿ
	ವೃತ್ತಿ	:	ಗೃಹಿಣಿ
೫.	ಹೆಸರು	:	ನಿರ್ಮಲಾ ಅರ್ಜುನಪ್ಪಾ ಉಡುಮನಳ್ಳಿ
	ಊರು	:	ರಾಜಗೀರಾ
	ವಯಸ್ಸು	:	ಐವತ್ತೆರಡು
	ಜಾತಿ	:	ಲಿಂಗಾಯತ
	ಶಿಕ್ಷಣ	:	೩ನೇ ತರಗತಿ
	ವೃತ್ತಿ	:	ಗೃಹಿಣಿ

೬. ಹೆಸರು : ಲಕ್ಷ್ಮೀಬಾಯಿ ಬಸವಂತರಾವ ಉಡುಮನಳ್ಳಿ
ಊರು : ರಾಜಗೀರಾ
ವಯಸ್ಸು : ಆರವತ್ತೈದು
ಜಾತಿ : ಲಿಂಗಾಯತ
ಶಿಕ್ಷಣ : ಅಶಿಕ್ಷಿತೆ
ವೃತ್ತಿ : ಗೃಹಿಣಿ

೭. ಹೆಸರು : ಜ್ಯೋತಿ ವೈಜಿನಾಥ ಶಿವಪೂಜೆ
ಊರು : ಧನ್ನೂರ (ಎಚ್)
ವಯಸ್ಸು : ನಲವತ್ತೈದು
ಜಾತಿ : ಲಿಂಗಾಯತ
ಶಿಕ್ಷಣ : ೫ನೇ ತರಗತಿ
ವೃತ್ತಿ : ಗೃಹಿಣಿ

೮. ಹೆಸರು : ಗುಂಡಮ್ಮಾ ಬಸಪ್ಪಾ
ಊರು : ಶೆಮಶೇರಪೂರವಾಡಿ
ವಯಸ್ಸು : ಎಂಭತ್ತು
ಜಾತಿ : ಲಿಂಗಾಯತ
ಶಿಕ್ಷಣ : ಅಶಿಕ್ಷಿತೆ
ವೃತ್ತಿ : ಗೃಹಿಣಿ

೯. ಹೆಸರು : ರೇಣುಕಾ ಶಿವಶಂಕರ
ಊರು : ಲಾಡಗೇರಿ
ವಯಸ್ಸು : ನಲವತ್ತೈದು
ಜಾತಿ : ಲಿಂಗಾಯತ
ಶಿಕ್ಷಣ : ೧೦ನೇ ತರಗತಿ
ವೃತ್ತಿ : ಟೆಲರಿಂಗ್ (ಗೃಹಿಣಿ)

೧೦. ಹೆಸರು : ಶೀಲಾ ರಾಜಶೇಖರ ಭಾಲ್ಕೆ
ಊರು : ಬೀದರ
ವಯಸ್ಸು : ಐವತ್ತು
ಜಾತಿ : ಲಿಂಗಾಯತ
ಶಿಕ್ಷಣ : ೧೦ನೇ ತರಗತಿ
ವೃತ್ತಿ : ಟೈಲರಿಂಗ (ಗೃಹಿಣಿ)

೧೧. ಹೆಸರು : ವಿಜಯಲಕ್ಷ್ಮೀ ರಾಜಕುಮಾರ ಪಸಾರಗೆ
ಊರು : ಚಿಮಕೋಡ್
ವಯಸ್ಸು : ನಲವತ್ತು
ಜಾತಿ : ಲಿಂಗಾಯತ
ಶಿಕ್ಷಣ : ೮ನೇ ತರಗತಿ
ವೃತ್ತಿ : ಗೃಹಿಣಿ

೧೨. ಹೆಸರು : ಅರ್ಪಿತಾ ಸುಮಿತ ಶಿವಪೂಜೆ
ಊರು : ಸವದತ್ತಿ / ಬೀದರ
ವಯಸ್ಸು : ಇಪ್ಪತ್ಮೂರು
ಜಾತಿ : ಲಿಂಗಾಯತ
ಶಿಕ್ಷಣ : ಎಮ್.ಬಿ.ಎ.

೧೩. ಹೆಸರು : ರತ್ನಾ ರುದ್ರಪ್ಪಾ ಹಂಚನಾಳ
ಊರು : ಸವದತ್ತಿ ಬೆಳಗಾಂವಿ ಜಿಲ್ಲೆ
ವಯಸ್ಸು : ನಲವತ್ಮೂರ
ಜಾತಿ : ಲಿಂಗಾಯತ
ಶಿಕ್ಷಣ : ಎಸ್.ಎಸ್.ಎಲ್.ಸಿ.
ವೃತ್ತಿ : ಗೃಹಿಣಿ

೪. ಆಕರ ಗ್ರಂಥಗಳು

೧. ಉತ್ತರ ಕರ್ನಾಟಕದ ಜನಪದ ಸಾಹಿತ್ಯ
ಲೇ: ಎಂ.ಎಂ. ಕಲಬುರ್ಗಿ
ಸಮಾಜ ಪುಸ್ತಕಾಲಯ ಧಾರವಾಡ ೧೯೭೮.

೨. ಕನ್ನಡ ಜಾನಪದ ಗೀತೆಗಳು
ಲೆ: ಡಾ: ಬಿ.ಎಸ್. ಗದ್ದಗಿಮಠ ಕನ್ನಡ ಸಾಹಿತ್ಯ ಪರಿಷತ್ತು
ಚಾಮರಾಜಪೇಟೆ – ೧೯೯೫.

೩. ಮಹಿಳೆ ಒಂದು ಅಧ್ಯಯನ
ಡಾ. ಜ್ಯೋತ್ಸ್ನಾ ಕಾಮತ್
ನವಕರ್ನಾಟಕ ಪ್ರಕಾಶನ ಬೇಂಗಳೂರು ೧೯೯೯.

೪. ಭಾರತೀಯ ಹಬ್ಬಗಳು
ಲೇ : ಶ್ರೀ. ಸಿ.ಎ. ಕೆರಿಮನಿ
ಕರ್ನಾಟಕ ವಿಶ್ವವಿದ್ಯಾಲಯ ಪ್ರಸಾರಾಂಗ ಧಾರವಾಡ

೫. ಜಾನಪದ ಕರ್ನಾಟಕ
ಸಂಪುಟ ೧ ಸಂಚಿಕೆ ೨ ಜೂನ್ ೨೦೦೨
ಸಂಪಾದಕ : ಡಾ. ಮಂಜುನಾಥ ಬೇವಿನಕಟ್ಟಿ.

೬. ಮಹಿಳಾ ಸಂಪದ
ಜಿಲ್ಲಾ ಪ್ರಥಮ ಮಹಿಳಾ ಕನ್ನಡ ಸಾಹಿತ್ಯ ಸಮ್ಮೇಳನ
೨೦೦೫–ಸ್ಮರಣ ಗ್ರಂಥ
ಪ್ರ.ಸಂ.ವಿಶ್ವನಾಥ ವಂಶಾಕೃತಮಠ – ೨೦೦೫
ಪಃ ಸ್ವಾಗತ ಸಮಿತಿ, ಜಿಲ್ಲಾ ಕನ್ನಡ ಪ್ರಥಮ
ಮಹಿಳಾ ಸಾಹಿತ್ಯ ಸಮ್ಮೇಳನ ಬಾಗಲಕೋಟೆ

೭. ದೇಶಿ ಸಂಸ್ಕೃತಿ ಆಯಾಮಗಳು
ಶ್ರೀ ಸಿದ್ದಲಿಂಗೇಶ್ವರ ಪ್ರಕಾಶನ
ಕಲಬುರ್ಗಿ – ೨೦೦೮

೮. ವಿಶ್ವಕೋಶ ಸಂಪುಟ ಐದು
ಕನ್ನಡ ಅಧ್ಯಯನ ಸಂಸ್ಥೆ
ಮೈಸೂರ ವಿಶ್ವವಿದ್ಯಾಲಯ – ೧೯೨೧

೯. ಸೀಗಿ-ಗೌರಿ ಹಾಡುಗಳು
ಡಾ. ಶಕುಂತಲಾ ಸಿದ್ಧಾರಾಮ ದುರಗಿ
ಉಜ್ವಲ ಪ್ರಕಾಶನ-ಗುಲಬರ್ಗಾ
ಗುಲ್ಬರ್ಗಾ – ೫೮೫ ೧೦೨.

೧೦. ಸೀಗಿ ಹಾಡುಗಳು
ರಾಜೇಂದ್ರ ವೀರಶೇಟ್ಟೆಪ್ಪಾ ಯರನಾಳೆ
ಉಪನ್ಯಾಸಕರು ಮತ್ತು ಲೇಖಕರು
ಮುದ್ರಣ – ೧೯೯೪

AKSHARA GRANTHALAYA
ACC.NO. 048850

048850